ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ - ಹುಬ್ಬಳ್ಳಿ.

೨-೫-೪೯

★

ಬೆಲೆ ಎರಡಾಣೆ



ಎಲಿಫೆಂಟದ "ತ್ರಿಮೂರ್ತಿ" ವಿಗ್ರಹ

—ಪುಟ ೮—೯ ನೋ

Karmaveer KANNADA ILLUSTRATED WEEKLY

ಸಂಪುಟ ೨೧ **ಕರ್ಮವೀರ** ಸೋಮವಾರ
ಸಂಚಿಕೆ ೩ ವೈಶಾಖ ಶು. ೪
ತಾರೀಕು ೨—೫—೧೯೪೯

ಕಾಮನ್‌ವೆಲ್ತದಲ್ಲಿ ಹಿಂದುಸ್ತಾನ

ಸ್ವಾತಂತ್ರ್ಯವನ್ನು ಸಂಪಾದಿಸಿ ಸರ್ವತಂತ್ರ ಸ್ವತಂತ್ರ ಪ್ರಜಾರಾಜ್ಯವೆಂದು ಘೋಷಿಸಿದ ಹಿಂದುಸ್ತಾನವು ಕಾಮನ್‌ವೆಲ್ತದಲ್ಲಿ ಉಳಿಯಬಹುದೊ ಎಂಬ ಬಗ್ಗೆ ಲಂಡನದಲ್ಲಿ ಕಳೆದ ವಾರ ಮಹತ್ವದ ಚರ್ಚೆಯಾಯಿತು– ಬ್ರಿಟನ್‌ದ ಮುಖ್ಯಮಂತ್ರಿ ಅಟ್ಲಿಯವರ ಅಧ್ಯಕ್ಷತೆಯಲ್ಲಿ ಸೇರಿದ್ದ ಈ ಪರಿಷತ್ತಿಗೆ ಬ್ರಿಟನ್, ಆಸ್ಟ್ರೇಲಿಯ, ನ್ಯೂಜೀಲಂಡ, ದಕ್ಷಿಣ ಆಫ್ರಿಕಾ, ಹಿಂದುಸ್ತಾನ, ಪಾಕಿಸ್ತಾನ ಮತ್ತು ಸಿಲೋನದ ಮುಖ್ಯ ಮಂತ್ರಿಗಳೂ ಕಾನಡಾದ ವಿದೇಶ ಮಂತ್ರಿಗಳೂ ಮೊದಲಾದವರು ಸಮ್ಮಿಲಿತರಾಗಿದ್ದರು. ಈ ಸಂಬಂಧದಲ್ಲಿ ಹಿಂದುಸ್ತಾನವು ಯಾವ ಬಗೆಯ ಧೋರಣವನ್ನು ವಹಿಸುವದೆಂಬ ಕಡೆಗೆ ಎಲ್ಲರ ಲಕ್ಷ್ಯ ವೇಧಿಸಲ್ಪಟ್ಟಿತ್ತು. ಹಿಂದುಸ್ತಾನವು ಪ್ರಜಾರಾಜ್ಯವಾಗಿ ಉಳಿದುಕೊಂಡೂ ಕಾಮನ್‌ವೆಲ್ತದ ಸದಸ್ಯವಾಗಬಲ್ಲುದು ಎಂಬ ಮಹತ್ವದ ನಿರ್ಣಯವು ಈ ಪರಿಷತ್ತಿನಲ್ಲಿ ಸ್ವೀಕೃತವಾಯಿತು— ಪರಿಷತ್ತು ಸ್ವೀಕರಿಸಿದ ನಿರ್ಣಯದ ಬಗ್ಗೆ ಹೊರಡಿಸಿದ ಅಧಿಕೃತ ಪ್ರಕಟನೆಯಲ್ಲಿ ಮುಖ್ಯವಾಗಿ ಈ ಅಂಶಗಳು ಇವೆ—

೧ ವ್ಯಾಪಾರದ ಸಂಬಂಧದಲ್ಲಿ ಹಿಂದುಸ್ತಾನವು ಪೂರ್ಣವಾಗಿ ಸಾಮ್ರಾಜ್ಯದ ಪ್ರಾಶಸ್ತ್ಯವನ್ನು ಪಡೆಯುವದು.

೨ ಈಗ ಕೆಲ ಸಮಯದಿಂದ ಅಧಿಕೃತವಾಗಿ ಉಪಯೋಗಿಸುತಿರುವ 'ವಸಾಹತು' ಎಂಬ ಶಬ್ದಪ್ರಯೋಗವನ್ನು ಇನ್ನು ಮುಂದೆ ಶಾಶ್ವತವಾಗಿ ಬಿಡಬಹುದು.

೩ ಹಿಂದೀ ನಾಗರಿಕರಿಗೆ ಕಾಮನ್‌ವೆಲ್ತದಲ್ಲಿ ಈಗಿರುವ ಎಲ್ಲ ಹಕ್ಕುಗಳು ಪ್ರಾಪ್ತವಾಗುವವು.

೪ ಈ ಹೇಳಿಕೆಯು ಕಾರ್ಯಕಾರಿಯಾಗುವದಕ್ಕೆ ಕಾಮನ್‌ವೆಲ್ತ ರಾಷ್ಟ್ರಗಳಲ್ಲಿ ಶಾಸನವಾಗುವ ಅವಶ್ಯಕತೆ ಇರಬಾರದು.

೫ ಹಿಂದುಸ್ತಾನವು ಸಾರ್ವಭೌಮ ಪ್ರಜಾರಾಜ್ಯವಾದ ಬಳಿಕ ಅರಸರ ಪ್ರತಿನಿಧಿರೂಪದಲ್ಲಿ ಗವರ್ನರ ಜನರಲ್‌ರ ಸ್ಥಾನವು ಅಳಿದು ಹೋಗುವದು.

೬ ಕಾಮನ್‌ವೆಲ್ತ ರಾಜಧಾನಿಗಳಲ್ಲಿ ಹಿಂದುಸ್ತಾನದ ಪ್ರತಿನಿಧಿಗಳು ಈಗ ಹೈಕಮೀಶನರ ಎಂದು ಕರೆಯಲ್ಪಡುತಿದ್ದು ಮುಂದೆ ಅವರನ್ನು ಏನೆಂದು ಕರೆಯಬೇಕೆಂಬುದನ್ನು ಇನ್ನೂ ನಿರ್ಣಯಿಸಿಲ್ಲ.

ಪರಿಷತ್ತಿನಲ್ಲಿ ಕೂಲಂಕಷವಾಗಿ ಚರ್ಚಿಸಲ್ಪಟ್ಟು ಸ್ವೀಕೃತವಾದ ಈ ಮಹತ್ವದ ನಿರ್ಣಯಕ್ಕೆ ಬ್ರಿಟಿಶ ಸರಕಾರದ ಒಪ್ಪಿಗೆ ಸಿಕ್ಕಿದೆಂದೂ ಪಾರ್ಲಮೆಂಟಿನ ಒಪ್ಪಿಗೆಯನ್ನು ಪಡೆಯಲಾಗುವದೆಂದೂ ಹಿಂದುಸ್ತಾನದ ಘಟನಾ ಸಮಿತಿಯಲ್ಲಿಯೂ ಇದು ಚರ್ಚಿಸಲ್ಪಟ್ಟು ಸ್ವೀಕೃತವಾಗುವುದೆಂದೂ ತಿಳಿಯುತ್ತದೆ.

ಬ್ರಿಟನ್‌ದ ಅರಸನು ಕಾಮನ್‌ವೆಲ್ತ ರಾಷ್ಟ್ರಗಳ ಅಧಿಪತಿ ಎಂದು ಉಳಿದಿದ್ದರೂ ಅದು ಕೇವಲ ಸಂಕೇತರೂಪವಾಗಿದೆಂಬುದು ಈ ನಿರ್ಣಯದಿಂದ ಸ್ಪಷ್ಟವಾಗುವದು. ಹಿಂದುಸ್ತಾನದ ಉಪಮಂತ್ರಿಗಳಾದ ಸರದಾರ ವಲ್ಲಭಭಾಯಿಯವರು ಪತ್ರಿಕಾ ಪರಿಷತ್ತಿನಲ್ಲಿ ಈ ಒಡಂಬಡಿಕೆಯನ್ನು ಸ್ಪಷ್ಟೀಕರಿಸುತ್ತ ಮುಖ್ಯ ಮಂತ್ರಿ ಪಂಡಿತ ನೆಹರುಗಳ ವೈಯಕ್ತಿಕ ವಿಜಯವಿದು ಎಂದು ಹೇಳಿದ್ದು ಯಥಾಯೋಗ್ಯವಾಗಿದೆ. ಪಂಡಿತ ನೆಹರು ಇವರು ಸ್ವತಂತ್ರ ಸಾರ್ವಭೌಮ ರಾಷ್ಟ್ರದ ಹಕ್ಕು ಬಾಧ್ಯತೆಗಳಿಗೆ ಭಂಗ ಬಂದೆ ಕಾಮನ್‌ವೆಲ್ತ ರಾಷ್ಟ್ರಗಳಲ್ಲಿ ಹಿಂದುಸ್ತಾನ ಎಂತು ಉಳಿಯಬಹುದೆಂಬ ಬಗ್ಗೆ ದೀರ್ಘ ವಿಚಾರ ಮಾಡಿ ಬ್ರಿಟಿಶ ಸರಕಾರದ ಮತ್ತು ಇತರ ರಾಷ್ಟ್ರಗಳ ಮುಖ್ಯ ಮಂತ್ರಿಗಳನ್ನು ತಮ್ಮ ಧೋರಣೆಗೆ ಒಲಿಸಿಕೊಂಡದ್ದು ಅವರ ಮುತ್ಸದ್ದಿತನದ ದ್ಯೋತಕವಾಗಿದೆ- ಬ್ರಿಟನ್‌ದ ಅರಸನು ಕಾಮನ್‌ವೆಲ್ತದ ಅಧಿಪತಿ ಎಂದು ಒಪ್ಪಿಕೊಂಡ ಬಳಿಕ ಹಿಂದುಸ್ತಾನದ ಭಾವೀ ಅಧ್ಯಕ್ಷ ಮೊದಲಾದವರ ಆಯ್ಕೆಗೆ ಅವನ ಮನ್ನಣೆ ಪಡೆಯಬೇಕಾಗುವುದೆಂದೂ ಮಹತ್ವದ ಸಂದರ್ಭದಲ್ಲಿ ಇದರಿಂದ ಘರ್ಷಣೆಯುಂಟಾಗಬಹುದೆಂದೂ ಅನೇಕರು ಶಂಕಿಸಿದ್ದರು. ಆದರೆ ಪಂಡಿತ ನೆಹರು ಇವರ ಮುತ್ಸದ್ದಿತನದ ಪರಿಣಾಮವಾಗಿ ಹಿಂದುಸ್ತಾನದ ಭಾವೀ ಅಧ್ಯಕ್ಷನ ಆಯ್ಕೆಗೆ ಕಾಮನ್‌ವೆಲ್ತದ ಅಧಿಪತಿಯ ಒಪ್ಪಿಗೆ ಕೂಡ ಅವಶ್ಯವಿಲ್ಲವೆಂದು ನಿರ್ಣಯಿಸಲ್ಪಟ್ಟದ್ದರಿಂದ ಮೇಲೆ ಉಲ್ಲೇಖಿಸಿದ ಸಂಶಯಕ್ಕೂ ಅವಕಾಶವಿಲ್ಲದಂತಾಗಿದೆ.

ತಾನು ಕಾಮನ್‌ವೆಲ್ತದಲ್ಲಿ ಉಳಿದು ತನಗೆ ಸರಿಕಂಡ ರಾಷ್ಟ್ರದೊಡನೆ ಒಪ್ಪಂದ ಮಾಡಿಕೊಳ್ಳುವ ಹಕ್ಕು ಈ ಹೊಸ ಒಡಂಬಡಿಕೆಯಿಂದ ಹಿಂದುಸ್ತಾನಕ್ಕೆ ಪ್ರಾಪ್ತವಾಗಿವೆ. ಈ ಹೊಸ ಒಡಂಬಡಿಕೆಯಿಂದ ಕಾಮನ್‌ವೆಲ್ತ ರಾಷ್ಟ್ರಗಳ ಮಿತ್ರತ್ವ ಮತ್ತು ಸಹಕಾರದ ಲಾಭಗಳ ಜೊತೆಗೆ ಕೆಲವೊಂದು ಹೊಣೆಗಳನ್ನೂ ಅದು ಹೊರಬೇಕಾಗುವದು. ಆದರೆ ಹೀಗೆ ಹೊಣೆಯನ್ನು ಹೊತ್ತುಕೊಂಡರೂ ಹಿಂದುಸ್ತಾನವು ಶಾಂತಿ ಮತ್ತು ಅನಾಕ್ರಮಣದ ತನ್ನ ಧೋರಣವನ್ನು ಬಿಟ್ಟುಕೊಡಲಾರದು. ಸರದಾರ ವಲ್ಲಭಭಾಯಿಯವರು ಈ ಸಂಬಂಧದಲ್ಲಿ ಸ್ಪಷ್ಟೀಕರಣ ಮಾಡುತ್ತ ಹಿಂದುಸ್ತಾನವು ಯಾವಾಗಲೂ ಶಾಂತಿಪ್ರಿಯ ಪಕ್ಷಕ್ಕೇ ತನ್ನ ಬೆಂಬಲವನ್ನು ಕೊಡುವದೆಂದು ಮೇಲೆ ಉಲ್ಲೇಖಿಸಿದ ಸುದ್ದಿಗಾರರ ಸಭೆಯಲ್ಲಿ ಹೇಳಿರುವರು. ಕಾಮನವೆಲ್ತದಲ್ಲಿದ್ದ ಯಾವ ರಾಷ್ಟ್ರವೂ ಫೇಸಿಸ್ಟ ರಾಷ್ಟ್ರವಾಗಿ ಪರಿಣಮಿಸಲಾರದೆಂದೂ ಈ ಒಡಂಬಡಿಕೆಯಿಂದ ಪರದೇಶಗಳಲ್ಲಿ ನೆಲೆಸಿದ ಹಿಂದೀಯರ ಪರಿಸ್ಥಿತಿ ಹೆಚ್ಚು ಕೆಡಲಾರದೆಂದೂ ಸರದಾರ ವಲ್ಲಭಭಾಯಿಯವರು ಹಾರಯಿಸಿದ್ದಾರೆ. ಪರಸ್ಪರ ಸ್ನೇಹ ಸೌಹಾರ್ದದಿಂದ ಈ ಸಂಸ್ಥೆಯು ಮೂರ್ತಸ್ವರೂಪಕ್ಕೆ ಬಂದಿದ್ದು ಅದೇ ಭಾವನೆಯಿಂದಲೆ ಎಲ್ಲ ರಾಷ್ಟ್ರಗಳು ನಡೆದದ್ದಾದರೆ ಬಾಳಬಲ್ಲದು ಮತ್ತು ನಾವೆಲ್ಲರೂ ಅಂತು ಈ ಸಂಸ್ಥೆಯನ್ನು ನಡೆಯಿಸಿಕೊಂಡು ಹೋಗುವೆವೆಂದು ಭಾವಿಸುವಾ ಎಂದೂ ಸರದಾರರು ಹೇಳಿರುವರು.

ಹಿಂದುಸ್ತಾನದ ಇಂದಿನ ಪರಿಸ್ಥಿತಿಯನ್ನು ನೆನೆದರೆ ಅದು ಕಾಮನ್‌ವೆಲ್ತ ರಾಷ್ಟ್ರಗಳ ಸಂಬಂಧವನ್ನು ಇಟ್ಟುಕೊಂಡದ್ದು ಮುತ್ಸದ್ದಿತನದ ಮಾತಾಗಿದೆ. ಆದರಲ್ಲಿಯೂ ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ, ಸಿಲೋನ ಮೊದಲಾದವುಗಳು ಕಾಮನ್‌ವೆಲ್ತದಲ್ಲಿ ಉಳಿದಿರುವಾಗ ಹಿಂದುಸ್ತಾನವು ಅದರಿಂದ ಸಿಡಿದು ಹೋಗಿದ್ದರೆ ಅನೇಕ ಪ್ರಸಂಗಗಳಲ್ಲಿ ತೊಡಕು ಉಂಟಾಗಬಹುದಾಗಿತ್ತು. ಅದರಲ್ಲಿಯೂ ಕಾಶ್ಮೀರ ಸಮಸ್ಯೆ ಇನ್ನೂ ಬಗೆಹರಿಯದಿರುವಾಗ, ಸಾರ್ವಭೌಮ ಪ್ರಜಾ ರಾಜ್ಯದ ಭ್ರಮೆಯಿಂದ ಕಾಮನ್‌ವೆಲ್ತ ರಾಷ್ಟ್ರಗಳ ಸಂಬಂಧವನ್ನು ಕಡಿದುಕೊಂಡಿದ್ದರೆ ಹಿಂದುಸ್ತಾನದ ಮುತ್ಸದ್ದಿತನ ದಿವಾಳಿ ತೆಗೆದಂತಾಗುತಿದ್ದಿತು. ಆ ಬಗೆಯ ಕಲಂಕ ಹಿಂದುಸ್ತಾನಕ್ಕೆ ಹತ್ತದಂತೆ ಹಿಂದುಸ್ತಾನದ ಮುಂದಾಳುಗಳು ನೋಡಿಕೊಂಡದ್ದು ಅಭಿನಂದನೀಯವಾಗಿದೆ. ಈ ಒಡಂಬಡಿಕೆಯ ಪರಿಣಾಮವಾಗಿ ಹಿಂದುಸ್ತಾನವು ಹೆಜ್ಜೆಚ್ಚ ಪ್ರಗತಿ ಹೊಂದಲೆಂದು ಈ ಸಮಯದಲ್ಲಿ ಹಾರಯಿಸಬೇಕಾಗಿದೆ.

ರಾಜೇಂದ್ರಪ್ರಸಾದರ ಸಂಚಾರ

ಘಟನಾ ಸಮಿತಿಯ ಅಧ್ಯಕ್ಷರೂ ಗಾಂಧೀ ಸ್ಮಾರಕ ನಿಧಿಮಂಡಳದ ಅಧ್ಯಕ್ಷರೂ ಆಗಿರುವ ಡಾ. ರಾಜೇಂದ್ರಪ್ರಸಾದರು ಕಳೆದ ವಾರ ಕರ್ನಾಟಕದಲ್ಲಿ ಸಂಚಾರ ಮಾಡಿ ನಿಧಿಯನ್ನು ಸಂಗ್ರಹಿಸಿದ್ದಲ್ಲದೆ ನಿಧಿಯ ಉದ್ದೇಶವನ್ನೂ ಜನತೆಗೆ ಅರುಹಿದರು. ರಾಜೇಂದ್ರ ಬಾಬುಗಳಿಗೆ ಈ ಸಂಚಾರದಲ್ಲಿ ಕೂಡಿದ ಗಾಂಧೀ ನಿಧಿಯ ಅಂಕಿಗಳು ಸಂಪೂರ್ಣವಾಗಿ ಈ ವರೆಗೆ ನಮ್ಮ ಕೈಗೆ ಬಂದಿರದಿದ್ದರೂ ಕರ್ನಾಟಕಸ್ಥರು ಈ ಸಂಬಂಧದಲ್ಲಿ ಹಿಂದೆ ಬೀಳಲಿಲ್ಲೆಂದು ಹೇಳಬಹುದಾಗಿದೆ. ಕಾರ್ಯಕರ್ತರು ಮೊದಲಿನಿಂದ ಇನ್ನಷ್ಟು ಜೋರಿನಿಂದ ಪ್ರಯತ್ನಿಸಿದ್ದರೆ ಇನ್ನೂ ಹೆಚ್ಚು ಹಣ ಸಂಗ್ರಹವಾಗುತಿತ್ತೆಂದು ನಮ್ಮ ಅಭಿಪ್ರಾಯ. ಅದೇನೇ ಇದ್ದರೂ ಕರ್ನಾಟಕಸ್ಥರು ಸರ್ವೋದಯ ಕಾರ್ಯಕ್ಕಾಗಿಯೆ ಮೀಸಲಾಗಿರುವ ಈ ನಿಧಿಗೆ ತಮ್ಮ ಮುಡಿಪನ್ನು ಸಲ್ಲಿಸಿದ್ದು ಸ್ತುತ್ಯವಾಗಿದೆ. ಕರ್ನಾಟಕಸ್ಥರ ಈ ಮುಡಿಪನ್ನು ರಾಜೇಂದ್ರ ಬಾಬುಗಳು ಸಂತೋಷದಿಂದ ಸ್ವೀಕರಿಸಿ ಈ ಸಂಚಾರದ ಸಭೆಗಳಲ್ಲಿ ಧನ್ಯವಾದಗಳನ್ನರ್ಪಿಸಿದ್ದುಂಟು. ಕರ್ನಾಟಕದ ಜೀವಾಳದ ಪ್ರಶ್ನೆಯಾದ ಕರ್ನಾಟಕ ಏಕೀಕರಣದ ಬಗ್ಗೆಯೂ ಅವರು ಸಹಾನುಭೂತಿಯನ್ನು ವ್ಯಕ್ತಪಡಿಸಿರುವರು. ಹುಬ್ಬಳ್ಳಿ ನಗರ ಸಭೆಯವರು ಕೊಟ್ಟ ಮಾನಪತ್ರಕ್ಕೆ ಉತ್ತರ ಕೊಡುತ್ತ ಅವರು '**ಕರ್ನಾಟಕ ಪ್ರಾಂತ ರಚನೆಯ ಬೇಡಿಕೆ ಇಂದು ನಿನ್ನಿನದಲ್ಲ, ಕನ್ನಡಿಗರ ಈ ಬೇಡಿಕೆಯನ್ನು ಮನ್ನಿಸಲು ಪರಿಸ್ಥಿತಿಯ ಮೂಲಕ ಕೆಲವೊಂದು ತೊಂದರೆಗಳುಂಟಾಗಿವೆ. ಬುದ್ಧಿಪೂರ್ವಕವಾಗಿ ಈ ತೊಂದರೆಗಳನ್ನು ಯಾರೂ ತಂದೊಡ್ಡಿರುವದಿಲ್ಲ. ಒಡ್ಡಲಾರರು. ಕನ್ನಡಿಗರ ಈ ಬೇಡಿಕೆಯನ್ನು ಉಪೇಕ್ಷಿಸುವ ವಿಚಾರವೂ ಇಲ್ಲ. ಆದರೆ ಪರಿಸ್ಥಿತಿಯ ಅನಾನುಕೂಲತೆಯ ಮೂಲಕ ಉಂಟಾದ ಈ ತೊಂದರೆಗಳ ನಿವಾರಣವಾಗುವ ವರೆಗೆ ಕನ್ನಡಿಗರು ತಾಳ್ಮೆಯನ್ನು ವಹಿಸಬೇಕು**' ಎಂದು ಹೇಳಿದರು. ನಿಯಂತ್ರಣಗಳನ್ನು ತೆಗೆಯಿರಿ ಎಂದು ಕೇಳಿಕೊಂಡದ್ದಕ್ಕೆ ಮಾನ್ಯ ಮುಂದಾಳುಗಳು, 'ನಿಯಂತ್ರಣಗಳನ್ನು ತೆಗೆಯುವದೂ ಬಿಡುವದೂ ಜನರ ಕೈಯಲ್ಲಿಯೇ ಇದೆ. ಜನರ ಪ್ರವೃತ್ತಿಯು ಕಳ್ಳಪೇಟೆಯತ್ತ ಇರುವ ವರೆಗೆ ಇದು ಶಕ್ಯವಾಗದು. ರೈತರೂ ವ್ಯಾಪಾರಿಗಳೂ ಕೊಳ್ಳುವವರೂ ಇವರೆಲ್ಲ ಕಳ್ಳಪೇಟೆಯ ವ್ಯಾಪಾರದಲ್ಲಿ ತೊಡಗಿರುವರು. ದೇಶದಲ್ಲಿ ಆಹಾರ ಧಾನ್ಯವಿಲ್ಲೆಂದು ಕೊರತೆಯಾಗಿಲ್ಲ. ಆದರೆ ಆಹಾರ ಪದಾರ್ಥಗಳು ಆಯಾ ಜನರಿಗೆ ಸರಿಯಾಗಿ ಹಂಚಲ್ಪಡದಿರುವ ಮೂಲಕ ಕೊರತೆಯಾಗುತಿದೆ' ಎಂದು ಅವರು ಅಭಿಪ್ರಾಯಪಟ್ಟರು. ಈ ಎರಡು ಮಹತ್ವದ ಸಮಸ್ಯೆಗಳ ಬಗ್ಗೆ ಮಾನ್ಯ ಮುಂದಾಳುಗಳು ಪಟ್ಟ ಅಭಿಪ್ರಾಯದತ್ತ ಕನ್ನಡಿಗರು ಸಹಾನುಭೂತಿಯಿಂದ ನೋಡುವದು ಅವಶ್ಯವಾಗಿದೆಂದು ಬೇರೆ ಹೇಳಬೇಕಿಲ್ಲ

× × ×

ಸಿಲೋನ ಸರಕಾರವು ಇತ್ತೀಚೆ ಸ್ವೀಕರಿಸಿದ ಎರಡು ಕಾಯಿದೆಗಳು ಅತ್ಯಂತ ಪ್ರತಿಗಾಮಿಯಾಗಿದ್ದು ಯಾವ ಸ್ವಾಭಿಮಾನಿಯೂ ಒಪ್ಪತಕ್ಕಂತಹವಾಗಿಲ್ಲ. ಸಿಲೋನದಲ್ಲಿ ಜನ್ಮತಃ ಇರುವವರು ಮತ್ತು ಹಿಂದುಸ್ತಾನ ಪಾಕಿಸ್ತಾನಗಳಿಂದ ಬಂದು ನೆಲಸಿದವರು ಹೀಗೆ ವರ್ಗೀಕರಣಮಾಡಿ ಹಿಂದುಸ್ತಾನ ಪಾಕಿಸ್ತಾನಗಳಿಂದ ಬಂದು ನೆಲಸಿದವರು ತಮ್ಮ ಹೆಸರನ್ನು ರಜಿಸ್ಟರ ಮಾಡಿಸಬೇಕೆಂದು ಈ ಕಾಯಿದೆಯಲ್ಲಿ ವಿಧಿಸಲಾಗಿದೆ. ಈ ಬಗೆಯ ಭೇದಭಾವವಿಲ್ಲದೆ ಸಿಲೋನಿನಲ್ಲಿರುವವರಿಗೆಲ್ಲ ಪೂರ್ಣ ನಾಗರಿಕತ್ವದ ಹಕ್ಕು ಬಾಧ್ಯತೆಗಳು ದೊರೆಯತಕ್ಕದ್ದೆಂದು ಸಿಲೋನಿನಲ್ಲಿಯ ಹಿಂದೀರಾಷ್ಟ್ರೀಯ ಮಹಾಸಭೆಯವರು ನಿರ್ಣಯಿಸಿದ್ದಲ್ಲದೆ ಯಾರೂ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬಾರದೆಂದೂ ಗೊತ್ತುಪಡಿಸಿಕೊಂಡಿದ್ದಾರೆ. ಸಿಲೋನಿನಲ್ಲಿಯ ಹಿಂದೀಯರ ಪ್ರಶ್ನೆ ದಕ್ಷಿಣ ಆಫ್ರಿಕೆಯಲ್ಲಿಯ ಹಿಂದೀಯರ ಪ್ರಶ್ನೆಯಂತೆಯೇ ಇದೆ. ಸಿಲೋನಿನಲ್ಲಿಯ ಒಟ್ಟು ೬೦ ಲಕ್ಷ ಜನಸಂಖ್ಯೆಯಲ್ಲಿ ನೂರಕ್ಕೆ ಹತ್ತು ಜನರು ಮಾತ್ರ ಹಿಂದೀಯರಿದ್ದಾರೆ. ಸಿಲೋನಿನಲ್ಲಿಯ ಚಹಮತ್ತುರಬ್ಬರ ಉದ್ಯೋಗಗಳ ಅಭಿವೃದ್ಧಿಗಾಗಿ ಈ ಹಿಂದೀ ಕೂಲಿಕಾರರನ್ನು ಕರೆಸಿಕೊಳ್ಳಲಾಗಿದೆಯಲ್ಲದೆ ತಾವಾಗಿಯೆ ಅವರೇನು ಅಲ್ಲಿಗೆ ಹೋದವರಲ್ಲ. ಅವರು ತಮ್ಮ ಬೆವರನ್ನು ಸುರಿಸಿ ಸಿಲೋನಿನಲ್ಲಿ ಈ ಉದ್ಯೋಗಗಳನ್ನು ಬೆಳಸಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಈ ಕೂಲಿಕಾರರೆಲ್ಲ ಇನ್ನು ಮುಂದೆ ತಮ್ಮ ಹೆಸರು ನೊಂದಾಯಿಸಿಕೊಳ್ಳಬೇಕೆಂದು ವಿಧಿಸುವದು ಅನ್ಯಾಯದ ಪರಮಾವಧಿಯಲ್ಲವೆ? ಈ ಕಾಯದೆಗಳ ಸಂಬಂಧದಲ್ಲಿ ಹಿಂದುಸ್ತಾನದ ಮುಖ್ಯಮಂತ್ರಿಗಳು ಕಳಿಸಿದ ಪ್ರತಿಭಟನಾಪತ್ರಕ್ಕೆ ಸಿಲೋನ ಮುಖ್ಯಮಂತ್ರಿಗಳು ಕೊಟ್ಟ ಉತ್ತರವು ಯಾವ ಬಗೆಯಿಂದಲೂ ಸಮಾಧಾನಕಾರಿಯಾಗಿಲ್ಲ. ಸಿಲೋನ ಸರಕಾರದವರಿಗೆ ಇನ್ನಾದರೂ ಸುಬುದ್ಧಿ ಬಂದು ಈ ಪ್ರತಿಗಾಮಿ ಕಾಯದೆಗಳನ್ನು ರದ್ದುಪಡಿಸುವಂತಾಗಲೆಂದು ಬಯಸುತ್ತೇವೆ.

× × ×

ಶ್ರೀ ದಿವಾಕರರ ಸನ್ಮಾನಾರ್ಥವಾಗಿ ಧಾರವಾಡದಲ್ಲಿ ಶ್ರೀ ಕರಮರಕರ ಮತ್ತು ಹುಕ್ಕೇರಿಕರರು ಏರ್ಪಡಿಸಿದ್ದ ಸತ್ಕಾರ ಸಮಾರಂಭದಲ್ಲಿ ಮಾತಾಡುತ್ತ ಅಖಂಡ ಕರ್ನಾಟಕ ಪ್ರಾಂತದ ರಚನೆಗಾಗಿಯೆ ಕನ್ನಡಿಗರೆಲ್ಲ ದುಡಿಯಬೇಕೆಂದು ಹೇಳಿದರು. ಒಕ್ಕೂಟ ಕರ್ನಾಟಕ ಭಾಗವನ್ನು ಮಾತ್ರ ಹೊಸ ಕರ್ನಾಟಕ ಪ್ರಾಂತದಲ್ಲಿ ಸೇರಿಸಿರೆಂದು ಕೇಳುವದು ಕೇವಲ ಅಧಿಕಾರ ಸ್ಥಳಕ್ಕಾಗಿ ಎಂದು ದೂರಲು ಅವಕಾಶ ಮಾಡಿಕೊಡುವ ಸಂಭವವಿದೆಯಲ್ಲದೆ ಭಾಷಾನ್ವಯ ಪ್ರಾಂತ ರಚನೆಯೆಂಬ ತತ್ವವನ್ನೇ ಬಿಟ್ಟುಕೊಟ್ಟಂತಾಗುವದು. ಮತ್ತು ಈಗಿದ್ದ ಮೈಸೂರು ಕನ್ನಡ ಧಾರವಾಡ ಕನ್ನಡ ಮೊದಲಾದ ಭೇದಗಳೂ ಹಾಗೆಯೇ ಉಳಿಯುವವು. ಆದುದರಿಂದ ಅಖಂಡ ಕರ್ನಾಟಕ ಪ್ರಾಂತ ರಚನೆಗಾಗಿಯೆ ನಾವೆಲ್ಲ ಪ್ರಯತ್ನಿಸಬೇಕೆಂದು ನುಡಿದರು. ಆದರೆ ಈ ಚಳವಳಿಯ ಸ್ವರೂಪವು ಮಾತ್ರ ಹಿಂದಿನಂತೆ ಅಸಹಕಾರವಾಗಿರಬಾರದು. ಪ್ರಾತಿನಿಧಿಕ ಸಂಸ್ಥೆಗಳ ಮುಖಾಂತರ ಸಂಬಂಧಿಸಿದ ಸರಕಾರಗಳ ಹಾಗೂ ಜನತೆಯ ಮನವನ್ನೊಲಿಸಿ ಗುರಿಯನ್ನು ಸಾಧಿಸಿಕೊಳ್ಳಬೇಕು ಎಂದೂ ಅವರು ಹೇಳಿದರು. ಕನ್ನಡಿಗರು ಇತ್ತ ಗಮನಿಸುವದವಶ್ಯವಾಗಿದೆ.

ಕರ್ಮವೀರ

ಪ್ರತಿ ಸೋಮವಾರ ಹುಬ್ಬಳ್ಳಿಯಿಂದ ಹೊರಡುವ ವಾರಪತ್ರಿಕೆ

ಸಂಸ್ಥಾಪಕರು :
ಶ್ರೀ. ರಂ. ರಾ. ದಿವಾಕರ

ಸಂಪಾದಕರು :
ಶ್ರೀ. ಹ. ರಾ. ಪುರೋಹಿತ

ಹೊಸ ವರ್ಗಣಿ ವಿವರಗಳು :

[illegible]

ಬಿಡಿ ಸಂಚಿಕೆ : ೨ ಆಣೆ

[illegible]

ಸೂಚನೆ : ಈವರೆಗೆ ವರ್ಷಕ್ಕೆ ೪ ಬಾರ ರಜೆ ತೆಗೆದುಕೊಳ್ಳುವ ಪರಿಪಾಠವಿತ್ತು. ಓದುಗರಿಗೆ ಇದರಿಂದ ತೊಂದರೆಯಾಗುವದನ್ನರಿತು ಇನ್ನು ಮುಂದೆ ರಜೆಗಳನ್ನು ರದ್ದುಗೊಳಿಸಿ ವರ್ಷದಲ್ಲಿ ೫೨ ಸಂಚಿಕೆಗಳನ್ನು ತೆಗೆಯಲಾಗುವದು. ವಿಶೇಷ ಸಂಚಿಕೆಗಳನ್ನು ಹೊರಡಿಸಿದರೆ ಅದರ ಬಗ್ಗೆ ಪ್ರತ್ಯೇಕ ಬೆಲೆಯನ್ನು ಕೊಡಬೇಕಾಗುವದು.

ಚಂದಾದಾರರು : ತಮ್ಮ ವರ್ಗಣಿ, ಸಂಚಿಕೆಗಳ ತಲುಪುವಿಕೆಯ ಸಂಬಂಧದ ದೂರು ಮೊದಲಾದವುಗಳ ಬಗ್ಗೆ ಪತ್ರ ವ್ಯವಹಾರವನ್ನು ಮಾಡುವಾಗ ವಿಳಾಸದ ಚೀಟಿಯ ಮೇಲಿರುವ ಚಂದಾ ನಂಬರುಗಳನ್ನು ಉಲ್ಲೇಖಿಸಬೇಕು- ಇಲ್ಲದಿದ್ದರೆ ಸಾವಿರಗಟ್ಟಳೆ ಚಂದಾದಾರರಲ್ಲಿ ನಿಮ್ಮ ಹೆಸರನ್ನು ಕಂಡು ಹಿಡಿಯುವದು ಸಾಧ್ಯವಾಗದು.

— ವ್ಯವಸ್ಥಾಪಕ,
" ಕರ್ಮವೀರ " ಹುಬ್ಬಳ್ಳಿ.

ಮುತ್ತುಗಳ ಬೆಲೆ

ನವರತ್ನಗಳ ಬೆಲೆಗಿಂತಲೂ ಮುತ್ತುಗಳ ಬೆಲೆ ಜಾಸ್ತಿಯೆಂದರೆ ನಂಬುವಿರಾ? ನೀವು ನಂಬದಿದ್ದಾಕ್ಷಣ ಅದು ಸುಳ್ಳೆನ್ನಲುಬಂದೀತೇ? ಬಿಡುಕುವ ಖರ್ಚು ಜಗತ್ತಿನ ಎಲ್ಲೆಡೆಗಳಿಗಿಂತ ಹಾಲಿವುಡ್ಡಿನಲ್ಲಿ ಹೆಚ್ಚಂತೆ. ಏಕೆ ಗೊತ್ತೆ? ಅಲ್ಲಿರುವವರೆಲ್ಲ ಪ್ರೇಮ ವ್ಯಾಪಾರಿಗಳು, ರೂಪಾಜೀವೆಯರು. ಪರಸ್ಪರ "ಪ್ರೇಮವೇ" ಅಲ್ಲಿಯ ಸ್ತ್ರೀ ಪುರುಷರ ಶೃಂಗಾರ ಜೀವನದ ಮೂಲ ಮಂತ್ರ. ನಾಗರಿಕತೆಯಗೌರೀಶಂಕರ ಇಂತಿದೆ!

ಯುದ್ಧಕ್ಕೆ ಮೊದಲು ಸಿನೆಮದವರಿಗೆ ಒಬ್ಬ ನಟನಿಂದ ಒಬ್ಬ ನಟಿಗೆ ಮುತ್ತು ಕೊಡಿಸಲು ೩೦೦೦ ಡಾಲರುಗಳ ವೆಚ್ಚ ಬೀಳುತ್ತಿತ್ತಂತೆ. ಈಗ ಒಬ್ಬ ನಿರ್ಮಾತನು ಅದಕ್ಕೆ ೧೦ ರಿಂದ ೧೫ ಸಾವಿರದ ವರೆಗೆ ತೆರಬೇಕಂತೆ. ೧ ಡಾಲರಿಗೆ ಹೆಚ್ಚು ಕಡಿಮೆ ೩॥ ರೂಪಾಯಿ— ನೋಡಿಕೊಳ್ಳಿರಿ. ಇಷ್ಟು ಸಂಪಾದನೆ ಮಾಡುವ ನಟನಟಿಯರು ಅಥವಾ ತಾರೆಯರು ಅಷ್ಟೇ ಖರ್ಚು ಮಾಡಬೇಕಾಗುತ್ತದೆ ಊಟಕ್ಕೆ. ಊಟದ ಬೆಲೆ ನೂರಕ್ಕೆ ಇನ್ನೂರು ಮುನ್ನೂರು ಪಟ್ಟು ಹೆಚ್ಚಿದೆ. ಇದರಿಂದ ಲಾಭವೆಷ್ಟು, ನಷ್ಟವೆಷ್ಟು ವಿಚಾರ ಮಾಡೋಣಾಗಲಿ.

ಶೃಂಗಾರದ ಬರಿಯ ಒಂದು ನೋಟ, ಅನಂತರ ಹಾವ, ಭಾವ, ಮುತ್ತುಮಾಣಿಕ ಎಲ್ಲದಕ್ಕೂ ರೊಕ್ಕ ತೆರಬೇಕು ಸಿನೆಮ ನಿರ್ಮಾತರು. ಏಕೆಂದರೆ, ಅಂಥ ದೃಶ್ಯ ತೋರಿಸಿದರೇ ಅವರಿಗೆ ಕುಬೇರಗಿರಿ ಸಾಧ್ಯ; ಇಲ್ಲವಾದರೆ ಅಷ್ಟಕ್ಕಷ್ಟೆ. ಎಂಥ ರಸಿಕರಿರಬಹುದು ಅಮೇರಿಕದ ಜನರು!

“ ಒಂದು ಹಕ್ಕಿ, ಒಂದು ಹಾಡು
ಒಂದು ಮಿಂಚು ಗೊಂಚಲು—
ಎಂದು ಬಯಸಿದವನಿಗಿಹುದು
ಇಂದು ಸೊಬಗು ಹಂಚಲು ! ”

ಎಂಬ ಸ್ಫೂರ್ತಿವಂತ ಕವಿಗಳೇ ಇರಬೇಕಲ್ಲವೇ ಅಲ್ಲಿಯ ಸಾಮಾಜಿಕರು! ಟೈರೋನ್‌ಪವರ್ ಮತ್ತು ಆರ್ಸನ್‌ವೆಲ್ಸರು ವಾಂಡಾಹೆಂಡ್ರಿಕ್ಸ ಳನ್ನು ಒಲಿಸಿಕೊಳ್ಳುವುದನ್ನು ತೋರಿಸಲು ೧೨೧೦೦೦ ಡಾಲರು ವೆಚ್ಚವಾಗುವುದು. “ಡೇಟ್ಸಿಂ ವೈಫ್ "ಎಂಬ ಚಿತ್ರದಲ್ಲಿ ಲಿಂಡಾಡಾರ್ನೆಲ್ಲಳಿಗೆ ಟೈರೋನ್ ಪವರ್ ಮುತ್ತುಕೊಡುವುದನ್ನು ಚೆನ್ನಾಗಿ ತೋರುವಂತೆ ಮಾಡಲು ನಿರ್ಮಾತನು ೨೬೦೦ ಡಾಲರುಗಳ ಖರ್ಚನ್ನು ಹೊರಬೇಕಾಯಿತು. ‘ಟ್ವೆಂಟಿಯತ್ ಸೆಂಚುರಿ ಫಾಕ್ಸ್’ ಕಂಪನಿಗೆ ಬೇರೆ ಬೇರೆ ಚಿತ್ರಗಳಲ್ಲಿ ವ್ಯಾನನು ಲೊರೆಟ್ಟಾಳನ್ನು ಒಲಿಸಿಕೊಂಬ ದೃಶ್ಯಗಳನ್ನು ತೆಗೆಯಲು ಒಟ್ಟು ೫,೪೩,೦೦೦ ಪೌಂಡುಗಳು ಖರ್ಚಾದವು. ಒಂದು ಪೌಂಡಿಂಪರೆ ಹದಿಮೂರು ರೂಪಾಯಿ ಐದಾಣೆ ನಾಲ್ಕು ಪೈ. ಇಂಥ ರಸಿಕತೆ ಪಾಶ್ಚಾತ್ಯರಲ್ಲಿದೆ ಯೆಂಬುದನ್ನು ಕಂಡೇ ಬೇಗಂ ಲಿಯಾಖತ್ ಅಲಿಖಾನರು ಒಂದು ಮುಗುಳ್ನಗೆ ನಗಬೇಕೆಂದು ಅಂಡನ್ನಿನಲ್ಲಿ ಛಾಯಾಗ್ರಾಹಕರು ಕೇಳಿದಾಗ "ತೆಗೆದುಕೊಳ್ಳಿ ನನ್ನ ೧೦ ಲಕ್ಷ ಡಾಲರ್ ಬೆಲೆಯ ಮುಗುಳ್ನಗೆಯನ್ನು" ಎಂದು ಚೆನ್ನಾಗಿ ನಕ್ಕುಬಿಟ್ಟಳು!

—ಪ್ರೇಮದಾಸ

ಅಂತರ್ - ರಾಷ್ಟ್ರೀಯ

ಪೀಪಲ್ಸ್‌ಕೋರ್ಟ್ ಅಥವಾ ಜನತಾನ್ಯಾಯಾಲಯ

ಮತದಾನ ಮತ್ತು ಹುರಿಯಾಳ್ತನ--ನ್ಯಾಯಾಧೀಶರೂ ವಕೀಲರೂ--ಸಾರ್ವಜನಿಕಸಂಸ್ಥೆಗಳ ನಾಮಕರಣಾಧಿಕಾರ—ಚುನಾವಣೆಯಕ್ರಮ

ಕಮ್ಯುನಿಸ್ಟ ರಾಷ್ಟ್ರಗಳಲ್ಲಿ ನಾವು ಕೇಳುವ “ ಪೀಪಲ್ಸ್ ಕೋರ್ಟ”ನ ವ್ಯವಸ್ಥೆ ಆದರ್ಶ ಪ್ರಜಾತಂತ್ರದ ತಳಹದಿಯ ಮೇಲೆ ನಿಂತಿದೆಯೆಂಬುದನ್ನು ಯಾರೂ ಅಲ್ಲಗಳೆವಂತಿಲ್ಲ. ಆದರ್ಶವೆಂದೂ ವಾಸ್ತವವೆನಿಸದೆಂಬ ಸೂಕ್ತಿಯನ್ನು ಬಲ್ಲವರು ಅದರಲ್ಲಿಯ ಲೋಪದೋಷಗಳನ್ನು ತೆಗೆದುಹಾಕಿ ವ್ಯವಹಾರ್ಯವೆನಿಸುವ ಪ್ರಜಾಸತ್ತಾತ್ಮಕ ರೀತಿನೀತಿಗಳ ನೆಲಗಟ್ಟನ್ನು ಆಶ್ರಯಿಸಿ, ಅದರ ಮೇಲೆ ತಮ್ಮ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸಂಸ್ಥೆಗಳನ್ನು ಕಟ್ಟುವದು ಸ್ವಾಭಾವಿಕವಲ್ಲವೆ ?

“ಪೀಪಲ್ಸ್ ಕೋರ್ಟ್” ಅಥವಾ ಜನತಾ ನ್ಯಾಯಾಲಯ ಎಂಬ ಶಬ್ದ ನಮಗೆ ಆಗೀಗ ಕೇಳಿಬರುತ್ತದೆ. ಹಂಗೇರಿಯಲ್ಲಿ ಮೊನ್ನೆಮೊನ್ನೆ ಕಾರ್ಡಿನಲ್ ಮಿಡ್ಸ್‌ಜೆಂಟಿಯನ್ನು ಈ ಜನತಾ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಪಡಿಸಿದ್ದನ್ನೂ ಅದಕ್ಕಾಗಿ ನಾನಾ ದೇಶಗಳಲ್ಲಿ ಕೋಲಾಹಲವುಂಟಾದುದನ್ನೂ ಎಲ್ಲರೂ ಕೇಳಿದ್ದಾರೆ. ಬಲ್ಗೇರಿಯದಲ್ಲಿ ಪ್ರಾಟೆಸ್ಟೆಂಟ್ ಪಾದ್ರಿಗಳನ್ನು ಈ ರೀತಿ ಜನತಾನ್ಯಾಯಾಸ್ಥಾನದಲ್ಲಿ ವಿಚಾರಣೆಗೆ ಗುರಿಪಡಿಸಿ ಶಿಕ್ಷೆ ವಿಧಿಸಿದ್ದುಂಟು. ಫ್ರಾನ್ಸಿನ ಕ್ರಾಂತಿಯ ಕಾಲದಲ್ಲಿ ಜನರು ಇದೇ ಪ್ರಕಾರ ಅಶುನ್ಯಾಯಾಲಯಗಳನ್ನು ಸ್ಥಾಪಿಸಿ ನ್ಯಾಯಾಧೀಶರನ್ನು ಆರಿಸಿ ಅವರೆದುರಿನಲ್ಲಿ ಅಪರಾಧಿಗಳಾದ ರಾಜರನ್ನೂ ರಾಜವರ್ಗದವರನ್ನೂ ಶಿಕ್ಷೆಗೆ ಗುರಿಪಡಿಸುತ್ತಿದ್ದರು. ಅಮೇರಿಕದ ಸಂಯುಕ್ತ ಸಂಸ್ಥಾನದಲ್ಲಿ ಈಗಲೂ ನ್ಯಾಯಾಧೀಶರನ್ನು ಆರಿಸುವ ಪದ್ಧತಿ ಅಮಲಿನಲ್ಲಿದೆ.

ರಶಿಯ ಕೊಡುವ ಮಹತ್ವ

ರಶಿಯ ಈ ಚುನಾವಣೆಯ ಕೋರ್ಟುಗಳಿಗೆ ಬಹಳ ಮಹತ್ವಕೊಡುತ್ತದೆ. ಪ್ರಜಾಪ್ರಭುತ್ವದ ಅತಿಶಯೋಕ್ತಿಸ್ವರೂಪವಾದ ಈ ಜನತಾ ನ್ಯಾಯಾಧೀಶರ ಚುನಾವಣೆಯ ಕಾಲವೀಗ ಅಲ್ಲಿ ಪ್ರಾಪ್ತವಾಗಿದೆ. ೧೮ ವರ್ಷ ವಯಸ್ಸಿನ ಸರ್ವ ಸಭ್ಯರೂ ಆರಿಸುವ ಹಕ್ಕನ್ನು ಹೊಂದಿದ್ದಾರೆ. ೨೩ ವರ್ಷ ವಯಸ್ಸಿನ ಪ್ರತಿಯೊಂದು ಸಭ್ಯವ್ಯಕ್ತಿಯೂ ನ್ಯಾಯಾಧೀಶಪದಕ್ಕೆ ಹುರಿಯಾಳಾಗಿ ನಿಲ್ಲಬಲ್ಲನು. ನ್ಯಾಯಾಧೀಶರ ಚುನಾವಣೆಯ ಜೊತೆ ಜೊತೆಗೇ ವಕೀಲರನ್ನೂ ಚುನಾಯಿಸಲಾಗುತ್ತದೆ. ವಕೀಲನಿಗೆ ನ್ಯಾಯಾಧೀಶನಿಗೆ ಸರಿಸಮಾನವಾದ ಮತಾಧಿಕಾರವಿದೆ. ಭಿನ್ನಾಭಿಪ್ರಾಯದ ಪ್ರಸಂಗದಲ್ಲಿ ನ್ಯಾಯಾಧೀಶನನ್ನು ಹೊರಗಿಟ್ಟು ವಕೀಲರೇ ತಮ್ಮ ಮತಾಧಿಕಾರವನ್ನು ಪ್ರಯೋಗಿಸಿ ಬಹುಮತದಿಂದ ಒಂದು ಪ್ರಕರಣವನ್ನು ಇತ್ಯರ್ಥಪಡಿಸುತ್ತಾರೆ.

ಜಾತಿ, ಕುಲ, ವರ್ಣ, ಲಿಂಗಭೇದಗಳನ್ನು ಲೆಕ್ಕಿಸದ ಸೋವಿಯಟ್ ಪ್ರಜಾರಾಜ್ಯದಲ್ಲಿ ಸಮಾಜ ಸರಕಾರಗಳಲ್ಲಿ ಭೇದವಿಲ್ಲವೆಂದು ಹೇಳಲಾಗುತ್ತದೆ. ಈ ಸರಕಾರವು ಹುರಿಯಾಳುಗಳನ್ನು ಹೆಸರಿಸುವ ಹಕ್ಕನ್ನು ಕಮ್ಯುನಿಸ್ಟ್ ಪಕ್ಷದ ಸಂಘಟನೆಗಳು, ಮಜೂರ ಸಂಘಗಳು, ಪರಸ್ಪರ ಸಹಕಾರ ಸಂಘಗಳು, ತರುಣ ಸಂಘಗಳು ಸಾಂಸ್ಕೃತಿಕ ಸಂಘಗಳು, ರೈತಕೂಟ, ಕೂಲಿಕಾರರ ಪರಿಷತ್ತುಗಳು ಮತ್ತು ಸೈನಿಕ ಅಥವಾ ಇತರ ಅಧಿಕಾರಿವರ್ಗಗಳ ಸಭೆ ಇವುಗಳಿಗೆ ಕೊಟ್ಟಿದೆ. ಹೀಗೆ ಬೇರೆ ಬೇರೆ ಜನವಿಭಾಗಕ್ಕೆ ಹುರಿಯಾಳುಗಳನ್ನು ಆರಿಸುವ ಹಕ್ಕನ್ನಿತ್ತುದರಿಂದ ಆಯಾ ಜನಕ್ಕೆ ತಮ್ಮ ರಾಜ್ಯವನ್ನೂ ಜನತೆಯನ್ನೂ ಪ್ರಾಮಾಣಿಕರಾಗಿ ಸೇವಿಸುವವರೆಂದು ನಂಬಿಗೆಯುಳ್ಳವರನ್ನೇ ಆರಿಸಲು ಅನುಕೂಲವುಂಟಾಗಿದೆಯೆಂದು ಗ್ರಿಗೋರಿ ಪಾಪೊಮೋವನು ಬರೆಯುತ್ತಾನೆ.


ಚುನಾವಣೆಯ ಬಗೆ

ಚುನಾವಣೆಯ ಕಾಲದಲ್ಲಿ ಅದಕ್ಕಾಗಿ ಐದರಿಂದ ಏಳು ಅಥವಾ ೧೧ ಜನಗಳ ಒಂದೊಂದು ಸಮಿತಿಯನ್ನು ಬೇರೆ ಬೇರೆ ಆಯ್ಕೆಯ ಕೇಂದ್ರಗಳಿಗೆ ಕಳಿಸಿಕೊಡಲಾಗುತ್ತದೆ. ಇವರಾದರೂ ಜನಪ್ರತಿನಿಧಿಗಳೇ ಇರುತ್ತಾರೆ. ಇವರ ಮುಖ್ಯ ಕೆಲಸ ಮತಗಣನೆ. ಮತಗಣನೆಯ ಕೊಠಡಿಯಲ್ಲಿ ಸಾರ್ವಜನಿಕ ಸಂಸ್ಥೆಗಳ ಪ್ರತಿನಿಧಿಗಳು, ಸಂಘ ಸಂಘಟನೆಗಳ ಪ್ರಾತಿನಿಧಿಕ ಅಧಿಕಾರಿಗಳು ಮತ್ತು ಪತ್ರಿಕಾ ಪ್ರತಿನಿಧಿಗಳಿಗೆ ಪ್ರವೇಶವಿದೆ. ಚುನಾವಣೆಗೆ ೨೦ ದಿನಗಳ ಮೊದಲು ಮತದಾರರ ಮತ್ತು ಹುರಿಯಾಳುಗಳ ಪಟ್ಟಿಗಳನ್ನು ಪ್ರಸಿದ್ಧಿಸಲಾಗುತ್ತದೆ. ಚುನಾವಣೆಯ ದಿನವನ್ನು ಬಿಡುವಿನ ದಿನದಲ್ಲಿ ಬೀಳುವಂತೆ ಗೊತ್ತುಮಾಡಿ ೧॥ ತಿಂಗಳು ಮುಂಗಡವಾಗಿ ಪ್ರಜೆಗಳಿಗೆ ತಿಳಿಸಲಾಗುತ್ತದೆ. ಒಟ್ಟು ಮತಗಳಲ್ಲಿ ಅರ್ಧ ಭಾಗಕ್ಕಿಂತ ಹೆಚ್ಚು ಮತ ಪಡೆದವನು ಆರಿಸಿ ಬರುವನು. ಒಂದು ವೇಳೆ, ಯಾವ ಹುರಿಯಾಳೂ ಸಂಪೂರ್ಣ ಬಹುಮತ ಪಡೆಯದಿದ್ದರೆ ಅತಿ ಹೆಚ್ಚು ಮತ ಪಡೆದ ಇಬ್ಬರನ್ನು ೨ ವಾರಗಳೊಳಗೆ ಪುನಃ ಚುನಾವಣೆಗೆ ನಿಲ್ಲಿಸಲಾಗುವದು. ಪ್ರಜೆಯ ಮತದಾನದಲ್ಲಿ ಹಿಂಸೆ, ಮೋಸ, ಭಯಪ್ರದರ್ಶನ, ಲಂಚ ಅಥವಾ ಇನ್ನಾವುದಾದರೂ ಬಗೆಯಿಂದ ಅಡ್ಡಿಯೊಡ್ಡುವವರಿಗೆ ೨ ವರ್ಷಗಳ ವರೆಗಿನ ಶಿಕ್ಷೆಯನ್ನು ವಿಧಿಸುವ ಕಾಯದೆಯಿದೆ. ಅಧಿಕಾರಿಗಳು ಚುನಾವಣೆಯ ದಪ್ತರಗಳನ್ನು ಸುಳ್ಳುಸುಳ್ಳಾಗಿ ತಿದ್ದಿದರೆ, ಅಥವಾ ಬೇಕೆಂದು ತಪ್ಪಾಗಿ ಮತಗಣನೆ ಮಾಡಿದರೆ ಇದಕ್ಕಿಂತಲೂ ಹೆಚ್ಚಿನ ಶಿಕ್ಷೆ ಅವರಿಗೆ ಕಾದಿದೆ.

ಆದರ್ಶತತ್ವ

ಜನತಾನ್ಯಾಯಾಲಯದ ಮೂಲ ತತ್ವವು ಆದರ್ಶ ಪ್ರಜಾಸತ್ತೆಯ ತತ್ವಕ್ಕನುಗುಣವಾಗಿದೆ. ಅದಕ್ಕೆ ಆದರ್ಶ ಪ್ರಜೆಗಳಲ್ಲದೆ ಮತ್ತಾರೂ ಅರ್ಹರಾಗಲಾರರು. ಬಂಡವಾಳ ಪದ್ಧತಿಯಲ್ಲಿರುವಂತೆ ನ್ಯಾಯಾಧೀಶರನ್ನು ನಿಯಮಿಸುವ ಕೋರ್ಟುಗಳು ಶೋಷಕ ವರ್ಗಕ್ಕೆ ಸದಾ ಅನುಕೂಲವಿರುತ್ತವೆಯಲ್ಲದೆ, ಶೋಷಿತ ವರ್ಗಕ್ಕೆ ಅದರಿಂದ ನ್ಯಾಯಲಭಿಸದು ಎಂಬ ಪಾಪೊಮೋವನ ವಾದದಲ್ಲಿ ಸತ್ಯಾಂಶವಿಲ್ಲದಿಲ್ಲ. ಆದರೆ ಜಾರ್ಜ್ ಬರ್ನಾರ್ಡ್ ಶಾ ಒಮ್ಮೆ ಹೇಳಿದಂತೆ ಸಾಮಾನ್ಯ ಜನತೆಯೊಳಗಿಂದ ವೈದ್ಯರ, ವಕೀಲರ ಮತ್ತು ಶಿಕ್ಷಕರ ಕೆಲಸ ಮಾಡಲು ಶಿಕ್ಷಿತಾಶಿಕ್ಷಿತ ಭೇದವಿಲ್ಲದೆ ಅಧಿಕಾರಿಗಳನ್ನು ಚುನಾಯಿಸುವುದು ಎಷ್ಟು ಹಾಸ್ಯಾಸ್ಪದವೋ ಹಾಗೇ (ನಮ್ಮ ಗ್ರಾಮಪಂಚಾಯತಿ ಪದ್ಧತಿಗೆ ಹತ್ತಿರವೆನಿಸುವಂತಿದ್ದರೂ) ಈ ಜನತಾ ನ್ಯಾಯಾಧೀಶರ ಚುನಾವಣೆಯು ಕಾಯದೆ ಕಾನೂನುಗಳು ಅತಿಯಾಗಿ ವೃದ್ಧಿಹೊಂದಿದ ಈ ಕಾಲದಲ್ಲಿ "ನ್ಯಾಯ" ವನ್ನು ಸಂತ್ರಸ್ತರಿಗೆ ದೊರಕಿಸುವ ನ್ಯಾಯವಾದ ಸಾಧನವೆನಿಸದು. ನ್ಯಾಯಾಧೀಶತ್ವ ಮತ್ತು ವಕೀಲವೃತ್ತಿಗಳಲ್ಲಿ ತರಬೇತು ಹೊಂದಿದವರಲ್ಲೇ ಒಂದು ವೇಳೆ ಈ ಪ್ರಕಾರ ಚುನಾವಣೆ ನಡೆಸಿದರೆ ಕೆಲಮಟ್ಟಿಗೆ ಫಲಕಾರಿಯಾಗಬಹುದಲ್ಲದೆ, ಅನ್ಯಕಾರಣಗಳಿಂದ ಸಮಾಜದಲ್ಲಿ ಪ್ರತಿಷ್ಠೆ ಪಡೆದ ವ್ಯಕ್ತಿಗಳನ್ನು, ಅನುಭವ, ಕಡಿಮೆ ಇರುವ ಸಾಮಾನ್ಯ ಜನರು ಇಂಥ ಹೊಣೆಗಾರಿಕೆಯ ಸ್ಥಾನಕ್ಕೆ ನಿಯಮಿಸುವದು ಅಪಾಯಕರವೆನ್ನದಿರಲಾಗದು. ಇದೇ ಕಾರಣದಿಂದ ಭಾರತದ ಹೊಸರಾಜ್ಯ ಘಟನೆಯಲ್ಲಿ ನ್ಯಾಯಾಧೀಶರನ್ನು ಸರಕಾರ ನಿಯಮಿಸುವ ವ್ಯವಸ್ಥೆಯನ್ನು ಉಲ್ಲೇಖಿಸಲಾಗಿದೆಯಲ್ಲದೆ, ಜನ ಚುನಾಯಿಸುವುದನ್ನಲ್ಲ. ಕೋರ್ಟುಗಳಲ್ಲಿ ಬಡವರಿಗೆ ನ್ಯಾಯ ದೊರೆಯಬೇಕಾದರೆ ಅಲ್ಲಿ ಮಾಡಬೇಕಾದ ಖರ್ಚನ್ನು ಕಡಿಮೆ ಮಾಡಬೇಕು; ವಕೀಲರನ್ನು ಸರಕಾರ ಒದಗಿಸಿಕೊಡುವ ಮುಂತಾದ ಸೌಲಭ್ಯಗಳನ್ನು ಬಡವರಿಗೆ ಒದಗಿಸಿ ಕೊಡಬೇಕು. ಭಾರತ ಸರಕಾರ ಈ ದಿಕ್ಕಿನಲ್ಲಿ ಮುನ್ನಡೆಯುವುದು ಕ್ರಮಪ್ರಾಪ್ತವಾಗಿದೆ. ಈ ಕ್ರಮದಿಂದ ಬಂಡವಾಳ ಶಾಹಿಯ ಪದ್ಧತಿಯಲ್ಲಿ ಆಗುವುದೆಂದು ಪಾಪೊಮೋವನು ಆರೋಪಿಸಿದ ದೋಷವೂ ಪ್ರಜಾಸತ್ತೆಯಲ್ಲಿ ಆಗುವುದೆಂದು ಶಾ ಅಪಹಾಸ್ಯ ಮಾಡಿದ ದೋಷವೂ ಒಟ್ಟಿಗೇ ಪರಿಹಾರವಾದಂತಾಗುವುದು.

—ಅರ್ಜುನ



ಭಾರತಕ್ಕಾಗಿ ಬ್ರಿಟಿಶ ಟ್ರಾಕ್ಟರುಗಳು

ಪಾ ರಿ ಜಾ ತ

ಲೇ:— ಶ್ರೀ ರ. ವೈ. ಪಂಡಿತ, ಬಿ. ಎ., ಬಿ. ಟಿ.

ಅದೊಂದು ಬಿದಿಗೆಯ ರಾತ್ರಿ. ಅಂದೇ ಕಾಬೂಲಿ ಜನರ ಒಂದು ತಂಡವು ಲಾಹೋರಿನ ಸನಿಹದ ಒಂದು ಹಳ್ಳಿಗೆ ಬಂದಿಳಿದಿತ್ತು. ತಮ್ಮ ಬೆನ್ನಿನ ಮೇಲೆ ಹೊತ್ತ ಒಡೆಯರ ಸಂಸಾರ ಸಾಮಗ್ರಿಗಳಿಂದ ಮುಕ್ತವಾಗಿ ಕತ್ತೆಗಳು ಮಲಗಿ ಮೆಲುಕು ಹಾಕತೊಡಗಿದವು. ಸೂರ್ಯಾಸ್ತವಾದೊಡನೆಯೇ ಹಚ್ಚಿದ ಕತ್ತಲು ಅವರು ಊಟ ಮುಗಿಸುವಷ್ಟರಲ್ಲಿ ಅರ್ಧ ರಾತ್ರಿಯ ಗಡಿಯನ್ನು ಮುಟ್ಟಿತು. ಪ್ರಯಾಣದ ದೆಸೆಯಿಂದಾದ ಆಯಾಸ ಆ ಕಾಬೂಲಿಗಳನ್ನು ನಿಮಿಷಾರ್ಧದಲ್ಲಿ ನಿದ್ರೆಯ ಕೈಗೂಸುಗಳನ್ನಾಗಿ ಮಾಡಿತು. ರಾತ್ರಿ ಇಳಿಯುತ್ತ ಬಂದರೂ ಅವರಲ್ಲಾರೂ ತಮ್ಮ ಕುಂಭಕರ್ಣ ಸಮಾಧಿಯಿಂದ ಬೇಗನೆ ಎಚ್ಚರಾಗುವಂತಿದ್ದಿಲ್ಲ. ಆದರೆ ಅರುಣೋದಯವಾಗುವುದರೊಳಗೇ ಅವರಲ್ಲಿಯ ಒಬ್ಬಳು ಏಕೋ ಕಣ್ದೆರೆದಳು. ಇನ್ನೂ ಕೋಳಿ ಕೂಗಿದ್ದಿಲ್ಲ. ಸುತ್ತಲಿನ ಮಂದಿ ನಿದ್ರಾಭೈರವಿಯನ್ನು ಹಾಡುತ್ತಿದ್ದುದು ಅವಳ ಕರ್ಣಪಥಕ್ಕೆ ಬಂದಿತು. ಹಾಗೇ ಮುದುರಿ ಮತ್ತೆ ಕಣ್ಣು ಮುಚ್ಚಲು ಯತ್ನಿಸುತ್ತಿದ್ದಾಗ ಎಲ್ಲಿಂದಲೋ ಒಂದು ಅದಮ್ಯವಾದ ಪರಿಮಳ ಮೂಗನ್ನೆದುರಿಸಿತು. ಅಕ್ಷಣ ಅವಳು ಹಾಸಿಗೆಯಿಂದ ಚಡಪಡಿಸಿ ಎದ್ದು ಡೇರೆಯ ಹೊರ ಬಾಗಿಲ ಬಳಿ ಹೋಗಿ ನಿಂತಳು.

ನಕ್ಷತ್ರಗಳು ಮಿನುಗುತ್ತಿದ್ದವು. ಚಂದ್ರನು ದೂರದಿಂದಲೇ ಅವುಗಳ ಮಂಗಳಾರತಿಯನ್ನು ಸ್ವೀಕರಿಸುತ್ತಿದ್ದನು. ಪಾರಿಜಾತದ ಕಂಪು ಆ ಹುಡುಗಿಯನ್ನು ಮರುಳ್ಗೊಳಿಸಿತು. ಮನೋಹರನಾದ ನಿಸರ್ಗ ಪುರುಷನು ಆ ೧೫ ವರ್ಷ ವಯಸ್ಸಿನ ತರುಣಿಯನ್ನು ತನ್ನ ಕಂಪೋಲೆಯನ್ನು ಕಳುಹಿ ತನ್ನೆಡೆಗೆ ನಿಮಂತ್ರಿಸಿದ್ದನು. ಹುಡುಗಿಯ ಕಾಲುಗಳು ಅವಳ ಅಂಕೆಯನ್ನು ಮೀರಿದವು; ಹಾಗೇ ಹೋಗಿ ಒಂದು ಪುಟ್ಟ ಉದ್ಯಾನದ ಪಾವಟಿಗೆಗಳನ್ನು ಮುಟ್ಟಿದಳು. ಅಲ್ಲಿ ಆ ಪಾರಿಜಾತಗಳು ಅವಳಿಗೆ ಕಾಣಿಸಿದವು. ಮೊದಲೇ ಮುಗ್ಧೆಯಾಗಿದ್ದ ಅವಳ ಮೋಹ ಆಗ ಇಮ್ಮಡಿಸಿತು. ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ಹಾಕಲು ಅವಳಿಂದ ಅಸಾಧ್ಯವಾಯಿತು. ಆದರೂ ಪರಸ್ವಾಪಹಾರದ ಭೀತಿ ಅವಳನ್ನು ಬಾಧಿಸುತ್ತಿದ್ದು ಅವರು ನಾಲ್ಕಾರು ಸಲ ಪಾವಟಿಗೆಗಳನ್ನು ಹತ್ತಿ ಇಳಿದಳು. ಒಮ್ಮೆಲೇ ಅವಳ ಎಡಗಣ್ಣು ಹಾರಿತು. ಆಗ ಅವಳ ಆನಂದಕ್ಕೆ ಪಾರವೇ ಇಲ್ಲವಾಯಿತು; ಧೈರ್ಯಮಾಡಿ ಪಾವಟಿಗೆಗನ್ನೇರಿ ತೋಟದೊಳಗೆ ಹೊಕ್ಕಳು.

ತೋಟದೊಳಗೆ ಕಾಲಿಟ್ಟೊಡನೆ ಅಲ್ಲಿ ಆ ಕಾಬೂಲಿಗೆ ಕಾಣಿಸಿದ ದೃಶ್ಯ ಅವಳನ್ನು ಕ್ಷಣಕಾಲ ಸ್ತಬ್ಧಗೊಳಿಸಿತು. ಹಿತ್ತಿಲೇನೋ ವಿಸ್ತಾರವಾಗಿತ್ತಾದರೂ ಅಲ್ಲಿ ಇದ್ದುದು ಇದೊಂದು ಪಾರಿಜಾತದ ಗಿಡ ಮತ್ತು ಅದಕ್ಕೆ ತಾಗಿ ಒಂದು ಹಳೆಯ ಹಂಚಿನ ಮನೆ, ಮಿಕ್ಕೆಡೆ ಹುಲ್ಲು ಸೊಪ್ಪು ಬೆಳೆದು ಹಾಳುಹಾಳಾಗಿ ತೋರುತ್ತಿತ್ತು. ಆರೈಕೆ ಕಾಣದೆ ಒಣಗಿಹೋಗಿದ್ದುದರಿಂದ ಅದೊಂದು ಶಕಾರನ "ಪುಷ್ಪಕಂಟಕ ಜೀರ್ಣೋದ್ಯಾನ"ವೇ ಆಗಿತ್ತು. ಪಾರಿಜಾತ ವೃಕ್ಷದ ಕೆಳಗೆ ಎಷ್ಟೋ ಹೂವುಗಳು ಬಿದ್ದಿದ್ದವು; ಮತ್ತಷ್ಟು ಬೀಳುತ್ತಿದ್ದವು. ಹೆಚ್ಚು ವೇಳೆಗಳೆಯದೆ ಆ ಮುಗ್ಧೆ ಮರದೆಡೆಗೆ ಧಾವಿಸಿದಳು. ಆದರೆ ಆನಂದೋನ್ಮಾದದಿಂದ ಮತ್ತೆ ಅವಳು ಅಲ್ಲಿ ಸ್ತಬ್ಧಳಾಗಿ ಎವೆಯಿಕ್ಕದೆ ಪುಷ್ಪಾವಲೋಕನಲೀನಳಾಗಿಬಿಟ್ಟಳು. ಕೆಲ ನಿಮಿಷಗಳ ಬಳಿಕ ಆ ವೃಕ್ಷದ ವಕ್ಷಕ್ಕೆ ಮುತ್ತಿಟ್ಟು, ಅದಕ್ಕೆ ಬಲವಂದು ಅವಳು ಹೂ ಹೆಕ್ಕತೊಡಗಿದಳು. ಉಡಿಲು ತುಂಬುವಷ್ಟು ಆರಿಸಿಕೊಂಡ ಬಳಿಕ ಮತ್ತೂ ಆಶೆ ತಣಿದಂತಾಗದೆ, ಜಿಪ್ಪಾಗಿ ಮರದಡಿ ಮೇಲೆ ನೋಡುತ್ತ ಕುಳಿತಳು.

ಅಷ್ಟು ಹೊತ್ತಿಗೆ ಚಂದ್ರನು ವರ್ಗಾಯಿಸಲ್ಪಟ್ಟು ಅವನ ಸ್ಥಾನಕ್ಕೆ ಸೂರ್ಯನು ಬರತೊಡಗಿದ್ದನು. ಆ ಹೂವಿನ ಹುಡುಗಿಗೆ ತಾನು ಕಳ್ಳತನದಿಂದ ಅನ್ಯರ ತೋಟದಲ್ಲಿದ್ದೇನೆಂಬ ಭಾವನೆ ಅಷ್ಟು ಹೊತ್ತಿಗೆ ಮಾಯವಾಗಿ ಹೋಗಿತ್ತು. ಕೆಲ ನಿಮಿಷಗಳ ಬಳಿಕ ಅಲ್ಲಿದ್ದ ಮನೆಯ ಒಂದು ಕಿಟಕಿಯು ತೆರೆಯಲ್ಪಟ್ಟಿತು. ಕೂಡಲೆ 'ಹಿಡಿಯಿರಿ, ಹಿಡಿಯಿರಿ ಆ ಕಾಬೂಲಿ ಹೆಂಗಸನ್ನ ಎಂದು ಒದೆಯನು ಒದರಿದನು. ಸಮಾಧಿಸ್ಥಳಾಗಿದ್ದ ಆ ತರುಣಿ ಎಚ್ಚತ್ತು ದಿಕ್ಪಾಲಾಗಿ ಓಡಲಾರಂಭಿಸಿದಳು. ಹೂವು ಚೆಲ್ಲಿದವು, ಸೆರಗು ಹಾರಿತು, ಕಾಲಿಗೆ ಕಲ್ಲುಗಳು ಎಡಹಿದವು, ಹೊರಬಾಗಿಲು ಅವಳಿಗೆ ಕಾಣದಾಯಿತು. ಒಡೆಯನ ಅಪ್ಪಣೆಯಾದ ನಿಮಿಷಾರ್ಧದಲ್ಲಿ ಇಬ್ಬರು ಆಳುಗಳು ಬಂದು ಅವಳ ರಟ್ಟೆ ಹಿಡಿದು ಒಯ್ದು ಅವನ ಮುಂದೆ ನಿಲ್ಲಿಸಿದರು. ಆಗ ಅವಳ ಕಣ್ಣುಗಳು ಮೂರ್ತಿಮಂತ ಶೋಕರಸದಿಂದ ತುಂಬಿ ತುಳುಕಿದವು. ಅಪರಾಧಿತ್ವ, ಪಶ್ಚಾತ್ತಾಪ, ದೈನ್ಯಗಳು ಅನುಕ್ರಮವಾಗಿ ಅವಳ ಮೊಗದಲ್ಲಿ ಮೂಡಿ ಮಾಯವಾಗಿದ್ದವು. ಮುದುರಿದ, ಬಾಡಿದ ಮುಖದಿಂದ ಅವಳು ಕೈಜೋಡಿಸಿ ನಿಂತಿದ್ದಳು. ಆದರೆ ಮುಗ್ಧಸಹಜ ಕರುಣೆಗೆ ಯಜಮಾನನೆದೆ ಎಡೆಗೊಡಲಿಲ್ಲ. ಅವನು ಉಗ್ರವಾಗಿ ಗದ್ದರಿಸಿದನು:

'ಬಿಗಿಯಿರಿ ಅವಳನ್ನು ಆ ಪಾರಿಜಾತದ ಮರಕ್ಕೆ ಮತ್ತು ಬರಿ ಬೆನ್ನಿಗೆ ಕೊಡಿರಿ ೫ ಏಟುಗಳನ್ನು ಪುನಃ ಅವಳು ಹತ್ತಬಾರದು ನಮ್ಮ ಹಿತ್ತಿಲ ಮೆಟ್ಟಲನ್ನು; ಕಳ್ಳ ಜಾತಿ! ಅತ್ತು ಬೇರೆ ನಾಟಕ ಹೂಡುತ್ತಾಳೆ!'

ಅವಳ ದುರ್ಭಾಗ್ಯಕ್ಕೆ ಎಣೆಯುಂಟೇ? ಮೋಹ ನಿಸರ್ಗಜ. ಅವಳು ಆ ನೈಸರ್ಗಿಕಪ್ರವೃತ್ತಿಯಿಂದ ಮಾಡಿದ ಕಾರ್ಯಕ್ಕೆ ಮಾನವ ಸಹಜವಾದ ರಾಜಕೀಯ ನ್ಯಾಯಬುದ್ಧಿ ಅವಳ ಪಾರಿಜಾತದಂಥ ಸುಕುಮಾರ ಶರೀರದಲ್ಲಿ ತನ್ನ ಅಸ್ತಿತ್ವವನ್ನು ಪ್ರಕಟಪಡಿಸಿತು!

ಆ ಕ್ಷಣ ಒಂದು ಬಾವಿ ಹಗ್ಗದಿಂದ ಆ ಆಳುಗಳು ಕರ್ತವ್ಯಧುರಂಧರರಾಗಿ ಅಪರಾಧಿನಿಯಾಗಿದ್ದರೂ ಚಿನ್ನದ ಚೂರಿಯಂತೆ ಮುಗ್ಧಳಾಗಿ ತೋರುತ್ತಿದ್ದ ಆ ಹುಡುಗಿಯನ್ನು ಗಟ್ಟಿಯಾಗಿ ಪಾರಿಜಾತದ ಮರಕ್ಕೆ ಬಿಗಿದರು. ಅವಳ ಹವಳದಂತಹ ಗಲ್ಲಗಳ ಮೇಲೆ ಒಂದೇ ಸಮನಾಗಿ ಕಣ್ಣೀರು ಧಾರೆಧಾರೆಯಾಗಿ ಹರಿಯುತ್ತಿತ್ತು. ರಕ್ಷಣೆಗಾಗಿ ಅವಳು ಗಗನದತ್ತ ಮುಖವೆತ್ತಿ ಕೈಮುಗಿದಳು. 'ನ ದೇವಾ ದಂಡಮಾದಾಯ ರಕ್ಷಂತಿ ಪಶುಪಾಲವತ್' ಎಂಬ ಸತ್ಯ ಆ ಮುಗ್ಧೆಗೆಲ್ಲಿ ಗೊತ್ತು?

'ಸ್ವಲ್ಪ ಭಗವಂತನನ್ನು ನೆನೆಸಿಕೋ ತಪ್ಪಾಯಿತೆನ್ನು. ಇನ್ನು ಮುಂದೆ ಹೀಗೆಲ್ಲ ಬೇರೆಯವರ ತೋಟದ ಹೂವುಗಳನ್ನು ಕಳುವುದಿಲ್ಲ ಎಂದು ಆಣೆ ಮಾಡು, ಎಂದು ಒಬ್ಬ ಆಳು ಗರ್ಜಿಸಿದ. ಮತ್ತೊಬ್ಬನು ಒಂದು ಒರಟು ಹಗ್ಗದ ತುಂಡಿನಿಂದ ಒಂದು, ಎರಡು, ಮೂರು, ನಾಲ್ಕು ಎಂದು ಎಣಿಎಣಿಸಿ ೧೦ ಸಲ ಆ ಅಪರಾಧಿನಿಯ ಬರಿ ಬೆನ್ನಿನ ಮೇಲೆ ಹೊಡೆದು ಮುಗಿಸಿದನು. ಅಷ್ಟು ಹೊತ್ತಿಗೆ ಅವಳು ಬಾಡಿದ ಹೂಮಾಲೆಯಂತೆ ಮುದುರಿ ಬಿದ್ದಿದ್ದಳು. ಭೂಮಿತಾಯಿ ತನ್ನ ಕಲ್ಲೆದೆಯಿಂದಲೇ ಅವಳ ತುಂಬಿದೆದೆಗೆ ಕರುಣೆಯನ್ನು ಉಣಿಸುತ್ತಿದ್ದಳು. ಒಂದೆರಡು ಗಾಯಗಳು ಕಲ್ಲಿನಿಂದಾದವು. ಒಬ್ಬ ಆಳು ಅವಳನ್ನು ಎತ್ತಿ ಕುಳ್ಳಿರಿಸ ಹೊರಟಾಗ ಅವನಿಗೆ ಅವಳ ಕೊರಳಲ್ಲಿ ಒಂದು ಪರಿಚಿತ ವಸ್ತುವಿದ್ದುದು ಕಂಡು ಬಂದಿತು. ಒಮ್ಮಿಂದೊಮ್ಮೆ ಅವನು ಅವಾಕ್ಕಾದನು. ಮತ್ತೊಬ್ಬನು ನಿಷ್ಕ್ರಿಯನಾದನು. ಇದಕ್ಕೆ ದೈವಲೀಲೆಯೆಂದು ಪುರಾಣಿಕರು ಹೇಳಿದರೆ, ಕರ್ಮಧರ್ಮ ಸಂಯೋಗ ಎಂದು ಸಾಮಾನ್ಯರೆನ್ನುತ್ತಾರೆ? ಆಗ ಏನಾಯಿತು ಬಲ್ಲಿರಾ?

ಹುಡುಗಿಯ ಕೊರಳಿನ ಚಿನ್ನದ ಸರಪಳಿ ಆಳಿಗೆ ಹಿಂದೆ ಪರಿಚಿತವಾದುದಾಗಿತ್ತು, ಆವನು ಓಡುತ್ತ ಹೋಗಿ ಅದನ್ನು ಯಜಮಾನನ ಕೈಗಿತ್ತನು. ಯಜಮಾನನು ಅದೆಲ್ಲಿಂದ ಬಂದಿತೆಂದು ದರ್ಪದಿಂದ ಕೇಳಿದನು. "ಇದು ಆ ಕಾಬೂಲೀ ಹುಡುಗಿಯ ಕೊರಳಿನಲ್ಲಿತ್ತು. ಅದನ್ನು ಕಂಡರೆ ನಾನು ಎತ್ತಿ ಆಡಿಸುತ್ತಿದ್ದ ಕಳೆದು ಹೋದ ನಿಮ್ಮ ಮಗು ಚಂದುವಿನ ಕೊರಳ ಸರದಂತೆಯೇ ತೋರಿತು. ಅದಕ್ಕೇ ನಿಮಗೆ ತೋರಿಸಲು ತಂದೆ" ಎಂದು ಆಳು ಉತ್ತರಿಸಿದನು. ಯಜಮಾನನು ಅದನ್ನು ಹಿಡಿದು ಗಾಬರಿ, ಮತ್ತು ಪ್ರತ್ಯಾಶೆಯಿಂದ ನೋಡುತ್ತ ಹೆಂಡತಿಯನ್ನು ಗಟ್ಟಿಯಾಗಿ ಕರೆಯುತ್ತ ಒಳಗೆ ಹೋಗಿ ಅವಳ ಕೈಗಿತ್ತನು. ಅವಳು 'ಚಂದೂ ನನ್ನ ಚಂದೂ' ಎಂದು ಚೀರುತ್ತ ಹೊರ ಬಂದಳು. ಏಕೆಂದರೆ, ಸರಪಳಿಯಲ್ಲಿಯ ಪದಕ ಆ ತಾಯಿಗೆ ಸಂಶಯಿಸ್ಥಳಾಗಿ ಆ ಹುಡುಗಿ ಚಂದುವೇ ಎಂಬುದನ್ನು ಸೂಚಿಸಿ ಕೊಟ್ಟಿತ್ತು.

ಅರೆನಿಮಿಷದಲ್ಲಿ ಎಲ್ಲರೂ ಪಾರಿಜಾತದ ಮರದೆಡೆ ಓಡಿ ಬಂದರು. ಚಂದುವಿನ ಬಗ್ಗೆ ಪ್ರಶ್ನೆ ಕೇಳಲು ಅವರು ಆತುರರಾಗಿದ್ದರು. ಒಡನೆ ಹುಡುಗಿಯನ್ನು ಬಿಡಿಸಿದರು. ಹುಡುಗಿಯ ಮುಖವನ್ನು ನೋಡಿ ಯಜಮಾನಿಗೆ ಏನೋ ಹೊಳೆದಂತಾಯಿತು. ಅವಳು ಆ ಕಾಬೂಲೀ ಹುಡುಗಿಯ ಬಳಿ ಸಾರಿ ಬಗ್ಗಿ ಪರೀಕ್ಷಿಸಿದಳು. ಯಾವ ಸಂಶಯಕ್ಕೂ ಎಡೆಯಿದ್ದಿಲ್ಲ. ಅವಳ ಕೊರಳಲ್ಲಿದ್ದ ಕಲೆಗಳು ಚಂದುವೆಂದು ಸಾಕ್ಷಿ ಹೇಳುತ್ತಿದ್ದವು ತಾಯಿ ಅವಳನ್ನು ಅಪ್ಪಿ ಮುದ್ದಿಟ್ಟಳು. ಹುಡುಗಿಗೆ ಆದಾವುದರ ಅರ್ಥವೂ ಹೊಳೆಯದಾಯಿತು. ಅವಳು ಕಕ್ಕಾಬಿಕ್ಕಾದಳು. ಆದರೆ ಅರೆಗಳಿಗೆಯಲ್ಲಿ ತಾನು ತಾಯ ಮಡಿಲಿನಲ್ಲಿರುವೆನೆಂದು ಅಳು ಮತ್ತು ಮಾತುಗಳಿಂದಲೇ ತಿಳಿದುಹೋಯಿತು. ಮನೆಯಲ್ಲಿ ತಕ್ಕ ಶುಶ್ರೂಷೆ ಹೊಂದಿದ ಬಳಿಕ ತಂದೆ ಅವಳ ಪೂರ್ವೇತಿಹಾಸವನ್ನು ವಿವರಿಸಿ ಸಮಾಧಾನಗೊಳಿಸಿದನು. ಕಳೆದು ಹೋದ ರತ್ನ ಪುನಃ ಸಿಕ್ಕಿತೆಂದು ತಾಯ್ತಂದೆಯರು ಅತ್ಯಂತ ಆನಂದಗೊಳ್ಳಗಾದರೂ ಅವಳು ಸಿಕ್ಕ ಬಗೆಯನ್ನು, ಅವಳಿಗೆ ತಮ್ಮಿಂದ ಆದ ಹಿಂಸೆಯನ್ನು ನೆನೆದು ಪಶ್ಚಾತ್ತಾಪಪಟ್ಟರು. ಹುಡುಗಿಗೆ ಮಾತ್ರ ಕೇವಲ ಆಶ್ಚರ್ಯ ಆನಂದಗಳಷ್ಟೇ ಉಂಟಾದವು. ಹಡೆದವರನ್ನು ಪುನಃ ಕಂಡ ಆಕೆಗೆ ನೋವು ನುರಿಗಳ ಯಾವ ಅರಿವೂ ಉಂಟಾಗಲಿಲ್ಲ.

ಹೂವುಗಳಿಗೆ ಮರುಳಾಗಿ ಇಲ್ಲಿಗೆ ಬಂದೆಯಾ ನನ್ನ ಚಂದೂ? ಎಂದು ತಾಯಿ ಕೇಳಿದರೆ, ತಂದೆ ನಮ್ಮ ಪಾರಿಜಾತದ ಮರವೇ ಅವಳನ್ನಿಲ್ಲಿಗೆ ಕರೆಸಿತು ಎಂದರು. ಎಲ್ಲರೂ ಪಾರಿಜಾತದ ಮರಕ್ಕೆ ಕೈಮುಗಿದರು, ದೇವಭಾವಭರರಾದರು. ಆಳುಗಳು ಊರಿಗೆಲ್ಲ ಈ ಸುದ್ದಿಯನ್ನು ಆನಂದದಿಂದ ಹೇಳಿದರು. ಊರಿಗೆ ಊರೇ ನೆರೆಯಿತು ಅವರ ಮನೆಯ ಮುಂದೆ. ಎಲ್ಲರೂ ಕಳೆದು ಹೋದ ಮಗು ಸಿಕ್ಕಿದ ಆನಂದದಲ್ಲಿ ಭಾಗಿಗಳಾದರು. ಹುಡುಗ ಹುಡುಗಿಯರು ಪಾರಿಜಾತದ ಮರದ ಸುತ್ತಲೂ ಚಂದುವನ್ನು ನಡು ಕುಳ್ಳಿರಿಸಿ ಹಾಡಿ ಕುಣಿದರು. ಅಂದಿನಿಂದ ಪಾರಿಜಾತದ ಮರ ಪೂಜ್ಯತೆ ಪಡೆಯಿತು. ಹಾದಿಯಲ್ಲಿ ಹೋಗುವಾಗ ಆ ಹಳ್ಳಿಯ ಸ್ತ್ರೀಪುರುಷರು ಪ್ರತಿ ದಿನ ಬೆಳಿಗ್ಗೆ ಅದಕ್ಕೆ ನಮಸ್ಕರಿಸದೆ ಮುಂದೆ ಹೆಜ್ಜೆ ಇಡದಾದರು. ಈಗ ಆ ಮನೆತನದ ಗಣ್ಯತೆ ಅಷ್ಟೇನೂ ಉಳಿದಿಲ್ಲವಾದರೂ ಆ ಪಾರಿಜಾತದ ಮರ ಮಾತ್ರ ತನ್ನ ಪೂಜ್ಯತೆಯನ್ನು ಕಳೆದು ಕೊಂಡಿಲ್ಲ!

ನಗೆಯ ಸೂರೆ

ರಾಜಪಾಹೇಬರ ಮನೆಯ. ಕೀರ ಇಬ್ಬ... ಗಿನ ಚಾಕರಿಗೆಂದೊಬ್ಬಳೆ ಕಿಟ್ಟಿ. ಕಿಟ್ಟಿ ... ನಕ್ಕೆ ಸೇರಿದ ಮೊದಲನೆ ದಿನ ... ಕರ್ತವ್ಯಗಳಲ್ಲಿ ತಿಳ್ಳ ರಾತ್ರಿ ಒಂದು ... ದೊಡನೆ ಯಜಮಾನಿಗೆ ಒಂದು ಲೋಟ ಹಾ... ಒಯ್ದು ಕೊಡಬೇಕೆಂಬುದೂ ಒಂದು.

ಆ ರಾತ್ರಿ ಕಿಟ್ಟಿ ಅದಿಗೆ ಮನೆಯೊಳ... ಬಿಸಿ ಹಾಲನ್ನು ಒಂದು ಲೋಟದಲ್ಲಿ ... ಅದನ್ನು ಕೈಯಲ್ಲಿ ಹಿಡಿದುಕೊಂಡು ... ಮಾನಿಯ ಶಯ್ಯಾಗಾರಕ್ಕೆ ಹೋದಳು.

ಫ್ಯಾಶನೇಬಲ್ ಶ್ರೀಮತಿಯವರು ... ಗೊಂಡು ನುಡಿದರು: "ಹೀಗೆ ಇನ್ನು ಮುಂ... ಹಾಲು ತಂದಿಯೆಂದರೆ ನೋಡಿಕೊ! ಒಂ... ಟ್ರೇ (ಹರಿವಾಣ) ಇದ್ದಿದ್ದವೆ ಅಲ್ಲ? ... ತ" ದು ಬಿಟ್ಟು ಲೋಟವನ್ನೇ ... ಕೊಂಡು ಬಂದಿದ್ದಾಳೆ, ದಡ್ಡಿ ಎಲ್ಲಿಯ..!"

ಮರುದಿನ ರಾತ್ರಿ ಕಿಟ್ಟಿ ಟ್ರೇಯಲ್ಲಿ ... ಹಾಲು ಹಾಕಿಕೊಂಡು ತುಂಬ ಕಷ್ಟದಿಂ... ಅದನ್ನು ಪಡುತೂಕದಲ್ಲಿ ಹಿಡಿದುಕೊಂಡ... ಯಜಮಾನಿಯ ಕೋಣೆಯಲ್ಲಿ ಕಳೆ ಹಾ... ದಳು.

"ಅಮ್ಮಾ ಅವರೇ," ಅವಳು ಕಿಂಚಿತ್ ... ರಿದ ದನಿಯಲ್ಲಿ ಕೇಳಿದಳು. "ಒಂದು ಚಮಚ... ತರಲೇ ಅಥವಾ ಟ್ರೇಯಲ್ಲೇ ನೆಕ್ಕಿ ಕುಡಿಯು... ವಿರಾ?"

ಜಾತ್ಯತೀತ ರಾಷ್ಟ್ರವೆಂದರೆ ರೀತಿ ನಡೆವಳಿ ಬಿಡಬೇಕೆಂದಲ್ಲ

ಸರ್ವ ಧರ್ಮ ಸಮ್ಮೇಲನದ ಮಹತ್ವದ ಘೋಷಣೆ

ಆಂಧ್ರ ಪ್ರಾಂತೀಕರಣಕ್ಕೆ ತೊಂದರೆ

ಸರ್ವಧರ್ಮ ಸಮ್ಮೇಲನ

ಈ ವಾರ ಸಂಭವಿಸಿದ ಮಹತ್ವದ ಘಟನೆ ಯಲ್ಲಿ ಮುಂಬಯಿಯಲ್ಲಿ ಸೇರಿದ್ದ ಸರ್ವ ಧರ್ಮ ಸಮ್ಮೇಲನವೊಂದಾಗಿದೆ. ಹಿಂದುಸ್ತಾನ ಸರಕಾರದಲ್ಲಿದ್ದು ಮಂತ್ರಿಗಳೂ ಮುಖಾಬೋಧಿ ಸಂಸ್ಥೆಯ ಅಧ್ಯಕ್ಷರೂ ಆಗಿರುವ ಡಾ. ಶ್ಯಾಮ ಪ್ರಸಾದ ಮುಖರ್ಜಿಯವರು ಈ ಸಮ್ಮೇಲನ ವನ್ನು ಪ್ರಾರಂಭಿಸುತ್ತ ಮಹತ್ವದ ಮಾತು ಗಳನ್ನು ಹೇಳಿದರು. **ಭಾರತವು ಜಾತ್ಯತೀತ ರಾಷ್ಟ್ರವಾದ ಮಾತ್ರಕ್ಕೆ ಅನೇಕ ವರುಷಗಳಿಂದ ಪಾಲಿಸುತ್ತ ಬಂದ ನೈತಿಕ ಪ್ರಮಾಣ ಮತ್ತು ಉದಾತ್ತ ಕೃತ್ಯ ಗಳನ್ನು ಬಿಟ್ಟುಬಿಡಬೇಕೆಂದಲ್ಲ.** ನಮ್ಮ ರಾಷ್ಟ್ರವು ಶಾಂತಿ ಸಹನೆ ಸದ್ಭಾವನೆ ಮತ್ತು ಸಾಮರಸ್ಯಗಳ ತವರ್ಮನೆಯಾಗಿದೆ. ನಮ್ಮ ಶಕ್ತಿ ಯಿಂದಾಗಲಿ ಖಡ್ಗದ ಬಲದಿಂದಾಗಲಿ ನಮ್ಮ ಧರ್ಮವನ್ನು ಪರರ ಮೇಲೆ ಹೇರಲು ನಾವು ಎಂದೂ ಪ್ರಯತ್ನಿಸಿಲ್ಲ. **'ನಾವೂ ಬಾಳೋಣ ಪರರೂ ಬಾಳಲಿ'** ಎಂಬುದೆ ನಮ್ಮ ಪರಂಪರಾಗತ ಧೋರಣವಾಗಿದೆ ಎಂದು ಮಾನ್ಯ ಮಂತ್ರಿಗಳು ಅಭ್ಯಯ ಕೊಡಿಸಿದರು. ಸಮ್ಮೇಲನದ ಅಧ್ಯಕ್ಷಸ್ಥಾನ ವಹಿಸಿದ ಡಾ. ರಾಧಾಕೃಷ್ಣನ್‌ರು 'ವಿಜ್ಞಾನ ಮತ್ತು ಯಂತ್ರಗಳ ಅಭಿವೃದ್ಧಿ ನಡೆದು ಇಡೀ ಜಗತ್ತೇ ಬಡಲಾಗ ತೊಡಗಿದೆ. ಅದರಿಂದ ಬೇರೆ ಬೇರೆ ಜನಾಂಗ, ಸಂಸ್ಕೃತಿ ಮತ್ತು ಧರ್ಮಗಳು ಒಂದರ ಲ್ಲೊಂದು ಬೆರೆಯುವ ಪ್ರಸಂಗ ಬಂದೊದಗಿದೆ. ಈ ಸಮಯದಲ್ಲಿ ವಿವಿಧ ಧರ್ಮಗಳು ಸ್ಪರ್ಧೆ ನಡೆಸಬಲ್ಲವೆ ಎಂಬುದು ನಮ್ಮ ಮುಂದಿನ ಪ್ರಶ್ನೆ. ಪರಸ್ಪರರು ಅದನ್ನರಿತು ಸ್ಪರ್ಧೆಯ ಧೋರಣ ವಹಿಸದೆ ತಿಳವಳಿಕೆಯಿಂದ ವರ್ತಿಸುವದು ಸಾಧ್ಯವಿದೆ. ಶ್ರೀ ಕನ್ಹಯ್ಯಾಲಾಲ ಮುನಶಿಯವರು ಸ್ವಾಗತಾಧ್ಯಕ್ಷರೆಂದು ಭಾಷಣ ಮಾಡುತ್ತ— ಧರ್ಮವು ವಿನಾಶ ಹೊಂದಬಾರದಾಗಿದ್ದರೆ ಅದು ಅಧಿಕಾರಲಾಲಸೆಯಿಂದ ಸಂಪೂರ್ಣವಾಗಿ ದೂರಿರಬೇಕು. **ನೈತಿಕ ಮತ್ತು ಭೌತಿಕ ಅಧಃಪತನದಿಂದ ಧರ್ಮವೊಂದೆ ಮಾನವನನ್ನು ಉಳಿಸಬಲ್ಲದೆಂಬದನ್ನೂ ಎಲ್ಲ ಧರ್ಮಗಳ ಮೂಲವು ಒಂದೇ ಎಂಬದನ್ನೂ ಈ ಸಮ್ಮೇಲನವು ಸಿದ್ಧಪಡಿಸುತ್ತದೆ** ಎಂದು ಹೇಳಿದರು. ಮುಂಬಯಿಯ ಗವರ್ನರರೂ ಈ ಸಮ್ಮೇಲನದಲ್ಲಿ ಮಾತಾಡಿದರು.

ನೀತಿ ನಡೆವಳಿ

ಸಮ್ಮೇಲನಾನಂತರ ಹೊರಡಿಸಿದ ಪ್ರಕಟನೆಯಲ್ಲಿ, ಮಾನವ ಗೌರವ ಮತ್ತು ಸ್ವಾತಂತ್ರ್ಯಗಳು ಎಂಥ ಸಂದರ್ಭಗಳಲ್ಲಿಯೂ ಕಾಯದೆ ಬದ್ಧವಾಗಿ ಸಂರಕ್ಷಿಸಲ್ಪಡುವಂತೆ ನೋಡಿಕೊಳ್ಳಬೇಕು. ಜಗತ್ತಿನಲ್ಲಿ ಭೌತಿಕವಾದವು ಹಬ್ಬುತ್ತಿರುವದೆಂಬುದಕ್ಕೆ ಫ್ಯಾಸಿಜಂ, ಕಮ್ಯುನಿಜಂಗಳು ಉದಾಹರಣೆಗಳಾಗಿವೆ. ನೈತಿಕ ನಿಯಮಗಳು ಸಡಿಲಾಗುತ್ತಿರುವದು ಸಮಾಜದ ಅಸ್ತಿತ್ವಕ್ಕೇ ಗಂಡಾಂತರ. **ಸಮಾಜವು ಸುಖಿಯಾಗಿ ಬಾಳಿ ಪ್ರಗತಿಯನ್ನು ಹೊಂದಬೇಕಾದರೆ ದೇವರಲ್ಲಿ ವಿಶ್ವಾಸ ಮತ್ತು ನೈತಿಕ ನಿಯಮಗಳ ಪಾಲನೆ ಅತ್ಯವಶ್ಯವಾಗಿದೆ.** ಇಂಥ ವಿಶ್ವಾಸವುಳ್ಳ ಸಮಾಜವು ಅಂಧಶ್ರದ್ಧೆ ಮೂಢಭಕ್ತಿ ಮೊದಲಾದವುಗಳನ್ನು ಬಿಡಬೇಕು. ಧಾರ್ಮಿಕ ಚಳವಳಿಯು ರಾಜಕೀಯ ಚಳವಳಿಗೆ ಸಂಬದ್ಧವಾಗಿರಬಾರದು. ಸಂಯುಕ್ತರಾಷ್ಟ್ರವು ನಿರ್ಧರಿಸಿದ ಧಾರ್ಮಿಕ ಸ್ವಾತಂತ್ರ್ಯವನ್ನು ಹಿಂದುಸ್ತಾನವು ತಾನ ಎಲ್ಲ ರಾಷ್ಟ್ರಗಳಿಗೂ ಮೇಲ್ಪಂಕ್ತಿ ಹಾಕಿ ಕೊಟ್ಟಿದೆ ಎಂದು ಮುಂತಾಗಿ ಘೋಷಿಸಲಾಗಿದೆ.

ಸಂರಕ್ಷಕ ಸುಂಕ ಸಮಿತಿ

ನಮ್ಮದೊಂದು ದೇಶದಲ್ಲಿಯ ಉದ್ಯೋಗ ಧಂದೆಗಳ ಅಭಿವೃದ್ಧಿಯಾಗಬೇಕಾದರೆ ಆಯಾ ಉದ್ಯೋಗ ಧಂದೆಗಳು ಪರದೇಶಗಳ ಸ್ಪರ್ಧೆಗೆ ಬಲಿಬೀಳದಂತೆ ನೋಡಿಕೊಳ್ಳುವದು ಒಂದು ಉಪಾಯವಾಗಿದೆ. ಅದರಲ್ಲಿಯೂ ಹಿಂದುಸ್ತಾನದಂಥ ಹಿನ್ನಡೆಯ್ದಿರುವ ದೇಶಗಳಲ್ಲಿ ಹಿಂದುಳಿದ ರಾಷ್ಟ್ರದಲ್ಲಿ ಇದು ಅತ್ಯಂತ ಅವಶ್ಯವಾಗಿದೆ. ಪರಕೀಯ ಸರಕಾರವಿದ್ದಾಗ ಕೂಡ ಈ ದೂರಿನ ಮನವರಿಕೆಯಾಗಿ ಕೆಲವು ಸರಕುಗಳು ಸ್ಪರ್ಧೆಗೀಡಾಗದಂತೆ ನೋಡಿಕೊಳ್ಳಲು ಪರಕೀಯ ಸರಕುಗಳ ಮೇಲೆ ಭಾರತದ ಸುಂಕವನ್ನು ಹಾಕಲಾಗಿತ್ತು. ಪರಕೀಯ ಸಕ್ಕರೆ ಉಕ್ಕು ಬಟ್ಟೆ ಮೊದಲಾದವುಗಳ ಆಯಾತದ ಮೇಲೆ ಸಂರಕ್ಷಕ ಸುಂಕವನ್ನು ಹೇರಿದ್ದರಿಂದ ಹಿಂದುಸ್ತಾನದಲ್ಲಿ ಆಯಾ ಉದ್ಯೋಗಗಳ ಬೆಳವಣಿಗೆಗೆ ಕೆಲಮಟ್ಟಿಗೆ ಅನುಕೂಲವಾಯಿತು. ಆದರೆ ೧೯೨೩ರಲ್ಲಿ ನೇಮಕವಾಗಿದ್ದ ಆ ಸಮಿತಿಯಲ್ಲಿ ನಮ್ಮ ಅರಸರಾಷ್ಟ್ರಕ್ಕೆ ಅನುಕೂಲವಾಗುವಂತೆ ಪಂಕ್ತಿಪ್ರಪಂಚ ಮಾಡಲಾಗಿದ್ದಿತು, ಅದರೀಗ ಮತ್ತೆ ಆ ಪ್ರಶ್ನೆಯನ್ನೆಲ್ಲ ವಿಚಾರಿಸಿ ವರದಿಯನ್ನು ಮಾಡಲು ಕೃಷ್ಣಮಾಚಾರಿ ಸಮಿತಿಯನ್ನು ನೇಮಿಸಲಾಗಿದೆ. ಈ ಸಮಿತಿಯ ಆವಶ್ಯಕತೆಯ ಬಗ್ಗೆ ವಿಶೇಷವೇನೂ ಹೇಳಬೇಕಿಲ್ಲ. ಸಂರಕ್ಷಕ ಸುಂಕದ ಅವಶ್ಯಕತೆ ಇರುವ ವಸ್ತುಗಳ ಬಗ್ಗೆ ಕೂಲಂಕಷ ವಿಚಾರವಾಗಿ ಯೋಗ್ಯ ವರದಿ ಹೊರಬೀಳಬಹುದೆಂದು ಆಶಿಸಲಾಗಿದೆ. ಆದರೆ ಈ ಸಂರಕ್ಷಕ ಸುಂಕದ ದುರ್ಲಾಭ ಪಡೆದು ಆಯಾ ವಸ್ತುಗಳು ಪರದೇಶಿ ವಸ್ತುಗಳಿಗಿಂತ ಬಹಳ ತುಟ್ಟಿಯಾಗದಂತೆ, ಅದೂ ಅನಿಶ್ಚಿತ ಅವಧಿಯವರೆಗೆ, ವ್ಯಾಪಾರಸ್ಥರನ್ನು ನಿಯಂತ್ರಿಸುವ ಯೋಜನೆಯು ಅವಶ್ಯವಾಗಿದೆ. ಪರದೇಶಗಳ ಸ್ಪರ್ಧೆಯೂ ನಡೆಯಬಾರದು ಹಿಂದೀ ವಸ್ತುಗಳೂ ಅಗ್ಗವಾಗಿ ಸಿಕ್ಕಬೇಕು ಇಂಥ ಯೋಜನೆ ಅವಶ್ಯವಾಗಿದೆ.

ಆಂಧ್ರ ಪ್ರಾಂತದ ಸಮಸ್ಯೆ

ಮದರಾಸ ನಗರದ ಮೇಲಿನ ಹಕ್ಕನ್ನು ಬಿಟ್ಟುಕೊಟ್ಟರೆ ಮತ್ತು ವಿವಾದಾತ್ಮಕ ಪ್ರದೇಶಗಳನ್ನು ತಮ್ಮ ಪ್ರಾಂತದಲ್ಲಿ ಸೇರಿಸಿಕೊಳ್ಳುವ ಹವ್ಯಾಸವನ್ನು ಹಿಡಿಯದಿದ್ದರೆ ಆಂಧ್ರ ಪ್ರಾಂತ ರಚನೆಗೆ ಪ್ರಥಮ ಪ್ರಾಶಸ್ತ್ಯ ಕೊಡಲಾಗುವದೆಂದು ತ್ರಿಮೂರ್ತಿ ವರದಿಯಲ್ಲಿ ಅಶ್ವಾಸಿಸಲಾಗಿದೆಯಷ್ಟೆ. ರಾಷ್ಟ್ರಾಧ್ಯಕ್ಷ ಡಾ. ಪಟ್ಟಾಭಿಯವರು ಆಂಧ್ರ ಪ್ರಾಂತವನ್ನು ಹೇಗೆ ರಚಿಸಬೇಕೆಂಬುದನ್ನು ಸ್ಪಷ್ಟೀಕರಿಸುತ್ತ ಆಂಧ್ರರು ಮದ್ರಾಸದ ಮೇಲಿನ ಮೋಹವನ್ನು ಬಿಟ್ಟುಕೊಡಬೇಕೆಂದು ಹೇಳಿದ್ದಲ್ಲದೆ ಬಳ್ಳಾರಿ ಜಿಲ್ಹೆಯನ್ನು ಸದ್ಯಕ್ಕೆ ಇಡಿಯಾಗಿ ಭಾವೀ ಆಂಧ್ರ ಪ್ರಾಂತದಲ್ಲಿ ಸೇರಿಸಬೇಕೆಂದೂ ಕರ್ನಾಟಕ ಸ್ವತಂತ್ರ ಪ್ರಾಂತವಾದ ಬಳಿಕ ಕೇಳಕರ ನಿರ್ಣಯದ ಪ್ರಕಾರ ಆಲೂರು, ಅದವಾನಿ, ರಾಯದುರ್ಗ ತಾಲೂಕುಗಳನ್ನು ಬಿಟ್ಟು ಉಳಿದೆಲ್ಲ ತಾಲೂಕುಗಳನ್ನು ಕರ್ನಾಟಕ ಪ್ರಾಂತಕ್ಕೆ ಕೊಡಬೇಕೆಂದೂ ಅಭಿಪ್ರಾಯಪಟ್ಟಿರುವರು. ಇಡೀ ಬಳ್ಳಾರಿ ಜಿಲ್ಹೆಯು ಕರ್ನಾಟಕದ ಭಾಗ, ಕೇಳಕರ ನಿರ್ಣಯದಿಂದ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂದು ಕನ್ನಡಿಗರು ಕಳೆದ ೨೦—೨೫ ವರುಷಗಳಿಂದ ಒಂದೇ ಸವನೆ ಕೂಗಿಕೊಳ್ಳುತ್ತಿರುವರು. ಅಲ್ಲದೆ ಕೇಳಕರರಾದರೂ ಈ ಮೂರು ತಾಲೂಕುಗಳೂ ಕನ್ನಡವಾಗಿದ್ದು ಹತ್ತು ವರುಷಗಳ ನಂತರ ಇವುಗಳ ಪುನರ್ವಿಮರ್ಶೆಯಾಗಬೇಕೆಂದು ಅಭಿಪ್ರಾಯಪಟ್ಟಿದ್ದರೂ ರಾಷ್ಟ್ರಾಧ್ಯಕ್ಷರಂಥ ಹೊಣೆಗಾರ ಮುಖಂಡರು ಇಡೀ ಜಿಲ್ಹೆಯನ್ನೆ ಇಂತು ಆಂಧ್ರದಲ್ಲಿ ಸೇರಿಸಿಬಿಡುವ ಪ್ರಯತ್ನ ಮಾಡುವದು ಅನ್ಯಾಯದ ಪರಮಾವಧಿ. ಒಮ್ಮೆ ಇಡೀ ಜಿಲ್ಹೆ ಆಂಧ್ರದಲ್ಲಿ ಸೇರಿತೆಂದರೆ ಕನ್ನಡಿಗರಿಗೆ ಅದರ ಮೇಲಿನ ಹಕ್ಕನ್ನು ಪುನಃ ಪ್ರಸ್ಥಾಪಿಸುವದು ಎಷ್ಟೊಂದು ಪ್ರಯಾಸದ ಕೆಲಸವಾಗಬಹುದೆಂಬುದರ ಕಟು ಅನುಭವವಿದೆ. ಯುಕ್ತಿಪ್ರಯುಕ್ತಿಗಳಿಂದ ಬಳ್ಳಾರಿ ಜಿಲ್ಹೆಯನ್ನು ನುಂಗಿಬಿಡುವದಕ್ಕೆ ಕನ್ನಡಿಗರು ಎಂದಿಗೂ ಅವಕಾಶ ಕೊಡಲಾರರು. ಈ ಬಗ್ಗೆ ಈಗಾಗಲೆ ಎಲ್ಲೆಡೆಯಿಂದ ಪ್ರತಿಭಟಿಸಲಾಗಿದೆ. ಅಲ್ಲದೆ ಮದರಾಸ ನಗರವನ್ನು ಬಿಟ್ಟು ಆಂಧ್ರ ಪ್ರಾಂತರಚನೆಗೆ ಆಂಧ್ರರೂ ಸಿದ್ಧರಿಲ್ಲ. ಈ ಬಗ್ಗೆ ಆಂಧ್ರರು ಈಗಾಗಲೆ ಗೊತ್ತುವಳಿಯನ್ನು ಸ್ವೀಕರಿಸಿದ್ದಾರೆ. ಇದನ್ನೆಲ್ಲ ನೋಡಿದರೆ ಭಾಷಾವಾರ ಪ್ರಾಂತರಚನೆಗೆ ಸುದಿನಗಳು ಇಲ್ಲವೆಂದು ವಿಷಾದದಿಂದ ಹೇಳಬೇಕಾಗುವದು.

೧೯೫೧ರಲ್ಲಿ ರೇಲ್ವೆ ಎಂಜಿನುಗಳು

ಬ್ರಿಟಿಷರ ಆಳಿಕೆಯಲ್ಲಿ ಇಲ್ಲಿನ ಭಾರೀ ಉದ್ಯೋಗಗಳಿಗೆ ಪುರಸ್ಕಾರ ಸಿಕ್ಕದೇ ಪರದೇಶಗಳಿಂದ ಎಲ್ಲ ಯಂತ್ರ ಯಂತ್ರೋಪಕರಣಗಳನ್ನು ತರಿಸಲಾಗುತಿದ್ದಿತು. ಆದರೆ ಸ್ವತಂತ್ರ ಹಿಂದುಸ್ತಾನವು ಈ ಮನೆಮುರುಕ ಧೋರಣವನ್ನು ಬಿಟ್ಟುಗೊಟ್ಟು ಭಾರೀ ಉದ್ಯೋಗ ಧಂದೆಗಳನ್ನು ಇಲ್ಲಿಯೇ ಸ್ಥಾಪಿಸಬೇಕೆಂದು ಗೊತ್ತುಪಡಿಸಿದೆ. ಬಂಗಾಲದಲ್ಲಿ ಅಸನಸೋಲ ಬಳಿಯಲ್ಲಿ ಚಿತ್ತರಂಜನ ನಗರವನ್ನು ಸ್ಥಾಪಿಸಿ ಅಲ್ಲಿ ೧೫ ಕೋಟಿ ರೂಪಾಯಿಗಳ ರೇಲ್ವೆ ಎಂಜಿನು ಸಿದ್ಧಪಡಿಸುವ ವರ್ಕಶಾಪನ್ನು ಕಟ್ಟಬೇಕೆಂದು ನಿರ್ಧರಿಸಲಾಗಿದೆ. ಈ ವರ್ಕಶಾಪಿನಲ್ಲಿ ಪ್ರತಿವರುಷ ೧೨೦ ರೇಲ್ವೆ ಎಂಜಿನುಗಳು ತಯಾರಾಗುವವು. ಈ ವರ್ಕಶಾಪ ಮತ್ತು ಟಾಟಾರವರ ರೇಲ್ವೆ ಎಂಜಿನ ಫ್ಯಾಕ್ಟರಿ ಕೂಡಿ ಹಿಂದುಸ್ತಾನಕ್ಕೆ ಬೇಕಾಗುವಷ್ಟು ರೇಲ್ವೆ ಎಂಜಿನು ಒದವಿಸಬಹುದೆಂದು ನಿರೀಕ್ಷಿಸಲಾಗಿದೆ. ಹಿಂದುಸ್ತಾನದಲ್ಲಿ ಇರುವ ಒಟ್ಟು ೭ ಸಾವಿರ ರೇಲ್ವೆ ಎಂಜಿನುಗಳಲ್ಲಿ ೧೨೫೧ ಎಂಜಿನುಗಳು ಅವಧಿ ಮೀರಿದವುಗಳು ಇರುವವು ಇನ್ನು ೧೯೫೭ ಎಂಜಿನುಗಳು ಮುಂದಿನ ದಶಕದಲ್ಲಿ ಅವಧಿ ಮೀರಿದವುಗಳಾಗುವವು. ಒಂದು ಎಂಜಿನು ೪೦ ವರುಷ ಸರಿಯಾಗಿ ಕೆಲಸ ಕೊಡಬಹುದು. ಈ ಲೆಕ್ಕದಿಂದ ಮೇಲಿನ ಅಂಕಿ ಸಂಖ್ಯೆಗಳನ್ನು ಗೊತ್ತುಪಡಿಸಿದೆ. ಎಂಜಿನುಗಳಿಗೆ ಬೇಕಾಗುವ ಬಿಡಿಭಾಗಗಳು ಹಿಂದುಸ್ತಾನದಲ್ಲಿ ಸಿದ್ಧವಾಗುವದಿಲ್ಲ. ಅದುದರಿಂದ ಬಿಡಿಭಾಗ ಕೆಟ್ಟರೆ ಇಡೀ ಎಂಜಿನು ನಿಲ್ಲಬೇಕಾಗುವದು. ಎಂಜಿನುಗಳ ಬಿಡಿಭಾಗಗಳು ಈಗ ವಿದೇಶಗಳಲ್ಲಿ ಕೂಡ ದುರ್ಮಿಳವಾಗಿವೆ. ಅಮೇರಿಕೆಯಲ್ಲಿ ೩೦೩, ಕಾನಡಾದಲ್ಲಿ ೩೫೦, ಬ್ರಿಟನದಲ್ಲಿ ೧೯೦, ಫ್ರಾನ್ಸದಲ್ಲಿ ೨೦ ಹೀಗೆ ೮೬೩ ರೇಲ್ವೆ ಎಂಜಿನುಗಳನ್ನು ಹೊಸದಾಗಿ ಕೊಳ್ಳಲಾಗಿದೆ—ಈ ರೀತಿ ಬಹಳ ವೆಚ್ಚ ಮಾಡಿ ಪರದೇಶಗಳಿಂದ ಎಂಜಿನು ತರಿಸುವದಕ್ಕಿಂತ ಇಲ್ಲಿಯೆ ಎಂಜಿನು ತಯಾರ ಮಾಡುವದು ಸಮಂಜಸವೆಂದು ಭಾರತ ಸರಕಾರ ಆದಕ್ಕಣೆಯಾಗಿದೆ.

ವೇದಗ್ರಂಥಗಳು

[ಲೇ– ಪಂ. ಕೆ. ಎ. ದೇವದಾಸ, ಶಿರೋಮಣಿ; ಪಿ. ಓ. ಎಲ್. ಉಡುಪಿ]

ಕಷ್ಟವೆಂದೂ, ಗಹನವೆಂದೂ, ನಾನಾ ರೀತಿಯ ಹೆದರಿಸುವಿಕೆಯಿಂದಲೂ ಭಾರತೀಯ ವಿದ್ಯಾರ್ಥಿಗಳು ಸಂಸ್ಕೃತ ಜ್ಞಾನವನ್ನು ಪಡೆದ ಮೇಲೂ ವೇದವನ್ನು ಕಲಿಯಲು ತೊಡಗುವುದಿಲ್ಲ. ಅಥವಾ ಕಲಿಸುವ ವ್ಯವಸ್ಥೆಯೂ ಇಲ್ಲ. ಇದು ಎಲ್ಲ ಅನುಕೂಲತೆಗಳಿದ್ದು ವ್ಯರ್ಥವಾಗಿ ಭಾರತೀಯತೆಯನ್ನು ಕಳೆದುಕೊಳ್ಳುವ ಬುದ್ಧಿಯಲ್ಲದೆ ಮತ್ತೇನೂ ಅಲ್ಲ.

ಉಪನಿಷತ್ತುಗಳೇ ಮೊದಲಾದ ಉದ್ಗ್ರಂಥಗಳನ್ನೂ ಸ್ಮೃತಿಪುರಾಣಗಳನ್ನೂ ಕಲಿಯುತ್ತ ಕುಳಿತರೆ ಅವುಗಳ ಒಳಗೇ ಸಾಮಾನ್ಯ ವಿದ್ಯಾರ್ಥಿಗಳ ವಿದ್ಯಾರ್ಥಿಜೀವನವನ್ನು ಒದ್ದಾಡುವಂತೆ ಮಾಡಬೇಕಾಗುತ್ತದೆ. ಅದಕ್ಕಿಂತಲೂ ಮೂಲವಾದ ಪವಿತ್ರವೇದಗ್ರಂಥದ ಪಾಠವು ಯಾಕೆ ಸಾರ್ವತ್ರಿಕವಾಗಿ ನಡೆಯಬಾರದೋ ತಿಳಿಯುವದಿಲ್ಲ.

ಪೂಜಾ ವಿಧಾನಗಳಿಗೋ ಮತ್ತೊಂದಕ್ಕೋ ಬೇಕಾದ ಅಂಶಗಳನ್ನು ಮಾತ್ರ ಕಲಿತು ಹಿಂದೂ ಗುರುಗಳೆನಿಸುವ ಹವ್ಯಾಸವು ಇದ್ದರೂ ವೇದದ ಸರ್ವತ್ರ ಜ್ಞಾನವೂ ಉಂಟೆನಿಸುವಂತೆ ಮಾಡುವುದೇ ಮೇಲು. ಉತ್ತಮವಾದ ಗ್ರಂಥವನ್ನು ಕಲಿಯಲಿಕ್ಕೆ ಸಾಮಾನ್ಯ ಸಂಸ್ಕೃತ ಜ್ಞಾನ, ಭಕ್ತಿ, ವಿನಯಾದಿಗಳು ಇರುವಲ್ಲೆಲ್ಲ ಅಧಿಕಾರ ಉಂಟಲ್ಲದೆ ಮಾನವ ವರ್ಗದಲ್ಲಿ ಪಂಗಡಗಳನ್ನು ವಿಭಾಗಿಸಿ, ಅರ್ಥಾತ್ ಮನೆತನದ ವಿಭಾಗ ಮಾಡಿ, ಇಂಥವರು ಓದಬೇಕು ಇಂಥವರು ಓದಬಾರದೆಂದು ಹೇಳುವ ಅಭಿಪ್ರಾಯದಿಂದ ಭಾರತೀಯರಿಗೆ ತುಂಬ ಧಕ್ಕೆಯಿದೆ. 'ಯಥೇಮಾಂ ಕಲ್ಯಾಣೀಂ' ಇತ್ಯಾದಿ ಮಂತ್ರಗಳಿಂದ ವೇದವು ಸಕಲ ಜನರ ಉದ್ಧಾರಕ್ಕಾಗಿರುವುದೆಂದು ಸ್ಪಷ್ಟವಾಗುತ್ತದೆ. ವೇದಪಾಠ ಶಾಲೆಗಳು ಅಲ್ಲಲ್ಲಿ ಏರ್ಪಡುವಂತಾಗಿ, ಅರ್ಥಜ್ಞಾನಸಹಿತವಾಗಿ ವಿದ್ಯಾರ್ಥಿಗಳು ವೇದ ಗ್ರಂಥದ ಸಂಕ್ಷಿಪ್ತಸಾರವನ್ನೂ ಮುಖ್ಯಮಂತ್ರಗಳನ್ನೂ ಹೆಚ್ಚಾಗಿ ಬೇಗ ಬೇಗನೆ ಕಲಿಯತೊಡಗುವುದು ಅಗತ್ಯ.

ವೇದ ಮಂತ್ರಗಳ ಅರ್ಥ ವಿವರಣೆಗಾಗಿ ಬರೆದ ಗ್ರಂಥವೇ "ಬ್ರಾಹ್ಮಣ". ಇದು ಗದ್ಯ. ಸಂಸ್ಕೃತ ಸಾಹಿತ್ಯದ ಮೊದಲನೆಯ ಗದ್ಯ ಗ್ರಂಥವಿದು. ಅದರಲ್ಲಿ ಶ್ಲೋಕ ರೂಪವಾಗಿಯೂ ಕೆಲವು ಭಾಗಗಳಿವೆ. ಒಂದೊಂದು ವೇದಕ್ಕೂ ಒಂದೊಂದು ಬ್ರಾಹ್ಮಣವಿದೆ. ಅದರಲ್ಲಿ ಮೂರು ವಿಭಾಗಗಳಿವೆ. ಮೊದಲನೆಯ ಭಾಗದಲ್ಲಿ ಮಂತ್ರಗಳ ವ್ಯಾಖ್ಯಾನ. ಎರಡನೆ ಭಾಗವು ಅರಣ್ಯಕ. ಇದರಲ್ಲಿ ಧಾರ್ಮಿಕ ವಿಷಯಗಳು ಚರ್ಚಿಸಲ್ಪಟ್ಟಿವೆ. ಮೂರನೆಯ ವಿಭಾಗವು ಉಪನಿಷತ್ತು. ಇದರಲ್ಲಿ ಆಧ್ಯಾತ್ಮಿಕ ವಿಚಾರವು ಚರ್ಚಿಸಲ್ಪಟ್ಟಿದೆ. ಈ ಮೂರು ವಿಭಾಗಗಳಿರುವ ಬ್ರಾಹ್ಮಣಕ್ಕೂ ವೇದವೆಂದೇ ಹೆಸರು ರೂಢಿಯಲ್ಲಿದೆ. ಉದಾ: ಗುರುಕುಲದಿಂದ ವಿದ್ಯಾಭ್ಯಾಸವನ್ನು ಮುಗಿಸಿ ತೆರಳುವ ವಿದ್ಯಾರ್ಥಿಯನ್ನು ಕುರಿತು ಗುರುವು ಹೇಳುವ "ಸತ್ಯಂ ವದ" ಇತ್ಯಾದಿ ಮಾತುಗಳು. ತೈತ್ತಿರೀಯ ಉಪನಿಷತ್ತಿನ (೧೦ ಉಪನಿಷತ್ತುಗಳಲ್ಲಿ ಒಂದು) ವಾಕ್ಯಗಳಾದರೂ ಶ್ರುತಿವಚನ ಅರ್ಥಾತ್ ವೇದ ವಚನವೆಂದೇ ಹೇಳಲ್ಪಟ್ಟಿದೆ. ವಿಷಯ ವಿಭಾಗದಿಂದ ವೇದವು ನಾಲ್ಕಾಗಿ ವಿಭಾಗಿಸಲ್ಪಟ್ಟಿದೆ. ಮೊದಲನೆಯದು ಸ್ತೋತ್ರಾತ್ಮಕವಾಗಿಯೂ ಎರಡನೆಯದು ಯಾಗವಿಷಯಿಕವಾಗಿಯೂ ಮೂರನೆಯದು ಯಾಗ ದೇವತೆಗಳನ್ನೂ ಗಾನರೂಪವಾಗಿ ಸ್ತೋತ್ರ ಮಾಡುವುದೂ ಕೊನೆಯದು ಐಹಿಕ ವಿಷಯಗಳಿಂದ ಕೂಡಿದ್ದೂ ಆಗಿರುತ್ತದೆ. ಮೊದಲನೆಯ ಮೂರು ವಿಭಾಗದಲ್ಲಿಯ ಹಲವು ವಿಷಯಗಳಲ್ಲಿ ಸಮಾನತೆಯು ಕಂಡು ಬರುತ್ತದೆ.

ಋಗ್ವೇದ

ಋಗ್ವೇದದಲ್ಲಿ ಹತ್ತು ಮಂಡಲಗಳಿವೆ. ಪ್ರತಿ ಮಂಡಲದಲ್ಲಿಯೂ ಅರುವತ್ತಕ್ಕೆ ಮಿಕ್ಕಿ ಸೂಕ್ತಗಳಿವೆ. ಪ್ರತಿಯೊಂದು ಸೂಕ್ತದಲ್ಲಿಯೂ ಅನೇಕ ಮಂತ್ರಗಳಿವೆ. ಪ್ರತಿಯೊಂದು ಮಂಡಲದಲ್ಲಿರುವ ಮಂತ್ರಗಳಿಗೂ ವಸಿಷ್ಠ, ಮೇಧಾತಿಥಿ, ವಾಮದೇವ ಮೊದಲಾದ ಋಷಿಗಳು ಕರ್ತೃಗಳು ಅಥವಾ ದ್ರಷ್ಟೃಗಳು ಆಗಿದ್ದಾರೆಂದು ಕಂಡುಬರುತ್ತದೆ. ಉದಾ: ಏಳನೆಯ ಮಂಡಲದ ಅನೇಕ ಮಂತ್ರಗಳಿಂದ ಕೂಡಿದ ನೂರನಾಲ್ಕು ಸೂಕ್ತಗಳ ಋಷಿಯು ವಸಿಷ್ಠನು.

ಸಂಹಿತೆ

ಸಂಹಿತೆ ಎಂದರೆ ಬೇರೇನೂ ಅಲ್ಲ. ಮಂತ್ರಗಳನ್ನು ಕ್ರಮ ರೀತಿಯಿಂದ ಕ್ರೋಡೀಕರಿಸಿರುವುದೆಂದು ಅರ್ಥ. ಈ ಕ್ರೋಡೀಕರಣವು ಕ್ರಮತಪ್ಪಬಾರದೆಂದು ಕೆಲವು ನಿಯಮಗಳನ್ನು ಮಾಡಿದ್ದಾರೆ. ಘನಪಾಠ ಜಟಾಪಾಠ ಇತ್ಯಾದಿ ಎಂದರೆ ಹಿಂದಕ್ಕೂ ಮುಂದಕ್ಕೂ ಹೇಳುವುದು. ಅನುಕ್ರಮಣಿಕೆಯನ್ನು ಮೊದಲೇ ಬರೆದಿಟ್ಟದ್ದರಿಂದ ವೇದದಲ್ಲಿ ಪ್ರಕ್ಷಿಪ್ತಕ್ಕೆ ಎಡೆ ಇಲ್ಲದಂತಾದುದು ಭಾಗ್ಯ.

ಛಂದಸ್ಸು

ಕವಿತೆಗಳಲ್ಲಿ ನಾನಾ ವೃತ್ತಗಳಿರುವಂತೆ ಇದರಲ್ಲೂ ಇವೆ. ಇದಕ್ಕೆ ಛಂದಸ್ಸು ಎನ್ನುತ್ತಾರೆ. ಋಗ್ವೇದದಲ್ಲಿ ಮುಖ್ಯವಾಗಿ ಅರೇಳು ಛಂದಸ್ಸುಗಳಿವೆ. ಗಾಯತ್ರೀ, ಉಷ್ಣಿಕ್, ಅನುಷ್ಟುಪ್ ಇತ್ಯಾದಿ. ಇಪ್ಪತ್ತನಾಲ್ಕು ಅಕ್ಷರದ್ದು ಗಾಯತ್ರೀ, ಇಪ್ಪತ್ತೆಂಟರಕ್ಷರದ್ದು ಉಷ್ಣಿಕ್–ಹೀಗೆ ಛಂದಸ್ಸುಗಳ ಭೇದ. ಅನುಷ್ಟುಪ್ ಛಂದಸ್ಸು ಲೌಕಿಕ ಕಾವ್ಯಗಳಲ್ಲೂ ಹೆಚ್ಚಾಗಿ ಉಪಯೋಗಿಸಲ್ಪಡುತ್ತದೆ. "ಲಕ್ಷ್ಮೀರ್ವಸತಿ ಜಿಹ್ವಾಗ್ರೇ" ಇತ್ಯಾದಿ.

ನಿರುಕ್ತ

ವೇದಮಂತ್ರದ ಶಬ್ದಾರ್ಥ ಜ್ಞಾನವನ್ನು ಯಾಸ್ಕನು ಬರೆದ ನಿರುಕ್ತವೆಂಬ ಕೋಶದಿಂದ ತಿಳಿಯಬಹುದು. ಸಾಯಣಾಚಾರ್ಯರು ವೇದಕ್ಕೆ ಭಾಷ್ಯವನ್ನು ಬರೆದಿದ್ದಾರೆ. ಇವರ ಕಾಲ ಕ್ರಿ. ಶ. ೧೪ ನೆಯ ಶತಮಾನ.

ದೇವರು

ಋಗ್ವೇದದಲ್ಲಿ ಅಗ್ನಿ, ವಾಯು, ರುದ್ರ ಮೊದಲಾದ ದೇವತೆಗಳ ಸ್ತೋತ್ರಗಳೇ ಹೆಚ್ಚಾಗಿ ಇವೆ. "ಏಕಂ ಸದ್ವಿಪ್ರಾ ಬಹುಧಾ ವದಂತಿ. ಅಗ್ನಿಂ ಯಮಂ ಮಾತರಿಶ್ವಾನಮಾಹುः" (೧ ನೆಯ ಮಂಡಲ, ೧೬೪ ನೆಯ ಸೂಕ್ತ, ೪೬ ನೇ ಮಂತ್ರ) ಈ ಮಂತ್ರದಲ್ಲಿ ಒಬ್ಬನೇ ದೇವರೆಂದೂ ಅವನನ್ನೇ ನಾನಾ ಹೆಸರುಗಳಿಂದ ಕೊಂಡಾಡುತ್ತಾರೆಂದೂ ಹೇಳಲ್ಪಟ್ಟಿದೆ. (ಮೊದಲನೆಯ ಮಂಡಲದಲ್ಲಿ ೧೯೨ ಸೂಕ್ತಗಳಿವೆ.) ಹಿರಣ್ಯಗರ್ಭಃ ಸಮವರ್ತತಾಗ್ರೇ ಭೂತಸ್ಯ ಜಾತಃ ಪತಿರೇಕ ಆಸೀತ್. (೧೦ ನೆಯ ಮಂಡಲ. ಈ ಮಂತ್ರದಿಂದಲೂ ದೇವರು ಒಬ್ಬನೆಂದು ಹೇಳಿದಂತಾಯಿತು.

ಇಂದ್ರಾದ್ಯರು

ಅಗ್ನಿಸಂಯೋಗವಿಲ್ಲದೆ ಮಳೆ ಬಾರದು. ಮಳೆಗೆ ತಡೆಯನ್ನುಂಟುಮಾಡುವ ಶಕ್ತಿಗೆ ವೃತ್ರನೆಂದು ಹೆಸರು. ಆ ಶಕ್ತಿಯನ್ನು ನಾಶ ಮಾಡುವವನು ಇಂದ್ರನು. ಇಂದ್ರನ ಅನುಗ್ರಹದಿಂದ ಮಳೆ ಬರುತ್ತದೆ. ಮಳೆಯೇ ಸಸ್ಯ ಸಮೃದ್ಧಿಗೆ ಮೂಲ. ಸಸ್ಯಪುಷ್ಟಿಯಿಂದಲೇ ಅನ್ನ. ಆದುದರಿಂದ ಇಂದ್ರಾದಿ ದೇವತೆಗಳ ಅನುಗ್ರಹಕ್ಕಾಗಿ ಅವರನ್ನು ಪೂಜಿಸಬೇಕೆಂದು ಋಗ್ವೇದವು ಸಾರುತ್ತದೆ.

ವರುಣನು ದೇವತೆಗಳ ಒಡೆಯನೆಂದು ಹೇಳಲ್ಪಟ್ಟಿದೆ. ಸೂರ್ಯನು ರೋಗಗಳನ್ನೂ ದುಃಸ್ವಪ್ನಗಳನ್ನೂ ನಾಶ ಮಾಡುವನು. ಸವಿತೃವು ಬುದ್ಧಿಯನ್ನು ಬೆಳಗಿಸುವ ದೇವತೆ. ಪೂಷನ್ ಎಂಬ ದೇವತೆಯು ಪ್ರೇತಗಳನ್ನು ಪಿತೃಲೋಕಕ್ಕೆ ಕಳಿಸುತ್ತಾನೆ. ವಿಷ್ಣುವಿನ ಸ್ತೋತ್ರದಲ್ಲಿ ವಾಮನಾವತಾರದ ಎಂದರೆ ಪಂಚಾವತಾರಗಳ ನಂತರ ವೇದಗಳು ಸಂಗ್ರಹಿಸಲ್ಪಟ್ಟದ್ದೆಂದೂ ವೇದದಲ್ಲಿ ಪ್ರತಿಪಾದಿಸಿದ ದೇವತೆಗಳು ಪಂಚಾವತಾರ ಕಾಲದ ವ್ಯಕ್ತಿಗಳಾಗಿರಬಹುದೆಂದೂ ಅವರು ಯೋಗ್ಯರಾದ್ದರಿಂದ ಹಿರಿಯರ ಸ್ತೋತ್ರವೇ ದೇವತಾ ಸ್ತೋತ್ರದಲ್ಲಿ ಅಡಕವಾಗಿರಬಹುದೆಂದೂ ಊಹಿಸಲೆಡೆಯಿದೆ.

"ಉಷಸ್" ಸ್ತ್ರೀದೇವತೆಯ ವರ್ಣನೆಯು ಹೃದಯಂಗಮವಾಗಿಯೂ ವಿಸ್ತಾರವಾಗಿಯೂ ಪ್ರಕೃತಿಯ ನೈತಿಕ ಚಿತ್ರದಿಂದೊಡಗೂಡಿದ್ದೂ ಪಠಿಸಬೇಕಾದ್ದೂ ಆಗಿದೆ. ಅಶ್ವಿನೀ ದೇವತೆಗಳ ರಥವನ್ನು ಸೂರ್ಯನ ಮಗಳು ನಡೆಸುತ್ತಿದ್ದಳಂತೆ. ಅವರು ವೈದ್ಯ ರಾಜರು. ಯುದ್ಧದಲ್ಲಿ ಕಾಲುಕುಂಟಾದ ವಿಶಾಲಾದೇವಿಗೆ ಉಕ್ಕಿನ ಕಾಲನ್ನು ಜೋಡಿಸಿದರೆಂದೂ, ಭುಜ್ಯನನ್ನು ಸಮುದ್ರ ಮಧ್ಯದಿಂದ ಪಾರುಮಾಡಿದ್ದರೆಂದೂ ಅವರ ನಾನಾ ಅದ್ಭುತ ಕಥೆಗಳು ಪ್ರಥಮ ಮಂಡಲದಲ್ಲಿವೆ. ರುದ್ರನು ಮಹಾ ವೈದ್ಯನು. ಮರುತ್‌ಗಳು ರುದ್ರ ಹಾಗೂ ಪೃಷ್ಣಿಯರ ಮಕ್ಕಳು. ಶತ್ರುನಾಶ, ದೀರ್ಘಾಯುಷ್ಯ ಮೊದಲಾದವುಗಳಿಗೆ ಅಗ್ನಿಯೂ ಸ್ತುತಿಸಲ್ಪಡುತ್ತಾನೆ. ಊರ್ವಶೀ ಪುರೂರವರ ಸಂಭಾಷಣೆಯು ಋಗ್ವೇದದಲ್ಲಿದೆ.

"ಅಸುರ" ಎಂಬ ಶಬ್ದವು ಶಕ್ತಿಶಾಲಿ ಎಂಬರ್ಥದಲ್ಲಿ ದೇವತೆಗಳಿಗೆ ಉಪಯೋಗಿಸಲ್ಪಟ್ಟಿತ್ತು. ಅಸು ಎಂದರೆ ಪ್ರಾಣ. ಕೊನೆಗೆ ನಸುರಃ ಎಂಬ ಅರ್ಥದಲ್ಲಿ ಅದೇ ಶಬ್ದವು ರಾಕ್ಷಸರಿಗೆ ಉಪಯೋಗಿಸಲ್ಪಟ್ಟಿತು.

ಲೋಕಸೃಷ್ಟಿ, ಮರಣಾನಂತರದ ಪ್ರೇತಸ್ಥಿತಿ, ವಿಶಾಂತಿ, ಕಾಲಾಚಾರಗಳು ಇವನ್ನೆಲ್ಲ ಪ್ರತಿಪಾದಿಸುವ ಮಂತ್ರಗಳು ಋಗ್ವೇದದಲ್ಲಿವೆ. ನ ವೈ ಸ್ತ್ರೈಣಾನಿ ಸಖ್ಯಾನಿ ಸಂತಿ ಸಾಲಾವೃಕಾಣಾಂ ಹೃದಯಾನ್ಯೇತಾ (ಹತ್ತನೆಯ ಮಂಡಲ, ೯೫ ನೆಯ ಸೂಕ್ತ, ೧೫ನೆಯ ಮಂತ್ರ) ಈ ಮಂತ್ರದಿಂದ ಹೇಡಿಗಳು ವಿಶ್ವಾಸ ಯೋಗ್ಯರಲ್ಲವೆಂದು, ಸಂದರ್ಭಾನುಸಾರ ಹೇಳಿದ್ದು ಕಾಣುತ್ತದೆ. ಪತಿಯು ಮರಣ ಹೊಂದಿದಾಗ ಚಿತಾಪ್ರವೇಶ ಮಾಡುವ ಸಂಪ್ರದಾಯವಿತ್ತೆಂದೂ, ಒಬ್ಬಳು ಚಿತೆಯ ಬಳಿಯಿಂದ ಹಿಂತಿರುಗಿ ಮೈದುನನೊಂದಿಗೆ ವಿವಾಹವಾದಳೆಂದೂ (ಹತ್ತನೆಯ ಮಂಡಲ ೧೮ನೆಯ ಸೂಕ್ತ) ಕಂಡುಬರುತ್ತದೆ.

ವೇದಮಂತ್ರಗಳ ಕಾಲ ೨೫೦೦ ಕ್ರಿ. ಪೂ. ಎಂದು ಪಾಶ್ಚಾತ್ಯರು ಕೆಲವರು ಹೇಳುತ್ತಾರೆ. ೪೫೦೦ ಕ್ರಿ. ಪೂ. ಎಂದೂ ಹೇಳುತ್ತಾರೆ. ಕೃತ್ತಿಕಾ ನಕ್ಷತ್ರವನ್ನು ಆಧಾರವಾಗಿ ತೆಗೆದುಕೊಂಡು ೬೦೦೦ ಕ್ರಿ. ಪೂ. ಎಂದೂ ತಿಲಕರು ನಿರ್ಧರಿಸಿದ್ದಾರೆ.

ಸಿಂಧುನದಿಯ ಸಮೀಪದಲ್ಲಿ ಅಂದಿನ ಋಷಿಗಳು ವಾಸಿಸುತ್ತಿದ್ದರೆಂದು ತಿಳಿಯುತ್ತದೆ. ಪುರೋಹಿತರ ತಪೋಬಲದಿಂದಲೂ, ಮಂತ್ರಾಲೋಚನೆಯಿಂದಲೂ ರಾಜರು ಶತ್ರುಗಳನ್ನು ಜಯಿಸುತ್ತಿದ್ದರೆಂದೂ "ವಸಿಷ್ಠಸ್ಯ ಸ್ತುವತ ಇಂದ್ರೋ" (೭ ನೆಯ ಮಂಡಲ ೩೩ನೆಯ ಸೂಕ್ತ) ಎಂಬ ಮಂತ್ರದಿಂದ ತಿಳಿಯುತ್ತದೆ. ಋಗ್ವೇದ ಕಾಲದಲ್ಲಿ ಕ್ಷತ್ರಿಯರೆಲ್ಲರೂ ಯುದ್ಧಪ್ರಿಯರಾಗಿದ್ದರೆಂದು ತಿಳಿದುಬರುತ್ತದೆ. ಹೀಗೆ ನಾನಾ ವಿಷಯಗಳು ನೃತ್ಯ ಗೀತಾದಿ ಜ್ಞಾನಗಳು ವೇದಕಾಲದಲ್ಲಿ ಆರ್ಯರಲ್ಲಿ ರೂಢವಾಗಿದ್ದವೆಂದು ತಿಳಿದುಬರುತ್ತದೆ.

ಯಜುರ್ವೇದ

ಇದರಲ್ಲಿ ಅನೇಕ ಅಧ್ಯಾಯಗಳಿವೆ. ಅಗ್ನಿಷ್ಟೋಮ ಮೊದಲಾದ ನಾನಾ ಯಾಗಗಳ ಮಂತ್ರಗಳಿವೆ. ಈ ಯಜುರ್ವೇದವು ಕೃಷ್ಣ ಶುಕ್ಲ ಎಂದು ಎರಡಾಗಿ ವಿಭಾಗಿಸಲ್ಪಟ್ಟಿದೆ. ಶುಕ್ಲ ಯಜುರ್ವೇದದ ೧೬ ನೆಯ ಮತ್ತು ೩೦ ನೆಯ ಅಧ್ಯಾಯಗಳಲ್ಲಿ ಚಾತುರ್ವರ್ಣ್ಯ ವಿಭಾಗವು ಉಕ್ತವಾಗಿದೆಯೆಂದು ಹೇಳುತ್ತಾರೆ ವಿಷ್ಣುವಿಗೆ ಪ್ರಾಧಾನ್ಯವು ಯಜುರ್ವೇದದಲ್ಲಿ ಕಾಣಿಸುತ್ತದೆ. ಸರ್ಪಪೂಜೆಯೂ ಯಜುರ್ವೇದಾಂತರ್ಗತವಾಗಿದೆ. ಅಂತೂ ಶ್ರೌತ ಕರ್ಮಗಳು ನಾನಾ ರೀತಿಯಲ್ಲಿ ಯಜುರ್ವೇದದಲ್ಲಿ ಪ್ರತಿಪಾದಿಸಲ್ಪಟ್ಟಿವೆ.

ಸಾಮವೇದ

ಇದರಲ್ಲಿ ಕೌಥುಮ, ಜೈಮಿನೀಯ ಮೊದಲಾದ ಅನೇಕ ಶಾಖೆಗಳಿವೆ. ಸೋಮ ಕಾಲದಲ್ಲಿ ಸೋಮದೇವತೆ ಮೊದಲಾದ ದೇವತೆಗಳನ್ನು ಕುರಿತು ಹಾಡುವ ಗಾನಗಳು ಇವೆ. ಚರಿತ್ರೆಗೆ ಸಂಬಂಧಿಸಿ ಹೆಚ್ಚು ವಿಷಯಗಳು ಸಾಮವೇದದಿಂದ ದೊರೆಯಲಾರವು.

ಅಥರ್ವವೇದ

ಇದನ್ನು ಬ್ರಹ್ಮವೇದವೆಂದೂ ಹೇಳುತ್ತಾರೆ. ಇದರಲ್ಲಿ ಇಪ್ಪತ್ತು ಕಾಂಡಗಳೂ ೭೩೦ ಸೂಕ್ತಗಳೂ ಇವೆ. ಜಲೋದರ ರೋಗ, ಅಜೀರ್ಣ ನಿವಾರಣೆ ಮೊದಲಾದ ಆಯುರ್ವೇದ ಭಾಗದ ಮಂತ್ರಪಾದಗಳ ಭಂಡಾರವಿದು. ಪುಂಸವನ ವಿವಾಹ ಮೊದಲಾದ ಕಾರ್ಯಗಳೂ, ರಾಜಕೀಯ ವಿಚಾರಗಳೂ, ಪುರುಷಸೂಕ್ತವೂ ಇದರಲ್ಲಿ ಅಡಕವಾಗಿವೆ. ವಿವಾಹವಿಷಯದ ಮೊದಲಾದ ಕೆಲವು ಋಗ್ವೇದದ ದಶಮ ಮಂಡಲದಲ್ಲಿ ಹೇಳಿದ್ದಷ್ಟೇ ಇಲ್ಲಿಯೂ ಹೇಳಿದಂತೆ ಕಾಣುತ್ತದೆ. "ಅಮೂರ್ಯಾಯಂತಿ ಯೋಷಿತೋ ಹಿರಾ ಲೋಹಿತವಾಸಸಃ ಅಭ್ರಾತರ ಇವ ಜಾಮಯಸ್ತಿಷ್ಠಂತು ಹತವರ್ಚಸಃ" ಇದು ರಕ್ತಸ್ರಾವ ನಿವಾರಕ ಮಂತ್ರ. "ಸರ್ವೇಷಾಂ ಚ ಕೃಮೀಣಾಂ ಸರ್ವಾಸಾಂ ಚ ಕೃಮೀಣಾಂ ಭಿನದ್ಮ್ಯಶ್ಮನಾ ಶಿರೋ ದಹಾಮ್ಯಗ್ನಿನಾ ಮುಖಂ" ಇದು ಕೃಮಿನಿವಾರಕ ಮಂತ್ರ. ರೋಗಗಳನ್ನು ಕೂಡ ಮಂತ್ರೋಚ್ಚಾರಣೆಯಿಂದಲೇ ನಿವಾರಣೆ ಮಾಡುವದಿದ್ದರೆ ವೈದ್ಯಕೀಯ ವಿಷಯವು ಇದೇ ಮಂತ್ರದಲ್ಲಿ ಅಡಕವಾಗಿರಬಹುದೆಂದು ಹೇಳಬೇಕಾಗಿಲ್ಲ. ಉದಾ– ಮೇಲಿನ ಮಂತ್ರದಲ್ಲಿ ಕೃಮಿಗಳ ಮುಖವನ್ನು ಅಗ್ನಿಯಿಂದ ಸುಡುತ್ತೇನೆ ಎಂದು ಹೇಳಿದ್ದೂ ವಿಚಿತ್ರವಾಗಿ ತೋರಬಹುದು. ಆದರೆ ಅಗ್ನಿಯೆಂದರೆ ಚಿತ್ರಮೂಲವೆಂದೂ, ಚಿತ್ರಮೂಲವು 'ಕೃಮಿನಿವಾರಕ ಔಷಧಿಯೆಂದೂ ಇದೇ ರೀತಿಯಲ್ಲಿ ಪ್ರತಿಯೊಂದು ರೋಗದ ಮಂತ್ರದಲ್ಲಿಯೂ ವೈದ್ಯಶಾಸ್ತ್ರವು ಓತಪ್ರೋತವಾಗಿರುತ್ತದೆ.

ಉಪಸಂಹಾರ

ಅಂತೂ ನಾಲ್ಕೂ ವಿಭಾಗಗಳಿಂದ ಕೂಡಿದ ವೇದದಲ್ಲಿ ಸಕಲ ಜ್ಞಾನ ವಿಷಯಗಳು ಅಡಕವಾಗಿರುವ ಕಾರಣ ಬೇರೆ ಯಾವ ಗ್ರಂಥದಲ್ಲೂ ಸರ್ವತೋಮುಖವಾದ ವಿಷಯಗಳ ಪುಷ್ಟಿಯು ಇಲ್ಲದ್ದರಿಂದ ವೇದವೊಂದೇ ಜ್ಞಾನದಾಯಕ ಗ್ರಂಥವು ಎಂದು ಹಿಂದಿನವರು ನಂಬಿದ್ದರು.

ವಿಚಾರದ್ವಂದ್ವ

[illegible] — ಸಂ.

*

ಪ್ರಾಥಮಿಕ ಶಾಲೆಗಳಿಗೆ ಪಂಚರು ಬೇಕೆ?

ಶಿಕ್ಷಕರೆಂದರೆ ಏನೊಂದು ಅಧಿಕಾರವಿಲ್ಲದ ಪ್ರಾಣಿಎಂದು ಎಷ್ಟೋ ಜನರ ಅಭಿಪ್ರಾಯವಿದೆ ಮತ್ತು ಜನರು ಅನ್ನುವಂತೆ ಹುಡುಗರ ಮೇಲೆ ಸಹ ಅಧಿಕಾರವಿರುವದಿಲ್ಲ. ಇನ್ನುಳಿದ ಅಧಿಕಾರವಂತೂ ದೂರೇ ಉಳಿದಿದೆ. ಇದು ಮೇಲಧಿಕಾರಿಗಳಿಗಾದರೂ ಮಹತ್ವವೆನಿಸದೆ ಇದ್ದದ್ದು ಶಿಕ್ಷಕರ ದುರ್ದೈವ ಎಂದರೆ ತಪ್ಪಾಗಲಿಕ್ಕಿಲ್ಲ.

ಶಾಲೆಯು ಕೆಲಸವು ಸುಸೂತ್ರ ನಡೆಯಬೇಕೆಂದು ಸರಕಾರದವರು ಆಯಾ ಊರೊಳಗಿನ ಪ್ರಮುಖ ಜನರನ್ನು ಶಾಲಾಪಂಚರಾಗಿ ನೇಮಿಸಿರುವರು. ಇವರು ಶಾಲೆಗೆ ಹುಡುಗರನ್ನು ಕೂಡಿಸಿಕೊಡುವದು, ಪರೀಕ್ಷಕರ ಅಪೇಕ್ಷೆಯಂತೆ ಶಾಲೆಯ ಕೆಲಸಕ್ಕೆ ಸಹಾಯಮಾಡುವದು, ಶಾಲೆಯ ಕೆಲಸವು ಯೋಗ್ಯರೀತಿಯಿಂದ ನಡೆದದೆಯೋ ಇಲ್ಲವೋ ಎಂಬದನ್ನು ವಿಚಾರಿಸಿ ಸಂದರ್ಶನದಲ್ಲಿ ಇದ್ದಸ್ಥಿತಿ ಬರೆಯುವದು ಮಾಸ್ತರರ ಅನಾನುಕೂಲತೆಯನ್ನು ದೂರಮಾಡುವದು ಮುಂತಾದ ಕೆಲಸಗಳನ್ನು ಮಾಡಬೇಕಾಗುವದು. ಇನ್ನು ಸ್ಕೂಲಪಂಚರ ನೇಮಣೂಕಿಯು ಅವಶ್ಯಕವೋ ಎಂಬದನ್ನು ವಿಚಾರಿಸಿದರೆ, ಯೋಗ್ಯಾಯೋಗ್ಯತೆಯ ಮಾನದಿಂದ ಉಚ್ಚ ಶ್ರೇಣಿಯ ಗ್ರಾಮ, ಮಧ್ಯಮ ಶ್ರೇಣಿಯ ಗ್ರಾಮ, ಹಾಗೂ ಕನಿಷ್ಠ ಶ್ರೇಣಿಯ ಗ್ರಾಮ ಎಂದು ಮೂರು ಭಾಗಗಳನ್ನು ಮಾಡಬಹುದು. (೧) ಉಚ್ಚಶ್ರೇಣಿಯ ಗ್ರಾಮಗಳಲ್ಲಿ ಅಂದರೆ ಪಟ್ಟಣಗಳಲ್ಲಿಯಂತೂ ಮ್ಯುನಸಿಪಾಲಿಟಿಯ ವ್ಯವಸ್ಥೆ ಇರುವದು. (೨) ಮಧ್ಯಮ ಶ್ರೇಣಿಯ ಗ್ರಾಮಗಳಲ್ಲಿ ಸುಶಿಕ್ಷಿತರಾದ ಕೆಲ ಜನರನ್ನಾದರೂ ಕಾಣಬಹುದು. ಇಲ್ಲಿ ಆರಿಸಲ್ಪಡುವ ಶಾಲಾಪಂಚರು ಬಹುತರವಾಗಿ ವಿದ್ಯಾವಂತರೇ ಇರುವರು. ವಿದ್ಯಾಂತರಲ್ಲಿ ವಿದ್ಯಾಭಿರುಚಿಯು ವಿಶೇಷವಾಗಿರುವದೆಂದು ಬೇರೆ ಹೇಳಬೇಕಾಗಿಲ್ಲ. ಇಂಥ ಜನರು ಸ್ಕೂಲ ಮೆಂಬರರಾಗುವದರಿಂದ ಶಾಲೆಯ ಕೆಲಸವು ಸುಸೂತ್ರ ನಡೆದು, ಶಿಕ್ಷಣದ ಧ್ಯೇಯವು ಚನ್ನಾಗಿ ಸಾಗಿಸುವದು. (೩) ಅದೇ ಕನಿಷ್ಠ ಶ್ರೇಣಿಯ ಗ್ರಾಮಗಳಲ್ಲಿ ಅಂದರೆ ಒಬ್ಬಿಬ್ಬ ಮಾಸ್ತರರಿರುವ ಶಾಲೆಯ ಊರುಗಳಲ್ಲಿ ಶಾಲೆಯ ಪಂಚರ ವಿದ್ಯಮಾನ ಸ್ಥಿತಿಯು ವಿದ್ಯೆಯ ಮಾನದಿಂದ ಬಹಳ ಶೋಚನೀಯವಾಗಿರುವದು. ಅವರಿಗೆ ಸ್ವತಃ ಅಕ್ಷರ ಜ್ಞಾನವಿರುವದೊತ್ತಟ್ಟಿಗಿರಲಿ. ಮಾಸ್ತರನ ಹೊರತು ಅಂಥವರ ದರ್ಶನವು ಕೂಡಾ ದುರ್ಲಭವೆಂದು ಹೇಳಿದರೆ ತಪ್ಪಾಗಲಾರದು. ಯಾಕಂದರೆ ಅವರು ಉರಟು ಗೊಂಗಡಿಯ ಹೊರತು ನೋರಿಯ ಕಂಬಳಿಯನ್ನರಿಯದ ಶಿರೋಮಣಿಗಳು.

ವಿದ್ಯೆಯ ಮಹತ್ವವನ್ನರಿಯದ ಪಂಚ ಜನರಿಗೆ ತಮ್ಮ ಪಂಚತ್ವದ ತಪ್ಪುತಿಳುವಳಿಕೆಯಾಗಿ ಸ್ವತಂತ್ರವೃತ್ತಿಯ ಮಾಸ್ತರರ ಉತ್ಕರ್ಷವು ಅವರ ಕಣ್ಣಲ್ಲಿ ಚುಚ್ಚುತ್ತಿರುವದು. ಒಮ್ಮೊಮ್ಮೆ ಪಂಚರಲ್ಲೊಬ್ಬರೆ ಮಾಸ್ತರನಿಗೆ ಕೈಗಡ ರೂಪಾಯಿಗಳನ್ನಾಗಲಿ ಅಥವಾ ಯಾವದೇ ನೆಪದಿಂದ ಚಹಾ ಫರಾಳ ವಗೈರೆ ಬೇಡುತ್ತಿರುವದೂ ಉಂಟು. ಅದು ಸಿಗದೆಹೋದರೆ ಕೂಡಲೇ ಮಾಸ್ತರನ ವಿರುದ್ಧ ಅರ್ಜಿಗಳು ಹೋದವೆಂತಲೇ ತಿಳಿಯಬೇಕು. ಶಕ್ಯವಾದ ಮಟ್ಟಿಗೆ ಮಾಸ್ತರ ಹಾಗೂ ಊರಜನರ ಜಿವ್ಹಾಳ ಸಂಬಂಧವನ್ನು ಕತ್ತರಿಸಲು ಪ್ರಯತ್ನಮಾಡುವರು. ಎಷ್ಟೋ ಜನ ಪಂಚರು ನಾವು ಮಾಸ್ತರನ ಹಾಗು ಡೆಪ್ಯುಟಿಯವರ ನಡುವಣ ವಿವಕ್ಷಿತ ಮಟ್ಟಿನ ಅಧಿಕಾರಿಗಳು ಅಥವಾ ಖುದ ಡೆಪ್ಯುಟಿಗಳೆಂದು ಭಾವಿಸಿ ತಮ್ಮ ದಿಮಾಖದಲೇ ವರ್ತಿಸುವರು. ಶಾಲೆಗೆ ಇರತಕ್ಕ ಕೊರತೆಗಳನ್ನು ಅದನ್ನು ದೂರ ಮಾಡಲಿಕ್ಕೆ ಮಾಸ್ತರರಿಗೆ ಸಹಾಯ ಮಾಡತಕ್ಕದ್ದೇ ಅವರ ಕರ್ತವ್ಯವೆಂದು ನಾನು ಧೈರ್ಯದಿಂದ ಹೇಳುತ್ತೇನೆ. ಗ್ರಾಮಸ್ಥರು, ಪೋಲೀಸರು ಹೊರತಾದ ಇತರ ನೌಕರರ ಮೇಲೆ ಪಂಚರನ್ನು ನೇಮಿಸಿರುವದಿಲ್ಲ. ಅಂದಬಳಿಕ ಮಾಸ್ತರನ ಬಗ್ಗೆಯೇ ಈ ಕಲ್ಪನೆಯೇಕೆ?

ಈ ವಿಷಯದಲ್ಲಿ ಸುಧಾರಣೆಯಾಗಬೇಕಾದರೆ ನಮ್ಮ ಪರೀಕ್ಷಕರು ಈಗಿನ್ನ ಪದ್ಧತಿಯಲ್ಲಿ ಕೆಲವು ಹೆಚ್ಚು ಕಡಿಮೆ ಮಾಡಬೇಕು. ಪಂಚರು ಶಾಲೆಗೆ ಬಂದುಹೋಗುವ ವೇಳೆಯು ನಿಯಮಿತವಾದದ್ದಾಗಿರಬೇಕು. ಹಾಜರಿಯ ಬಗ್ಗೆ ಒಂದು ಡಾಯರಿಯನ್ನಿಟ್ಟು, ಅದರಲ್ಲಿ ಶಾಲೆಗೆ ಮಾಡಿದ ಸಹಾಯ ಇತ್ಯಾದಿ ಸಂಗತಿಗಳನ್ನು ಮಾಸ್ತರರಿಂದ ಬರೆಯಿಸಿಕೊಂಡು ಹೋಗಬೇಕು. ಪರೀಕ್ಷಕರು ಬಂದಾಗ ಆ ಡಾಯರಿಯನ್ನು ತಪಾಸಮಾಡಿ ವರಿಷ್ಠರ ಕಡೆಗೆ ತಮ್ಮ ಅಭಿಪ್ರಾಯ ಸಹಿತ ರಿಪೋರ್ಟ ಮಾಡಬೇಕು.

ಸ್ವಲ್ಪದರಲ್ಲಿ ಹೇಳುವದೆಂದರೆ, ಶಾಲೆಯ ಮಹತ್ವವನ್ನರಿತವರೂ ವಿದ್ಯಾವಂತರೂ ಶಿಕ್ಷಣಾಭಿಮಾನಿಗಳೂ ಆದ ಜನರು ಪಂಚರ ಜಾಗೆಗೆ ಯೋಗ್ಯರು. ಉಳಿದವರು ಎಂದಿಗೂ ಅಯೋಗ್ಯರು. ಹಳ್ಳಿಗಳಲ್ಲಿ ಸಿರಿವಂತರೇ ಪಂಚರಿರುವದು ಹೆಚ್ಚು. ಇವರಾದರೂ ಹೆಬ್ಬೆಟ್ಟಿನವರು, ಹೆಬ್ಬೆಟ್ಟನ್ನೂರಬೇಕಾದರೂ ಕೈ ನಡುಗಿಸುವರು. ದುಡ್ಡಿದ್ದವನೇ ದೊಡ್ಡಪ್ಪನೆಂಬ ಹಳೆರೂಢಿಯ ಮಾತಿನಂತೆ ಹಳ್ಳಿಗಳಲ್ಲಿ ಹೆಚ್ಚಾಗಿ ಇಂಥವರೇ ಪುಢಾರಿಗಳಿರುವದರಿಂದ ಇವರನ್ನೇ ಪಂಚರನ್ನಾಗಿ ನೇಮಿಸಿರುವ ಮೊದಲಿನ ಪದ್ಧತಿಯುಂಟು. ಆದರೆ ಇಂಥ ಜನರು ಈ ಸ್ಥಳಕ್ಕೆ ಪೂರ್ಣ ಅಯೋಗ್ಯರು. ಪಂಚರು ಮಾಸ್ತರರಿಗೆ ಅಧಿಕಾರಿಗಳಾಗಿರದೆ ಸಹಕಾರಿಗಳು ಅಥವಾ ಸಹಾಯಕರೆಂದು ತಿಳಿಯುವಂತಾಗಬೇಕು.

ಹದಲಬಾಗಿ — ಶಿವಪುತ್ರ ಮ. ಸತ್ತಿ

× × ×

ಕೊಲ್ಹಾಪುರ ಮಹಾರಾಷ್ಟ್ರೀಯರ ಮನೋವೃತ್ತಿ

ಮುಂಬಯಿಯ "ಲೋಕಸತ್ತಾ" ಮರಾಠಿ ದಿನಪತ್ರಿಕೆಯ ದಿನಾಂಕ ೧೩-೪-೪೯ ರ ಸಂಚಿಕೆಯಲ್ಲಿ "ಕೊಲ್ಹಾಪುರ ಸಂಯುಕ್ತಕರ್ನಾಟಕ ಅಘಾಡಿ!" ಎಂಬ ಶಿರೋನಾಮದಲ್ಲಿ, ಕೊಲ್ಹಾಪುರ ಕರ್ನಾಟಕ ಏಕೀಕರಣ ಸಂಘವನ್ನು ಟೀಕಿಸಲು, ಒಬ್ಬ ಮಹಾರಾಷ್ಟ್ರಾಭಿಮಾನಿಯು ತೊಡಗಿರುವನು. ಅದರೊಟ್ಟಿಗೇ ಉಡುಪಿ ಹೊಟೆಲುಗಳನ್ನು ನಿಂದಿಸಿ "ಇವರು ಮಹಾರಾಷ್ಟ್ರದಲ್ಲಿ ಇಡ್ಲಿ ದೋಸೆ ಮಾರಿ ಬಹಳ ಹಣ ದೋಚಿಕೊಂಡು, ಈಗ ಇಂಥಾ ಪ್ರಮಾದಕ್ಕೂ ಇಲ್ಲಿ ಇಳಿದಿರುವ ಅಧಿಕಪ್ರಸಂಗಿಗಳು" ಎಂದೂ ನಿಂದಿಸಿರುವನು. ಆದರೆ ನಮ್ಮ ಜಾಹಿರಾತು ಈ ರೀತಿ ಅನಾಯಾಸವಾಗಿ ಆಗುವುದಕ್ಕಾಗಿ ನಾವು ಅವರಿಗೆ ಕೃತಜ್ಞರೇ ಸರಿ! ಆದರೆ ಈ ಮಹಾರಾಷ್ಟ್ರಾಭಿಮಾನಿಗಳು, ತಮ್ಮ ಕೂಪಮಂಡೂಕ ಮನೋವೃತ್ತಿಯಿಂದ, ಒರಟು ಸ್ವಭಾವ ಪ್ರದರ್ಶನದಿಂದ, ತಮ್ಮ ಮಹಾರಾಷ್ಟ್ರಕ್ಕೇ ಘಾತುಕರಾಗಿದ್ದಾರೆ ಎಂಬುದನ್ನು ಇನ್ನಾದರೂ ತಿಳಕೊಂಡರೆ ಅವರಿಗೇ ಹಿತವಾಗುವುದು. ಇಂಥಾ ನಿಂದೆಗಳು ಅವರವರ ಮತ್ಸರಬುದ್ಧಿಯ ಹೊಗೆಯಾಟವಲ್ಲದೆ, ಇದು ಮಹಾರಾಷ್ಟ್ರದ ಒಳ್ಳೆತನ್ನಾಗಲೀ, ಕರ್ನಾಟಕದ ಹಾಳನ್ನಾಗಲೀ ಸಾಧಿಸಲಾರದು. ಆದ್ದರಿಂದ ನಮ್ಮ ವಿನಂತಿಯಿಷ್ಟೇ: "ನಮ್ಮದು ನಮಗೇ ಬೇಕು; ನಿಮ್ಮದನ್ನು ಎತ್ತಿಕೊಳ್ಳುವ ಚಳವಳವು ನಮ್ಮದಿಲ್ಲ; ನೀವಾದರೂ ಬೆಂಗಳೂರು, ಹುಬ್ಬಳ್ಳಿ, ನಾಗಪುರ ಇತ್ಯಾದಿ ಭಾಗಗಳಲ್ಲಿ ವಾಸಿಸಿಕೊಂಡಿರುವ ಮಹಾರಾಷ್ಟ್ರಿಗರನ್ನು ವಿಚಾರಿಸಿ ತಿಳಕೊಳ್ಳಿ. ಸರಳ ರಸ್ತೆಯು ನಮಗೆ— ನಿಮಗೆಂದಲ್ಲ, ಎಲ್ಲರಿಗೂ ತೆರದಿಟ್ಟಿದ್ದೇ!" ಕೊಲ್ಹಾಪುರವಾಗಲೀ, ಇನ್ನಾವುದೇ ಇರಲಿ, ನಮಗೆ ಕನ್ನಡಿಗರಿಗೆ, ಕನ್ನಡ ಭಾಷೆ, ಸಂಯುಕ್ತಕರ್ನಾಟಕದ ಸೇವೆಗಳು ಬೇಕೇ ಬೇಕು. ನಾವದನ್ನು ಶಿಸ್ತಿನಿಂದ, ಯಾರ ಅಹಿತವನ್ನೂ ಮಾಡದ ಜಾಗ್ರತಿಯಿಂದ, ಮುಂದರಿಸುತ್ತಾ ಇರುತ್ತೇವೆ. ಇಲ್ಲಿ ಕನ್ನಡಶಾಲೆ, ವಾಚನಾಲಯ, ಕನ್ನಡಿಗರ ಸಂಘಟನೆ ಇತ್ಯಾದಿಗಳನ್ನು ಮಾಡುವದು ನಮ್ಮ ಕರ್ತವ್ಯವಿದೆ.

"ಕೊಲ್ಹಾಪುರ ಕನ್ನಡಿಗ"

ಮೃತ್ಯುಲೀಲೆ

ರೀತಿಗಳು ಬದಲಾಗಬಹುದು, ಸಾಮ್ರಾಜ್ಯಗಳು ಏಳಬಹುದು ಬೀಳಬಹುದು; ಆದರೆ ಮೃತ್ಯು ಮಾತ್ರ ಇದ್ದಂತೆಯೆ ಇರುವದು. ಅದೊಂದು ಕಠೋರ ಸತ್ಯ ಪ್ರತಿಯೊಂದು ವ್ಯಕ್ತಿಯೂ ಅದನ್ನು ಅನುಭವಿಸಲೇಬೇಕು ಆ ಸತ್ಯಕ್ಕೆ ಇತಿಹಾಸವೇ ಇಲ್ಲ ಮತ್ತು ಆ ಕಾರಣದಿಂದಲೇ ರಾಜಕೀಯ ಆರ್ಥಿಕ, ವೈಜ್ಞಾನಿಕ ಅಥವಾ ಕಲಾತ್ಮಕವಾದ ಐತಿಹಾಸಿಕ ಪರಿವರ್ತನೆಗಳು ಅದರ ಮೇಲೆ ಯಾವ ಪರಿಣಾಮವನ್ನೂ ಮಾಡುವದಿಲ್ಲ.

—ಅಲ್ಡಸ್ ಹಕ್ಸ್ಲೆ

ಲೇಖಕರು ಮತ್ತು ಚಿತ್ರಕಾರರು
ಶ್ರೀ ಜ. ನಾ. ಕಮಲಾಪುರ

... ಕಲಾಕೃತಿಗಳು

...ನೇಕ ಮೂರ್ತಿಗಳ ಭಂಗ

...ಗಳ ...ಂಬೇರಿಯೆ. ... ಕುರುಳು, ... ಕೈಗೆ ಕನ್ನಡಿ, ...ತ್ತು ಅಕ್ಕಪಕ್ಕ ...ಗಳ ಮತ್ತು ...ಕ್ಕ ಮೂರ್ತಿ

...ಗಿರುವ ತ್ರಿವೇಣಿ ...ದ ಗಂಗಾವತರ ...ದೂಹಿಸಲಾಗಿದೆ.

...ರ್ಭಜ ಶಂಕರ ...ಯನ್ನು (ಎತ್ತರ ...ತೆಯೂ ಅವಳು ... ಸರಿಯುವಂತೆ ...ೀಟದ ಮೇಲ್ಬ ...ಗಳು ಕೆತ್ತಿದ್ದ ...ಗಾ-ಯಮುನಾ ...ಲಾಗಿದೆ. ಇದರ ...ವಾದಿಗಳ ಚಿಕ್ಕ ...ಬ್ಬ ಅರಸನೂ

...ನುಭಗೀರಥನೆಂದು

...ಾರಸಂಭವ ಕಾವ್ಯ ...ವನ್ನು ಶಬ್ದಗಳಲ್ಲಿ ... ವಿವಾಹಮಂಗಲ ...ವನ್ನು ಮೂರ್ತೀ ...ಣೀಸಂಗಮು" ...ಅಡಿ ಎತ್ತರದ ...ರಳು ಯಜ್ಞೋ ...ಕ ಹಾರಗಳಿಂದ ... ಪಾರ್ವತಿ ಅನು ...ತಲೆಯೊಲೆಸಿದ್ದರೂ ...ದ್ದಾಳೆ. ಅವಳ ...ರಾರಗಳು. ಅವಳ

ಉರೋಭಾಗ ವಸ್ತ್ರಹೀನವಾಗಿದೆ. ಅವಳ ಬಲಗೈ ಶಿವನ ಎಡಗೈಯಲ್ಲಿತ್ತೆಂದು ಊಹಿಸಬಹುದು. ಆದರೆ ಶಿವನ ನಾಲ್ಕು ಕೈಗಳಲ್ಲಿ ಮೂರು ಭಿನ್ನವಾಗಿವೆಯಲ್ಲದೆ ಪಾರ್ವತಿಯ ಎರಡೂ ಕೈಗಳು ಮುರಿದಿವೆ. ಇಷ್ಟಾದರೂ ಅತುಲ ಸೌಂದರ್ಯದಿಂದ ಈ ಚಿತ್ರ ಶೋಭಿಸುತ್ತಿದೆ. ಅಪ್ಸರೆಯರ ಪುಷ್ಪ ವರ್ಷಣ, ಪುರೋಹಿತ, ಕನ್ಯಾಪಿತೃ ಮೊದಲಾದವರನ್ನೊಳಗೊಂಡು ಪ್ರಭಾವಲಯದಿಂದ ವಲಯಿತವಾದ ಈ ವಿಗ್ರಹ ಎಲಫೆಂಟದ ಅತಿಸುಂದರ ಕೃತಿಗಳಲ್ಲೊಂದು.

"ಅರ್ಧನಾರೀಶ್ವರ"ದ ಬಲಗಡೆ ಇರುವ **ಶಿವಪಾರ್ವತಿ** ವಿಗ್ರಹ ಅವರ ಪ್ರಣಯ ಕಲಹವನ್ನು ಚಿತ್ರಿಸುತ್ತದೆಯೆಂದು ಹಲವರ ಮತ. ಇಬ್ಬರೂ ಕೈಲಾಸ ಪರ್ವತದ ಮೇಲೆ ಕುಳಿತಿದ್ದಾರೆ. ಆದರೆ ಅವರ ಎಲ್ಲ ಕೈಗಳೂ ಭಿನ್ನವಾಗಿದ್ದು ಚಿತ್ರದ ಅರ್ಥವೂ ಸ್ಪಷ್ಟವಾಗಿ ಆಗುವದಿಲ್ಲ. "ವಿವಾಹಮಂಗಲ"ದ ಎದುರಿಗಿರುವ ಕ್ರೋಧಾವಿಷ್ಟ ಭೈರವನ ಭೀಷಣ ಅಷ್ಟಬಾಹು ಮೂರ್ತಿ ಹನ್ನೊಂದೂವರೆ ಅಡಿ ಯೆತ್ತರವಾಗಿದ್ದು ಅದರ ಕೈಗಳಲ್ಲಿ ಮೂರು ಮಾತ್ರ ಈಗ ಉಳಿದಿವೆ. ರುಂಡಮಾಲೆ, ಸಂಹೃತ ನರನಾರಿಯರೇ ಮೊದಲಾದ ಭೈರವ ಸಹಜವಾದ ಇತರ ಸಂಕೇತಗಳೂ ಇವೆ. ಕೈಲಾಸ ಪರ್ವತವನ್ನೆತ್ತುವ ಸಾಹಸದಲ್ಲಿ ತೊಡಗಿದ **ರಾವಣನ** ಸನ್ನಿವೇಶವನ್ನು ಇನ್ನೊಂದು ಶಿಲ್ಪಕೃತಿ ಚಿತ್ರಿಸುತ್ತದೆ. ಮೇಲೆ ಶಿವ ಪಾರ್ವತಿಯರು ಕುಳಿತಿದ್ದಾರೆ. ಶಿವನ ಹಣೆಗಣ್ಣು ಸ್ಪಷ್ಟವಾಗಿ ಕಾಣಿಸುತ್ತಿದೆ. ಚಂದ್ರಕಲಾಮುಕುಟನಾದ ಅವನ ಬಳಿ ಭೀತಳಾದ ಪಾರ್ವತಿ. ಸುತ್ತಮುತ್ತ ಪರಿವಾರಗಣಗಳು. ಶಿವನ ಅಷ್ಟಬಾಹುಗಳೆಲ್ಲವೂ ರಾವಣನ ಇಡಿ ಮೂರ್ತಿಯೂ ವಿಚ್ಛಿನ್ನವಾಗಿವೆ.

ಮಹಾಮಂಟಪವನ್ನು ಪ್ರವೇಶಿಸಿದೊಡನೆ ಬಲಗಡೆಗಿರುವ **ತಾಂಡವ** ನೃತ್ಯದ ವಿಗ್ರಹವೂ ಅತ್ಯಂತ ಸತ್ವಯುತವಾದ ಕೃತಿಯು. ಶಿವಪಾರ್ವತಿಯರ ನಾಟ್ಯಲೀಲೆಯನ್ನು ಚಿತ್ರಿಸುವ ಇದರ ಬಹುಭಾಗ ಭಗ್ನವಾಗಿದೆ. ತಪಸ್ವಿಶಿವನನ್ನು ಮೂರ್ತೀಕರಿಸುವಂತೆ ತೋರುವ **ಮಹಾಯೋಗಿಯ**ವಿಗ್ರಹ ಪದ್ಮಾಸನಸ್ಥಿತವಾಗಿ ನಾಸಾಗ್ರದೃಷ್ಟಿಯಾಗಿ ಪ್ರಶಾಂತ ಗಂಭೀರವಾಗಿದೆ. "ತಾಂಡವ"ದ ಎದುರಿಗಿರುವ ಇದು ಇನ್ನೂ ಹೆಚ್ಚು ಭಗ್ನವಾಗಿದೆ. ಅಶ್ವಾರೂಢ ಸೂರ್ಯ, ಗರುಡಾರೂಢ ವಿಷ್ಣುವೇ ಮೊದಲಾದವರನ್ನೊಡಗೊಂಡ ಈ ವಿಗ್ರಹದ ಸುತ್ತ ಪ್ರಭಾವಲಯವಿದೆ.

ಇತರ ಮಂಟಪಗಳು

ಈ ಎರಡು ಮುಖ್ಯ ಮಂಟಪಗಳಲ್ಲದೆ ಮುಖ್ಯ ಮಂಟಪದ ಎಡಕ್ಕೆ ಪೂರ್ವಾಭಿಮುಖವಾಗಿರುವ **ಶಿವಮಂದಿರದಲ್ಲಿ** ೨॥ ಅಡಿ ವ್ಯಾಸ, ೩ ಅಡಿ ಎತ್ತರದ ಒಂದು ಲಿಂಗ ಪ್ರತಿಷ್ಠಿತವಾಗಿದೆ. ಇದರ ನಾಲ್ಕು ಮಹಾದ್ವಾರಗಳ ಮುಂದೆ ೧೫ ಅಡಿ ಎತ್ತರದ ಎಂಟು ದ್ವಾರಪಾಲಕರಿದ್ದರು. ಆ ವಿಗ್ರಹಗಳಲ್ಲಿ ಇಂದು ಉಳಿದಿರುವದು ಒಂದೇ. ಈ ದ್ವಾರಪಾಲಕ ಮೂರ್ತಿ ಇಲ್ಲಿರುವ ಎಲ್ಲ ವಿಗ್ರಹಗಳಿಗಿಂತ ಶ್ರೇಷ್ಠವಾದ ಕಲಾಕೃತಿಯೆಂದು ಶಿಲ್ಪಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ.

ಈ ಮಂದಿರದ ದಕ್ಷಿಣಕ್ಕೆ ಹಾಗು ಮುಖ್ಯ ಮಂದಿರದ ಪಶ್ಚಿಮಕ್ಕೆ ಕಲ್ಲ ಕೆಳಗೊಂದು

ಅರ್ಧನಾರೀಶ್ವರ

ವಿಸ್ತಾರವಾದ ಜಲಾಶಯವಿದೆ. ಇದೂ ಒಂದು ಅದ್ಭುತವೇ. ಕಲ್ಲೊಳಗಿಂದ ಹರಿದು ಬರುವ ಜೀವಂತ ಝರಿಯೊಂದರಿಂದ ಇದಕ್ಕೆ ಸಾವಿರ ವರ್ಷಗಳಿಂದ ಸ್ವಚ್ಛವೂ ಶೀತಲವೂ ಆದ ನೀರು ಒದಗುತಿದೆ. ಇದಕ್ಕೆ ಇಳಿಯಲು ಹಿಂದೆ ಪಾವಟಿಕೆಗಳಿದ್ದಿರಬೇಕು. ಒಳಗೆ ಅಲ್ಲಲ್ಲಿ ಮುರಿದ ಕಂಬಗಳೂ ಕಲ್ಲ ತುಂಡುಗಳೂ ಕಾಣಿಸುತ್ತಿವೆ. ಕತ್ತಲು ತುಂಬಿದ ಈ ಜಲಾಶಯದ ಆ ತುದಿ ಕಾಣಿಸುವದಿಲ್ಲ. ಎಷ್ಟು ದೂರ ಹೋಗಿದೆಯೋ ಏನೊ.

ಇದಲ್ಲದೆ ಮುಖ್ಯ ಗುಹೆಯ ಪೂರ್ವಕ್ಕೆ ಉತ್ತರಾಭಿಮುಖವಾಗಿರುವ ಇನ್ನೊಂದು ೬೦ ಅಡಿ ಉದ್ದ ೨೫ ಅಡಿ ಅಗಲಾದ ಉಪ ಮಂಟಪದಲ್ಲಿ ಗಣಪತಿ, ಅಷ್ಟಮಾತೃಕೆ ಮತ್ತು ಶೂಲಪಾಣಿ ವಿಗ್ರಹಗಳಿವೆ. ಎದುರಿಗೆ ನಂದಿಯ ಶಿಲಾಸನವಿದ್ದರೂ ನಂದಿ ಮಾತ್ರ ಎಲ್ಲಿಯೂ ಕಾಣಿಸುವದಿಲ್ಲ. ಸುತ್ತಲೂ ಪ್ರದಕ್ಷಿಣಾಪಥವಿದೆ.

ಬೇರೆ ಗುಹೆಗಳು

ಈ ಮುಖ್ಯ ಗುಹೆಗಳಿಂದ ಸುಮಾರು ಅರ್ಧ ಮೈಲು ದೂರದಲ್ಲಿ ಮತ್ತೆ ಮೂರು ಗುಹೆಗಳಿವೆ. ಆದರೆ ಅವು ಬಹುಮಟ್ಟಿಗೆ ಬಿದ್ದುಹೋಗಿದ್ದು ಅವಶೇಷಮಾತ್ರವಾಗಿವೆ. ಅಲ್ಲಲ್ಲಿ ಭೂಮಿಯನ್ನು ಅಗೆದು ನೋಡಿದ ಗುಂಡಿಗಳು ಕಾಣುತ್ತವೆ: ಗುಪ್ತ ಧನದ ಶೋಧದ ಪ್ರಯತ್ನಗಳಿವೆಂದು ಬಲ್ಲವರ ಹೇಳಿಕೆ. ಇಲ್ಲಿಯ ಮಗುವಿಗೆ ಮೊಲೆಯೂಡುವ ತಾಯ ಮೂರ್ತಿಯೊಂದನ್ನು ಮುಂಬಯಿಯ ರಾಯಲ್ ಏಶಿಯಾಟಿಕ್ ಸೊಸಾಯಿಟಿಯ ವಸ್ತುಸಂಗ್ರಹಾಲಯದಲ್ಲಿ ಕಾಣಬಹುದು.

ಗುಹೆಗಳ-ಕಾಲ ಮತ್ತು ಇತಿಹಾಸ

ಈ ಶಿಲ್ಪಸೌಂದರ್ಯದ ಬೀಡಿನ ಕಾಲವನ್ನು ಸರಿಯಾಗಿ ನಿರ್ಣಯಿಸಲು ಸಾಕಷ್ಟು ಸಾಧನಗಳಿಲ್ಲ. ಇತಿಹಾಸದಲ್ಲಿ ಅದರ ನಿರ್ದೇಶವೂ ಕಾಣುವದಿಲ್ಲ. ಇದ್ದ ಒಂದೆರಡು ಶಾಸನಗಳೂ ಉಪಲಭ್ಯವಿಲ್ಲ. ಆದ್ದರಿಂದ ಇವುಗಳ ಶಿಲ್ಪವನ್ನು ಇತರ ಕೃತಿಗಳೊಂದಿಗೆ ಹೋಲಿಸುವದೊಂದೇ ಉಪಾಯವಾಗಿದೆ. ಇಲ್ಲಿಯ ಕಂಬಗಳು ವೇರೂಳಿನಲ್ಲಿಯ ಡಾಯರ ಗುಹೆಗಳ ಕಂಬಗಳನ್ನೂ ಮೂರ್ತಿಗಳು ಬಾದಾಮಿಯ ಮೂರ್ತಿಗಳನ್ನೂ ಹೋಲುತಿರುವದರಿಂದ ಇವು ಎಂಟನೆ ಶತಮಾನದ ಪೂರ್ವಾರ್ಧದಲ್ಲಿ ನಿರ್ಮಿತವಾಗಿರಬೇಕೆಂದು ನಿರ್ಧರಿಸಲಾಗಿದೆ.

ಘರಾಪುರಿಯ ಉಲ್ಲೇಖ ಮೊದಲಾಗಿ ಪುರಾಣಗಳಲ್ಲಿ ಕಾಣಬರುತ್ತದೆ. ಭಾಗವತದಲ್ಲಿ, ಕೃಷ್ಣನ ಮೊಮ್ಮಗನಾದ ಅನಿರುದ್ಧನನ್ನು ಮೋಹಿಸಿ ಅವನನ್ನು ಅಂತಃಪುರದಲ್ಲಿ ತಂದಿರಿಸಿಕೊಂಡು ವರಿಸಿದ ಉಷೆಯ ತಂದೆ ಬಾಣಾಸುರನ ರಾಜಧಾನಿಯಾದ ಶೋಣಿತಪುರಿ ಇದೇ ಆಗಿತ್ತಂತೆ. ಇಲ್ಲಿಯ ಕೆಂಪು

—೧೧ನೇ ಪುಟಕ್ಕೆ

ಮೂಲೆ ಮೂಲೆಗಳಿಂದ

ಯಾವ ವಿಧದ ಪ್ರತಿಭಟನೆಯೂ ಇಲ್ಲದೆ **ನಾನ್‌ಕಿಂಗನ್ನು ಪ್ರವೇಶಿಸಿದ ಕಮ್ಯೂನಿಸ್ಟರ ಮುನ್ನಡೆ**ಯನ್ನು ಕಂಡು ಕಾಂಗ್ರೆಸ್ಸಿನ ... ಚೀನೀಯರು ಮತ್ತು ವಿದೇಶೀಯರಲ್ಲಿ ಹಾಹಾಕಾರವೆದ್ದಿದೆ. ಕಾಂಗ್ರೆಸ್ಸನ್ನು ಕೂಡ ಚೀನೀ ರಾಷ್ಟ್ರೀಯ ಸೈನಿಕರು ತೆರವುಮಾಡಿಕೊಟ್ಟು ಹೋಗಬಹುದೆಂದು ಹೇಳುತ್ತದೆ. ಸ್ವಾರಸ್ಯವಾದ ಸಂಗತಿಯೆಂದರೆ, ತಾತ್ಕಾಲಿಕ ಅಧ್ಯಕ್ಷ ಲಿತ್ಸುಂಗ್ ಜೆನ್ನರ ಪತ್ನಿ ಊಟಿಯಾಗುತ್ತಿರುವಾಗ ಆಳುಮಗಳು ಊಟಗಾರರಿಗೆ ನೆರವಿತ್ತಳು; ಏಕೆ ಎಂದು ಕೇಳಿದರೆ, ಅವರನ್ನು ತಡೆಯುವುದಂತೂ ಸಾಧ್ಯವಿಲ್ಲ. ಬೇಕಾದ್ದನ್ನು ಅವರು ಬೇಗ ತೆಗೆದುಕೊಂಡು ಹೋಗಿಬಿಟ್ಟರೆ ರಗಳೆ ತಪ್ಪಿತು ಎಂದು ನಾನು ಹಾಗೆ ಮಾಡಿದ್ದಾಗಿ ಅವಳು ಹೇಳಿದಳು.

ಬಟೇವಿಯಾದಲ್ಲಿ ನಡೆಯುತ್ತಿರುವ ಡಚ್-ಇಂಡೊನೇಶಿಯನ್ ಶಾಂತಿ ಸಂಧಾನ ಮುಂದಿನವಾರದಲ್ಲಿ - ಅಪಯಶಸ್ಸಿನಿಂದ ಕೊನೆಗೊಂಡೀತೆಂದು ಪ್ರಜಾರಾಜ್ಯದ ಅಧಿಕಾರಿಗಳೂ ಸಂ. ರಾ. ಸಂಘದ ವೀಕ್ಷಕರೂ ಭಯವನ್ನು ವ್ಯಕ್ತಪಡಿಸಿದ್ದಾರೆ.

ಕೊಚಿನ್ ಚೀನವು ಇಂಡೋಚೀನದಲ್ಲಿ ಫ್ರೆಂಚರ ಬಲದಿಂದ ಸ್ಥಾಪಿತವಾಗುವ ಪ್ರಜಾರಾಜ್ಯಕ್ಕೆ ಸೇರಬೇಕೆಂದು ಅಲ್ಲಿಯ ಪ್ರತಿನಿಧಿ

[illegible] ... ಸಂಧಾನ ... ಹೊಂದಿದೆ.

ಭಾರತ ಪೋಲಂಡುಗಳ ನಡುವೆ ವ್ಯಾಪಾರದ ಒಡಂಬಡಿಕೆ ... ಪ್ರಕಾರ ಭಾರತ ಪೋಲೆಂಡಿಗೆ ... ಗಳು, ... ಸಾಧನಗಳು ಮತ್ತು ... ಕಳಿಸುತ್ತದೆ. ಭಾರತ ಅಲ್ಲಿಗೆ ... ಸೆಣಬು, ಶಾಗೆಬೀಜ, ... ಮತ್ತು ... (... ಕೋಟಿ ರೂ. ಬೆಲೆಬಾಳುವಷ್ಟು) ...

ರೋಮಿನಲ್ಲಿ ... ಮಂತ್ರಿ ... ಮುಖ್ಯಮಂತ್ರಿ ... ದೇಶಗಳಲ್ಲಿ ವಾಣಿಜ್ಯ ಸಂಬಂಧವನ್ನು ... ಕೊಳ್ಳುವ ವಿಷಯವಾಗಿ ... ದರು.

ಪಾಶ್ಚಾತ್ಯ ... ೨೫ ಚದುರ ಮೈಲಿನ ಪ್ರದೇಶದಲ್ಲಿ ... ೧೦೦೦೦ ಜರ್ಮನರು ಡಚ್ಚರ ಆಡಳಿತಕ್ಕೆ ಸೇರಿಹೋದರು. ... ಯೋಜನೆಯಂತೆ ಆ ಜರ್ಮನರ ...

ಪಾಶ್ಚಾತ್ಯರ ಸೌಂದರ್ಯಾರಾಧನೆ- ಅಮೇರಿಕದ ಸೌಂದರ್ಯಸ್ಪರ್ಧೆಯ ಮುಂದೆ ನಿಂತ ಮಾರಿಸ್ ಜಾನ್ಸನ್ನಳು ಗೆದ್ದು ೧೯೪೭ರ "ಮಿಸ್ ಅಮೇರಿಕ" ಎಂಬ ... ಯನ್ನು ಪಡೆದಾಗ ಹಿಂದೆ ನಿಂತ ಹಳೆಯ ಸುಂದರೀಮಣಿ ಇಲೀನ್ ಕ್ಯಾಂಪ್ ಬೆಲ್ಲಳು ... ರುವ ಚಿತ್ರ. ಇದು ಕಣ್ಕಟ್ಟಾದ ಸೌಂದರ್ಯದ ಪ್ರಯೋಜನ ಸಾರಿ!

ಗಳು ಬಹುಮತದಿಂದ ನಿರ್ಣಯಿಸಿದರು. ಇದರಿಂದ ಹೊಸ ಪ್ರಜಾರಾಜ್ಯಕ್ಕೆ ಹಳೆಯ ಚಕ್ರವರ್ತಿ ಬಾವುದಾಯಿ ಪುನರಾಗಮಿಸುವನು.

ಸಂ. ರಾ. ಸಂಘಕ್ಕೆ ಹೋದ ಹಿಂದೀ ಪ್ರತಿನಿಧಿ ಮಂಡಲವು ಹಿಂದೀಯರನ್ನು ಕೆಟ್ಟರೀತಿಯಿಂದ ನಡೆಸಿಕೊಂಡ **ದಕ್ಷಿಣ ಆಫ್ರಿಕದ ವಿರುದ್ಧವಾಗಿ ತೆಗೆದುಕೊಂಡುಹೋದ ದೂರನ್ನು** ತಿದ್ದುವುದರಲ್ಲಿ ಮಗ್ನವಾಗಿದೆ. ಸದ್ಯದಲ್ಲೇ ಆ ದೂರು ಸಂಘದ ರಾಜಕೀಯ ಸಮಿತಿಯ ಮುಂದೆ ಚರ್ಚೆಗೆ ಬರಲಿದೆ.

ಸ್ವಮಂಗ್ಲಬಿನ್ ಎಂಬಸ್ಥಳದಲ್ಲಿ ಬ್ರಹ್ಮೀ ಸರಕಾರದ ಸೈನ್ಯವು **ಕಾರೆನ್ನರ ವಿರುದ್ಧ ಘೋರ ಸಂಗ್ರಾಮವನ್ನು ನಡೆಸಿದೆ.** ಈಸ್ಥಳ ರಂಗೂನಿನಿಂದ ೫೦ ಮೈಲು ಉತ್ತರದಲ್ಲಿದೆ. ಸಂಗ್ರಾಮದಲ್ಲಿ ಈಗ ೩೦೦ ಜನ ಕಾರೆನ್ನರು ಮಡಿದಿದ್ದಾರೆ.

ಮಲಯದ ಆವಸರದ ಸರಕಾರವು ೧೫೦ ಜನ ಹಿಂದೀಯರನ್ನು ಇತ್ತೀಚಿನ ಕಮ್ಯುನಿಸ್ಟ್ ಗಲಭೆಯ ಸಂಬಂಧದಲ್ಲಿ ಬಂಧಿಸಿ ಗುಪ್ತ ವಿಚಾರಣೆಗೆ ಒಳಪಡಿಸಿ, ಅವರಲ್ಲಿ ಒಬ್ಬರಾದ ಕೂಲಿಕಾರ ಮುಖಂಡ ಗಣಪತಿ ಎಂಬವರಿಗೆ ಮರಣ ಶಿಕ್ಷೆಗೆ ಬಂದಂತೆ ಆಳುವ ಅಧಿಕಾರ ಪಡೆದ ಬ್ರಿಟಿಶ್ ಹೈಕಮಿಶನರನು ಮರಣದಂಡನೆಯನ್ನು ವಿಧಿಸಿದ್ದಾನೆ. ಹಿಂದೀ ... ರಿಯ ಕಡೆಯಿಂದ ಗಣಪತಿಗಳ ಪರವಾಗಿ ಅರಿಕೆಯೊಂದು ಆ ಸರಕಾರಕ್ಕೆ ಕಳಿಸಲಾಗಿದೆ.

ಗಡಿನಾಡಿನ ಕಾಂಗ್ರೆಸ್ ಸಮಿತಿಯ ಹಿಂದಿನ ಅಧ್ಯಕ್ಷ ಖಾನ್ ಗುಲಾಮ್ ಮಹಮುದ್ ಖಾನರನ್ನು ಗಡಿನಾಡಿನ ಸಾರ್ವಜನಿಕ

ವನ್ನು ಈ ಆಕ್ರಾಮಕ ಮಿತ್ರರು ಹೀಗೆ ... ಯಿಸಿಬಿಟ್ಟರು.

ಜೆರೂಸಲೇಮಿನ ಸಂಬಂಧ ನಡೆದ ಸಂಧಾನದ ಪ್ರಕಾರ ... ಜೋರ್ಡನ್ನು ಇಸ್ರೇಲಿಗೆ ಜೆರೂಸಲೇಮಿನ ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ... ೧೯ ಚದುರ ಮೈಲಿನಷ್ಟು ಪ್ರದೇಶವನ್ನು ಕೊಡಲು ನಿರ್ಧರಿಸಿದೆ. ಜೆರೂಸಲೇ... ಅವೀವ್ ರೇಲ್ವೆ ಮಾರ್ಗವೇ ಆ ... ಗಡಿಯಾಗುವದು.

ಕುಲಭೇದ ನೀತಿಯನ್ನು ... ಮಾಡುವ ಯೋಜನೆಯೊಂದನ್ನು ... ಕೊಡಲು ಅಮೇರಿಕದ ಸಂಯುಕ್ತ ... ನವು ತನ್ನ ಸೈನ್ಯಖಾತೆಗೆ ತಿಳಿಸಿದೆ. ... ಪಾಪಿಯ ಕಾರ್ಯದರ್ಶಿಯಾದ ... ಕುಲ, ವರ್ಣ, ಧರ್ಮ ಮತ್ತು ... ಯತೆಯ ಭೇದವನ್ನು ಗಣಿಸದೆ ... ಸರ್ವರಿಗೂ ಸಮಾನ ಗೌರವ ಕೊಡ... ಆದೇಶಮಾಡಿದ್ದಾನೆ.

ಸಿಂಹಳದ ಶಾಲೆಗಳಲ್ಲಿ ... ಜನ ಮೇಲ್ವಿಚಾರಣೆ ನಡೆಸಲು ... ರನ್ನು ನಿಯಮಿಸಲಾಗುವದು. ... ಗಳಲ್ಲಿ ಕಲಿಸಲಾಗುವ ಬೌದ್ಧ, ಇಸ್ಲಾಂ ಮತ್ತು ಕ್ರೈಸ್ತ ಮೊದಲಾದ ... ಗಳ ಶಿಕ್ಷಣ ಸರಿಯಾಗಿ ನಡೆಯುತ್ತಿದೆ ... ಕೊಳ್ಳುವರು.


ಬಾಹೀ ಭಾರತಪ್ರಜಾರಾಜ್ಯದ ... ದೆಲ್ಹಿಯಲ್ಲಿ ಉಳಿಸಲು ... ಸುವ ಸಂಬಂಧದಲ್ಲಿ ... ನಿಯಮ್ ಮತ್ತು ... ಶಾರಗಳೊಡನೆ ... ದಾಡಿದರು!

ರೂಪರಂಗ

ಪ ಗ ಡಿ

ಸ್ವಾರ್ಣಣ: ಆಲ್ ಇಂಡಿಯಾ ಪಿಕ್ಚರ್ಸಿನ ಎಸ್. ಎನ್. ಆರೋರಾರಿಂದ. ದಿಗ್ದರ್ಶನ: ಅನಂತ ಠಾಕೂರ. ವೇಷಧಾರಿಗಳು: ಬಸ್ತಿ, ಕಾಮಿನೀಕೌಶಲ್ ಇತ್ಯಾದಿಗಳು.

ಗಾಢ್ಯ ಸೇಟ ಕಾಳೀದಾಸನು ತನ್ನ ಲಿನ ಭವ್ಯ ಭಂಗಲೆಯನ್ನು ಬಿಟ್ಟು ತನ್ನ ಕಾರ್ಖಾನೆಯ ಹತ್ತಿರ ಇನ್ನೊಂದು ಲೆಯಲ್ಲಿ ಇರುತ್ತಿದ್ದನು. ಯಾವಾಗ ಒಮ್ಮೆ ತನ್ನ ಮೊದಲಿನ ಬಂಗಲೆಗೆ ಬರು ನು. ಆ ವರೆಗೂ ಅದು ಖಾಲಿ ಇರು ಕಾಯಲು ಒಬ್ಬ ಮನುಷ್ಯ ಮಾತ್ರ ದ್ದನು. ಮನೆ ಸಿಕ್ಕದೆ ಬಳಲುವ ಜನರು ಬೇಡಿದಷ್ಟು ಬಾಡಿಗೆ ಕೊಟ್ಟು ವ ಕರಾರಿಗೆ ಒಪ್ಪಿ ಬಾಯಿ ಮುಚ್ಚಿ ಸುಮ್ಮನೆ ಬಿದ್ದಿರುವ ಈ ಕಾಲದಲ್ಲಿ ಅಷ್ಟಕ್ಕೂ ಒಪ್ಪಿಕೊಂಡಿರುತ್ತೇವೆಂದರೂ ಕರು ಮನೆ ಕೊಡದಂತಾಗಿದ್ದರು. ಇಂಥ ಮದಲ್ಲಿ ಕಾಳಿದಾಸನು ಒಂದು ಚಾಳನ್ನು ದಿ ಮಾಡಿದ್ದರಿಂದ ಮೊದಲು ವಾಸಿಸು ವರನ್ನೆಲ್ಲ ಜಬರದಸ್ತಿಯಿಂದ ಹೊರಗೆ ದಸ್ತಿದನು. ಅಂಥವರಲ್ಲಿ ಬಸಂತನೆಂಬವ ನು. ಚಾಚಾ ಎಂಬವನು ಮೊದಲು ವಾಸನಲ್ಲಿರುತ್ತಿದ್ದು ಮೊದಲಿನ ಬಂಗ



ಹಲ್‌ಚಲ್‌ನಲ್ಲಿ ಗಂಡುಹುಡುಗಿ ಸಿತಾರಾ! ತ್ರ ಹಿಂದುಸ್ತಾನದ ಸ್ವತಂತ್ರ ಸ್ತ್ರೀ ಹೀಗಿರ ದೆ?

ಖಾಲಿ ಇದ್ದದ್ದು ಕಂಡು ಕಳ್ಳ ದಾರಿ ದ ಒಳಗೆ ಪ್ರವೇಶಿಸಿ ಇರಹತ್ತಿದನು ತ್ತು ಮನೆ ಸಿಕ್ಕದೆ ರಸ್ತೆಯಲ್ಲಿ ಬಿದ್ದಿದ್ದ ತನಿಗೂ ಅಲ್ಲಿ ಸ್ಥಳ ಕೊಟ್ಟನು. ಮತ್ತು ೕ ಮಾಲಕನೆಂದು ಹೇಳಿದನು. ರೂಪಾ ಕಾಳೀದಾಸನ ಮಗಳು. ಕಾಲೇಜು ಗಿಸಿ ಮೊದಲಿನ ಮನೆಗೆ ಬಂದಾಗ ಕಳ್ಳ ನಿಂದ ಬಂದು ಮಾಲಕರಾಗಿ ಕುಳಿತಿದ್ದ ರ ಕೈಯಲ್ಲಿ ಸಿಕ್ಕಬಿದ್ದು, ಇವರ ವಿಷಯ ಸ್ಟ ತಿಳಿದುಕೊಂಡು ಕನಿಕರದಿಂದ ಮತ್ತು ತನ ಮೇಲಿನ ಪ್ರೇಮದಿಂದ ಅವರಿಗೆ ಾರೆಂಬುದನ್ನು ಕೂಡ ತಿಳಿಸದೆ ಅವರಂತೆ ಕೊಟ್ಟಳಾಗಿರುತ್ತಿದ್ದಳು; ಮತ್ತು ತನ್ನ ದೆಗೂ ತಿಳಿಸಿ ಯುಕ್ತಿಯಿಂದ ತಂದೆಯ ನ ಒಲಿಸಿ ಅವರನ್ನು ಉಳಿಸಿದಳು. ಅಲ್ಲದೆ, ಕಾಳಿದಾಸನೂ ಅವನ ಹೆಂಡತಿಯೂ ಗಳ ಇಚ್ಛೆ ಪೂರ್ಣ ಮಾಡಲು ಸ್ವಾಭಿಮಾ ನ್ನು ತೊರೆದು ನೌಕರ ರೂಪದಿಂದ ಇವರ ನೆಯಲ್ಲಿದ್ದು ಎಲ್ಲವನ್ನೂ ಸೂಕ್ಷ್ಮವಾಗಿ ತಿಳಿದು

ವಿವಾಹ ಮಂಗಲ

ಕೊಂಡು ಮಗಳ ಮತ್ತು ಹೆಂಡತಿಯ ಬಲ ವಂತದಿಂದ ದರಿದ್ರ ಬಸಂತನಿಗೆ ತನ್ನ ಮನ ಸ್ಸಿಲ್ಲದಿದ್ದರೂ ರೂಪಾಳನ್ನು ಲಗ್ನ ಮಾಡಿ, ಉದಾತ್ತ ಧ್ಯೇಯವನ್ನು ಜಗತ್ತಿಗೆ ತೋರಿಸಿ ಕೊಟ್ಟನು. ಕಾಳಿದಾಸನ ಹೆಂಡತಿಯು ಗಂಡನ ಮನ ಒಲಿಸಲು ಹೇಳಿದ ಮಾತುಗಳು ಬಹಳ ಮಾರ್ಮಿಕವಾಗಿವೆ, ಅರ್ಥಗರ್ಭಿತವಾ ಗಿವೆ. "ನಿನ್ನಲ್ಲಿರುವ ಶ್ರೀಮಂತಿಕೆ ಮತ್ತು ಅವನಲ್ಲಿರುವ ಜವ್ವನ, ಬುದ್ಧಿಕೌಶಲ್ಯಗಳ ಮಿಲನದಿಂದ ಮುಂದೆ ಬೇಕಾದಷ್ಟು ಶ್ರೇಯಸ್ಸು ಸಿಗಬಹುದು" ಇದರಿಂದ ಕಾಳಿ ದಾಸನ ಮನ ಕರಗಿ ರೂಪಾ ಬಸಂತರ ಲಗ್ನ ವಾಗುತ್ತದೆ. ಅಷ್ಟೆಲ್ಲ ಉದಾತ್ತ ಧ್ಯೇಯಕ್ಕೆ ಮಾರ್ಗದರ್ಶನ ಮಾಡಿಕೊಟ್ಟದ್ದಕ್ಕಾಗಿ ಚಾಚಾ ನನ್ನು ಮನಸಾರೆ ಹೊಗಳುತ್ತಾರೆ. ಕಥೆ ಇಷ್ಟೆ. ಕಥೆ ವಿನೋದಹಾಸ್ಯ, ಸಂಗೀತಗಳಿಂದ ಕಲಾಪೂ ರ್ಣವಾಗಿದ್ದು ಸಂದರ್ಭಗಳು ಚೆನ್ನಾಗಿ ಹೆಣೆ ಯಲ್ಪಟ್ಟಿವೆ. ಆದರೆ ಕೇವಲ ವಿನೋದವನ್ನೇ ಮುಖ್ಯ ಧ್ಯೇಯವಾಗಿಟ್ಟುಕೊಂಡಂತೆ ನೋಡಿ ದವರಿಗೆ ಭಾಸವಾಗುವಂತೆ ಕೆಲವೊಂದು ಪಾತ್ರ ಗಳ ಅಭಿನಯ ಮೇರೆ ಮೀರಿ, ಅಸ್ವಾಭಾವಿಕ ವಾಗಿದೆ. ಕಥೆ ಬೆಳೆಸಲು ಕಲ್ಪಿಸಿ ತುಂಬಿದ ಕೆಲವೊಂದು ಅಪ್ರಯೋಜಕ ಪಾತ್ರಗಳೆಂದರೆ ಬಸಂತನ ಪರಿಚಿತರಾದ, ಒಬ್ಬ ಗಂಡಸು, ಇಬ್ಬರು ಹೆಂಗಸರು ಮತ್ತು ಒಂದು ಮಗು. ಒಟ್ಟಿನಲ್ಲಿ ರೂಪಾನಂಥವಳು– ತಾನು ಧನಾಢ್ಯ ಳಾಗಿದ್ದರೂ ದರಿದ್ರನಾದ ಬಸಂತನಲ್ಲಿ ನೆಟ್ಟ ಪ್ರೇಮದ ಪಾವಿತ್ರ್ಯವನ್ನು– ಉಚ್ಚಧ್ಯೇಯ ವನ್ನು ಜಗತ್ತಿಗೆ ಬಿತ್ತರಿಸುವುದು ಕೇವಲ ಕಲ್ಪನಾ ವಿಲಾಸವೆನಿಸುತ್ತದೆ ಅವಳು ಬಸಂತ ನಿಂದ ತನ್ನ ಧ್ಯೇಯ ಸಾಧನೆಗಾಗಿ, ಕೊನೆಯ ಗಳಿಗೆಯವರೆಗೂ ಎಲ್ಲವನ್ನೂ ಮರೆ ಮಾಚಿದಳು. ನಿಜವಾಗಿಯೂ ಈ ರೀತಿ ಧನಿಕ ರೆಲ್ಲ ದರಿದ್ರರನ್ನು, ನಿರ್ಗತಿಕರನ್ನು ಎತ್ತಿ ಹಿಡಿ ದಲ್ಲಿ ನಿಜವಾಗಿಯೂ ಜಗತ್ತಿನಲ್ಲಿಯ ಮೇಲು ಕೀಳು, ಶ್ರೀಮಂತ ಬಡವರೆಂಬ ಭಾವನೆ ಅಳಿದು ಸಮತೆಯ ಸ್ವರ್ಗವಾಗಬಹುದು. ಕಥಾ ಸನ್ನಿವೇಶದ, ಕಥಾ ನಾಯಿಕೆ ಮತ್ತು ಅವಳ ಮಾತಾಪಿತೃಗಳ ನಡತೆಯ ಅಸ್ವಾಭಾವಿ ಕತೆ ಅಥವಾ ದುರೂಹ್ಯತೆಯೊಂದನ್ನು ಬಿಟ್ಟರೆ ಮತ್ತೆಲ್ಲ ಚೆನ್ನು. ಹುಬ್ಬಳ್ಳಿಯ "ಸುದರ್ಶನ ಟಾಕೀಸಿ"ನಲ್ಲಿ(೪ ನೆಯ ವಾರ) ಇದೀಗ ಪ್ರದ ರ್ಶಿಸಲ್ಪಡುತ್ತಿದೆ. —ವಿಶಾಕ್ತಿ

ಕಳೆದ ೨೫ ರಲ್ಲಿ ಮಾನ್ಯ ದಿವಾಕರರು ಹುಬ್ಬ ಳ್ಳಿಯ "ರೂಪಂ" ರಂಗದಲ್ಲಿ ಶ್ರೀ ಗೋವಿಂದ ರಾವ್ ನಾಯಕ ಕಲಘಟಗಿ ಇವರು ತಯಾರಿ ಸಿದ ಶೈಕ್ಷಣಿಕ ಚಲಚ್ಚಿತ್ರ ಪಟವನ್ನು ನೋಡಿ ದರು.

ವಿಶೇಷ ಲೇಖ

ಎಲಿಫೆಂಟಾ ಗುಹೆಗಳ ಅದ್ವಿ...

ಪೋರ್ತುಗೀಸರ ದೌರ್ಜನ್ಯ...

ಮಾನವನ ಅಮರತ್ವ ಕಾಮನೆ ಅನಾದಿಯಿಂದ ಹಲಬಗೆಯಾಗಿ ಅಭಿವ್ಯಕ್ತ ವಾಗುತ್ತ ಬಂದಿದೆ. ಮಾನವನು ಭಾಷೆಯನ್ನು ಕಾಣುವ ಮೊದಲೇ— ಬರಿ ಕೈಗಳನ್ನು ಕಂಡಾಗಿನಿಂದ— ಈ ಕಾಮನೆಯನ್ನು ವ್ಯಕ್ತ ಗೊಳಿಸಲು ಪ್ರಯತ್ನಿಸಿದ್ದಾನೆ. ಅದು ವಾಙ್ಮಯದಲ್ಲಿ, ವರ್ಣದಲ್ಲಿ, ಶಿಲೆಯಲ್ಲಿ ರೂಪುಗೊಂಡು ಕಲೆಯೆಂಬ ಹೆಸರಾಂತು ಮೆರೆಯುತಿದೆ.

ಮುಂಬಯಿಯ ಮಹಾದ್ವಾರದಿಂದ ಪಶ್ಚಿ ಮಕ್ಕೆ ಸುಮಾರು ಏಳುಮೈಲು ದೂರದಲ್ಲಿ ರುವ ಒಂದು ಚಿಕ್ಕ— ಬರಿ ೫ ಮೈಲು ಸುತ್ತ ಳತೆಯ— ದ್ವೀಪದಲ್ಲಿ ಶತಕಶತಕಗಳಾಚೆಗೆ ಯಾವನೋ ಶಿಲ್ಪಿ ಅಮರಗೊಳಿಸಿದ ಅದ್ಭುತ ವಾದ ಇಂಥ ಕಗ್ಗಲ್ಲ ಕಲ್ಪನೆಯನ್ನು ಕಂಡು ದೇಶವಿದೇಶಗಳ ಪ್ರವಾಸಿಗಳು ಬೆಕ್ಕಸ ಬೆರಗಾಗಿದ್ದಾರೆ. ಅವೇ ಎಲಿಫೆಂಟಾ ಗುಹಾಂ ತರ್ಗತ ದೇವಾಲಯಗಳು. ಭಾರತದ ಅನೇಕ ಗುಹಾಂತರ್ಗತ ದೇವಾಲಯಗಳಲ್ಲಿ ಗಿರಿಗತ ಕಲಾಲಯಗಳಲ್ಲಿ ಜಗದ್ವಿಖ್ಯಾತವಾದ ಎಲ ಫೆಂಟವೂ ಒಂದು. ಮೇಣದಲ್ಲಿ ಇಲ್ಲವೆ ಚಿನ್ನ ದಲ್ಲಿ ಕೆತ್ತಲು ಅಸದಳವಾದ ಕುಸುರುಗೆಲಸ ವನ್ನು ಇಲ್ಲಿ ಕಾಡುಕಲ್ಲಿನಲ್ಲಿ ಕೆತ್ತಲಾಗಿದೆ ಯೆಂದು ಯೂರೋಪ್ಯ ಪ್ರವಾಸಿ ಡಿ. ಕೋಟೋ ಆಶ್ಚರ್ಯಪಟ್ಟಿದ್ದಾನೆ. ಭಾವಿ ಕರಿಗೆ ದೇಗುಲ, ರಸಿಕರಿಗೆ ಉಪವನ, ಶಿಲ್ಪಿಗಳಿಗೆ ಸ್ವರ್ಗವಾಗಿದೆ ಎಲಿಫೆಂಟಾ.

ಆ ದ್ವೀಪದ ಹೆಸರು ಘರಾಪುರಿ. ದಿನವೂ ಅನುಕೂಲ ವೇಳೆಗಳಲ್ಲಿ ಮುಂಬ ಯಿಯಿಂದ ಅಲ್ಲಿಗೆ ಉಗಿ ಹಡಗುಗಳು ಹೋಗುತ್ತವೆ. ಅವು ಸ್ವಲ್ಪ ದೂರದಲ್ಲೆ ಲಂಗರು ಹಾಕುವುದರಿಂದ ಚಿಕ್ಕ ಚಿಕ್ಕ ದೋಣಿಗಳನ್ನೇರಿ ದ್ವೀಪವನ್ನು ಮುಟ್ಟ ಬೇಕಾಗುವದು.

ತೀರದಿಂದ ಅರ್ಧಮೈಲು ದೂರದಲ್ಲಿ ಒಂದು ಗುಡ್ಡ. ಅದರಲ್ಲೇ ಈ ಚರಿತ್ರಾರ್ಹ ಗುಹಾದೇವಾಲಯಗಳು. ಆ ಗುಡ್ಡದ ಮೇಲೆ ದಕ್ಷಿಣಾಭಿಮುಖವಾಗಿ ನಿಂತಿದ್ದ ಒಂದು ಪೂರ್ಣಾಕಾರದ ಕಲ್ಲಿನ ಆನೆಯನ್ನು ಕಂಡು ಪೋರ್ತುಗೀಸರು ಇದಕ್ಕೆ ಎಲಿಫೆಂಟಾ ಎಂದು ನಾಮಕರಣ ಮಾಡಿದ್ದರು. ಇದು ನಾನೂರು ವರ್ಷ ಹಳೆಯ ಮಾತು. ಇಂದು ಆ ೧೩ ಅಡಿ ಉದ್ದ ೭॥ ಅಡಿ ಎತ್ತರದ ಶಿಲಾ ಮಾತಂಗ ಅಲ್ಲಿಲ್ಲ. ಭಗ್ನಾವಸ್ಥೆಯಲ್ಲಿ ಅದು ಮುಂಬಯಿಯ ವಿಕ್ಟೋರಿಯಾ ತೋಟದಲ್ಲಿದೆ. ಅಲ್ಲಿದ್ದ ಸಜೀವ ಕುದುರೆ ಯಂತೆ ತೋರುತಿದ್ದ ಕಲ್ಲಿನ ಕುದುರೆಯಿಂದು ನಿಶ್ಶೇಷವಾಗಿ ಅಳಿದುಹೋಗಿದೆ.

ಆ ಗುಡ್ಡದ ಒಡಲಲ್ಲಿ, ಸಮುದ್ರ ಪಾತ ಳಿಯಿಂದ ೨೫೦ ಅಡಿ ಎತ್ತರದಲ್ಲಿ ಉತ್ತರಾ ಭಿಮುಖವಾಗಿ ಒಂಟಿಬಂಡೆಯಲ್ಲಿ ಕೊರೆದ ೧೩೦ ಚೌ. ಅಡಿ ವಿಸ್ತಾರವಾದ ಗುಹೆಯಿದೆ. ೧೫ ರಿಂದ ೧೭ ಅಡಿ ಎತ್ತರವಾದ ಈ ದೇವಾ ಲಯ ೨೬ ಕಂಬಗಳ ಅಧಾರದ ಮೇಲೆ ನಿಂತಿದೆ. ಅವುಗಳಲ್ಲಿ ಎಂಟು ಈಗ ಬಿದ್ದು ಬಿಟ್ಟಿವೆ. ಪ್ರತಿಯೊಂದು ಕಂಬವೂ ಅರ್ಧದ ವರೆಗೆ ಚೌಕಾಗಿದ್ದು ಮೇಲೆ ವರ್ತುಲಾಕಾರ ವಾಗಿದೆ. ವರ್ತುಲ ಪ್ರದೇಶಗಳಲ್ಲಿ ನಕ್ಷೆಗಳಿವೆ.

ತ್ರಿಮೂರ್ತಿಗಳ ಅಮರ ಕಲ್ಪನೆ

ಆದರೆ ಈ ದೇವಾಲಯದ ಸೌಂದರ್ಯಅಡಕ ವಾಗಿರುವದು ಅದರ ಅದ್ಭುತ ಮೂರ್ತಿ ಶಿಲ್ಪ ದಲ್ಲಿ. ತ್ರಿಮೂರ್ತಿಯೇ ಅಲ್ಲಿನ ಅತಿ ಮುಖ್ಯ ವಿಗ್ರಹ. ಇದು ಭಾರತದಲ್ಲಿಯೇ ಅದ್ವಿ ತೀಯ ಶಿಲ್ಪಕಲಾಕೃತಿಗಳಲ್ಲೊಂದು. (ಮುಖಪತ್ರ). ಸೃಷ್ಟಿಸ್ಥಿತಿಲಯಕರ್ತರಾದ ಬ್ರಹ್ಮ-ವಿಷ್ಣು-ಮಹೇಶ್ವರರ ಸಮನ್ವಯ ವನ್ನು ನಾವಿಲ್ಲಿ ಕಾಣುತ್ತೇವೆ. ೭॥ ಅಡಿ ಎತ್ತರದ ಆಸನದ ಮೇಲೆ ನಡುವೆ ಬ್ರಹ್ಮ, ಎಡ ಬಲಕ್ಕೆ ವಿಷ್ಣು-ಮಹೇಶ್ವರರನ್ನು ಒಂದೇ ಕಲ್ಲಲ್ಲಿ ಕೊರಿದದ್ದಾಗಿದೆ. ಕಿರೀಟ ಸಹಿತ ವಾಗಿ ಹದಿನೆಂಟು ಅಡಿಯಷ್ಟುಳ್ಳ ಈ ತ್ರಿಗು ಣಾತ್ಮಕ ಪ್ರಕೃತಿಯ ವಿಗ್ರಹದಲ್ಲಿ ಬ್ರಹ್ಮನದು ೫ ಅಡಿ ವಿಷ್ಣು-ಪರಮೇಶ್ವರರವು ೪-೪ ಅಡಿ ಎತ್ತರವಾಗಿವೆ. ಗರ್ಭಗೃಹದಂಥ ಚಚೌಕ ದೊಳಗಿರುವ ಈ ಮೂರ್ತಿಯ ಕೆಲಬಲಗಳಲ್ಲಿ ಪ್ರಚಂಡಾಕಾರದ ಇಬ್ಬರು ದ್ವಾರಪಾಲಕ ರಿದ್ದಾರೆ. ಆದರೆ ಅವರ ಕೆಳಭಾಗವೆಲ್ಲ ಮುರಿದುಹೋಗಿದೆ.

ಏಕದೇಹದಲ್ಲಿ ಸಮಾವಿಷ್ಟರಾದ ತ್ರಿಮೂ ರ್ತಿಗಳಲ್ಲೊಬ್ಬೊಬ್ಬರ ಮುಖದಲ್ಲೂ ಒಂದೊಂದು ಬಗೆಯ ಭಾವವನ್ನು ಶಿಲ್ಪಿ ಒಡಮೂಡಿಸಿದ್ದಾನೆ. ಶಾಂತಮೂರ್ತಿಯಾದ ನಿಮೀಲಿತ ನೇತ್ರದ ಬ್ರಹ್ಮನು ಸಂತಾನ ಸಂಕೇತವಾದ ಮಾತುಳಂಗ ಫಲವನ್ನು ಎಡ ಗೈಯಲ್ಲಿ ಹಿಡಿದಿದ್ದಾನೆ. ಅವನ ಎಡಗಿವಿಯಲ್ಲಿ ಮಕರ ಕುಂಡಲ, ಬಲಗಿವಿಯಲ್ಲಿ ವ್ಯಾಘ್ರ ಕುಂಡಲ ಕೆತ್ತಿವೆ. ರುದ್ರನ ಗಂಭೀರವಾದ ಮುಖ ಮುದ್ರೆಯನ್ನು ಕುರಿತು ಹಲವರು ಹಲಬಗೆಯಾಗಿ ಕಲ್ಪನೆಗಳನ್ನು ಕಟ್ಟಿದ್ದಾರೆ. ಹಣೆಯಲ್ಲಿ ನಡುವೆ ತುಸು ಉಬ್ಬಿದೆ. ಶಿವನ ನಿಟಿಲ ನೇತ್ರವೇನೋ. ಮೀಸೆ ಮುಚ್ಚಿದ ತುಟಿ, ನಸು ತೆರೆದು ನಾಲಗೆಯ ತುದಿ ತೋರಿಸುವ ಬಾಯಿ, ಕೊರಳಲ್ಲಿ, ಕಿರೀಟ ದಲ್ಲಿ ಬಲಗೈಯಲ್ಲಿ ಹೆಡೆಯೆತ್ತಿದ ಸರ್ಪಗಳು. ವಿಷ್ಣುವಿನ ಮುದ್ರೆ ಪ್ರಸನ್ನವಾಗಿದೆ. ನಾಜೂ ಕಾದ ಚೆಹರೆ, ಕಿವಿ ಮುಚ್ಚಿದ ಕುರುಳಗಳು, ಕೈಗಳಲ್ಲಿ ವಿಕಾಸಸಂಕೇತವಾದ ಕಮಲಗಳು. ಕಿರೀಟದಲ್ಲಿ ಸೂಕ್ಷ್ಮ ಕೆತ್ತನೆಯ ಕೆಲಸ. ಸೃಷ್ಟಿ ಸ್ಥಿತಿಲಯಗಳ ಅಧಿದೇವತೆಗಳಾದ ತ್ರಿಮೂ





ಗುಹಾಸ್ತಂಭಗಳು

ರ್ತಿಗಳ ಸ್ವಭಾವವೈಶಿಷ್ಟ್ಯವನ್ನೆಲ್ಲ ಕಲ್ಲಿನಲ್ಲಿ ಎರಕ ಹೊಯ್ದು ಶಿಲ್ಪಿ ಅವಿನಾಶಿಯಾದ ಸತ್ಯ ವನ್ನು ಇಲ್ಲಿ ಕಣ್ಣಿಗೆ ಕಟ್ಟಿದ್ದಾನೆ.

ಇತರ ಮೂರ್ತಿಗಳು

ತ್ರಿಮೂರ್ತಿಗಳಲ್ಲದೆ ಇನ್ನೂ ಹಲವು ಪೌರಾಣಿಕ ಕಲ್ಪನೆಗಳಿಗೆ ಮೂರ್ತರೂಪ ಕೊಟ್ಟ ವಿಗ್ರಹಗಳು ಎಲಿಫೆಂಟವನ್ನು ಅಲಂಕೃತಗೊಳಿಸಿವೆ.

ತ್ರಿಮೂರ್ತಿಯ ಬಲಕ್ಕಿರುವ ಅರ್ಧನಾ ರೀಶ್ವರ ಪುರುಷಪ್ರಕೃತಿಗಳ ಸಮನ್ವಯವ ನ್ನೊಳಗೊಂಡಿದೆ. ೧೭ ಅಡಿ ಎತ್ತರದ ಈ ಮೂರ್ತಿಯ ಬಲಭಾಗ ಶಿವನದು, ಎಡ ಭಾಗ ಸತಿಯದು. ಕಿರೀಟದಿಂದಾರಂಭಿಸಿ

ಹೊಸ ಪುಸ್ತಕಗಳು

ಮಕ್ಕಳನ್ನು ಮನುಷ್ಯರನ್ನಾಗಿ ಮಾಡುವ ಬಗೆ

ಉಡುಪಿಯ ಶ್ರೀ ಕೆ. ವಿಠ್ಠಲ ಶೆಣೈ ಅವರು ಬರೆದ "ಮುಂದಿನ ಜನಾಂಗ" ಎಂಬ ಪುಸ್ತಕವನ್ನು ಓದುಗರಿಗೆ ಪರಿಚಯ ಮಾಡಿ ಕೊಡಲು ಬಹಳ ಸಂತೋಷವಾಗುತ್ತದೆ. ೧೫೮ ಪುಟಗಳಿರುವ ಈ ೨|| ರೂಪಾಯಿ ಬೆಲೆಯ ಪುಸ್ತಕವನ್ನು ಉಡುಪಿಯ ಕೋರ್ಟ್ ರೋಡಿನಲ್ಲಿರುವ ಶ್ರೀ ಕೆ. ಆರ್. ಶೆಣೈ ಅವರು ಪ್ರಕಾಶಪಡಿಸಿದ್ದಾರೆ.

ಪುಸ್ತಕವನ್ನು ೧೧ ಅಧ್ಯಾಯಗಳಾಗಿ ವಿಭಾಗಿಸಿ, ಒಂದೊಂದರಲ್ಲೂ ಮಕ್ಕಳ ವಿಷಯವಾಗಿ ನಾವು ತಿಳಿದುಕೊಳ್ಳಬೇಕಾದ ಒಂದೊಂದು ಅಂಶವನ್ನೂ ತಿಳಿಯಾಗಿ ವಿವರಿಸಲಾಗಿದೆ. ಇದರಲ್ಲಿ ಸಂಗ್ರಹೀತವಾದ ಜ್ಞಾನವೆಲ್ಲ ಆಂಗ್ಲ ಗ್ರಂಥದಿಂದ ಆಯ್ದುಕೊಂಡದ್ದೆಂದು ಲೇಖಕರು ಮೊದಲ ಮಾತಿನಲ್ಲಿ ಹೇಳಿದ್ದಾರೆ. ಆದರೆ ಅವರು ಬರೆದ ಬಗೆ ಮಾತ್ರ ಸಾಮಾನ್ಯ ವ್ಯಕ್ತಿಗೆ ಅತಿ ಸುಲಭವಾಗಿ ತಿಳಿಯುವಂತೆ, ತನ್ನ ಪರಿಸ್ಥಿತಿಗೆ ಹೊಂದಿಸಿಕೊಳ್ಳುವಂತೆ, ಅನುಭವಕ್ಕೆ ಹೋಲಿಸಿಕೊಳ್ಳುವಂತೆ ಇದೆಯೆಂಬುದು ಹೆಚ್ಚಿನ ಸಂಗತಿ.

'ಮಕ್ಕಳ ಶೀಲ ರಚನೆ' ಎಂಬ ಪ್ರಥಮಾಧ್ಯಾಯದಲ್ಲಿ, ಶೀಲ ರಚನೆಗೆ ಮೊದಲಿನ ಏಳು ವರ್ಷಗಳು ಪ್ರಧಾನ, ಅದಕ್ಕೆ ಹೆತ್ತವರ, ಹೊರೆವವರ ಮತ್ತು ಶಿಕ್ಷಕರ ಅಚಲ ಪ್ರೀತಿ ಅತ್ಯಗತ್ಯ, ಅದನ್ನು ಸಾಧಿಸಲು ಕತೆ ಉತ್ತಮ ಸಾಧನ ಎಂದು ಮುಂತಾಗಿ ಹೇಳಿ, ಮಕ್ಕಳಿಗೆ ಕುತೂಹಲವಿರುವದು ಸ್ವಾಭಾವಿಕವೆಂದೂ ಯೋಗ್ಯವೆಂದೂ ಆದರೆ ಜ್ಞಾನತೃಷೆಯಿಂದಾಗಿ ಕುತೂಹಲವು ಮೊಳೆಯಬೇಕೇ ಹೊರತು ಪರರ ದೋಷ ಅಥವಾ ರಹಸ್ಯಗಳನ್ನು ಹುಡುಕುವ ಉದ್ದೇಶದಿಂದಲ್ಲ ಎಂಬ ಸೂಕ್ಷ್ಮವಾದ ಮಾನಸಶಾಸ್ತ್ರೀಯ ರಹಸ್ಯವನ್ನು ಉಲ್ಲೇಖಿಸಿರುವುದು ಗಮನಾರ್ಹವಾಗಿದೆ.

ಮಕ್ಕಳ ಆಟದ ವಿಷಯವಾಗಿ ಮಾತೆತ್ತಿ ಆಟದ ನೂಲಳ ಪಾಠ ಕೇಳುವುದೇ ಹೆಚ್ಚು ಫಲದಾಯಕವಾದರೂ ಹಾಗೆ ಉಕ್ತ ಕ್ರಮದ ಆಟದ ಸೌಕರ್ಯಗಳನ್ನು ಬಡತನದ ಮೂಲಕ ಒದಗಿಸಲಾಗದಿದ್ದಲ್ಲಿ ಮಕ್ಕಳ ಉದ್ಧಾರ ಎಂದಿಗೂ ಆಗದು ಎಂಬ ಅರ್ಥಶಾಸ್ತ್ರೀಯ ವಸ್ತುಜ್ಞಾನವನ್ನು ಲೇಖಕರು ಹೇಳಿರುವುದು ಅವರ ವ್ಯವಹಾರಜ್ಞತೆಯನ್ನು ಮಾರ್ಮಿಕವಾಗಿ ಹೊರಗೆಡಹುತ್ತದೆ. "ಪುನರ್ದರಿದ್ರಃ ಪುನರೇವ ಪಾಪೀ" ಎಂಬ ವಿಷಮ ಚಕ್ರದಲ್ಲಿ ಸಿಲುಕಿದ ಅಸಂಖ್ಯ ಭಾರತೀಯರಿಗೆ ಈ ವಿಷಯದಲ್ಲಿ ಸರಕಾರ ಮತ್ತು ಸಮಾಜದ ಹಿರಿಯ ಶ್ರೀಮಂತರಲ್ಲದೆ ಇನ್ನಾರೂ ನೆರವಾಗಲಾರರು.

ನಿಯಮ ನಿಷ್ಠೆ

ಶಿಸ್ತಿನ ವಿಚಾರವಾಗಿ ಹೇಳುವಾಗ ಮನೆಮಂದಿಯ ಸ್ವಭಾವ, ಅವರ ನಡೆನುಡಿಗಳು, ಆಚಾರ ವಿಚಾರಗಳೇ ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವ ಮುಖ್ಯ ಸಾಧನಗಳಾಗಿರುತ್ತವೆ ಎಂದಿರುವುದು ಕೇವಲ ಶಾಸ್ತ್ರದ ಮಾತಲ್ಲ; ನಿತ್ಯಾನುಭವಕ್ಕೆ ನಿಲುಕುವ ಸಂಗತಿ ಮತ್ತು ಪ್ರತಿಯೊಬ್ಬ ತಾಯಿ ಅಥವಾ ತಂದೆಯೂ ಮರೆಯಬಾರದ ವಿಷಯ. ಅಲ್ಲದೆ, ಮನೆಯ ಸನ್ನಿವೇಶ ಒಂದು ತೆರ, ಶಾಲೆಯ ಸನ್ನಿವೇಶ ಬೇರೆಯ ತೆರ ಎಂಬಂತಾದರೆ ಮಕ್ಕಳ ಮನಸ್ಸು ಎರಡು ಹೋಳಾಗಿ ಒಂದರೊಡನೊಂದು ಸಂಘರ್ಷಣೆಹೊಂದಲು ಅವಕಾಶವಾಗುವುದು ಎಂಬ ಮಾತು ಈ ತಲೆಮಾರಿನ ಎಲ್ಲ ಭಾರತೀಯರಿಗೂ ಅನುಭವಗೋಚರವಾದುದಲ್ಲವೇ? ಹೆದರಿಕೆಯಿಂದ ಬಂದ ಸಭ್ಯತೆ ಎಷ್ಟೆಂದರೂ ಅಸಹಜ ಎಂಬ ಮನೋವಿಜ್ಞಾನದ ಸತ್ಯವನ್ನು ಅರಿತ ಹೊರತು ಸ್ತ್ರೀ ಪುರುಷರ ಶೀಲಶುದ್ಧಿಯಾಗದು. ಇದಲ್ಲದೆ, ವ್ಯಕ್ತಿವಿಕಾಸಕ್ಕೆ ಅಂಧಶ್ರದ್ಧೆಯಷ್ಟು ದೊಡ್ಡ ಅಡಚಣೆ ಮತ್ತೊಂದಿಲ್ಲ ಎಂಬ ಲೇಖಕೋಕ್ತಿಯನ್ನು ತಂದೆಗಿಂತ ಹೆಚ್ಚಾಗಿ ಪ್ರತಿಯೊಬ್ಬ ತಾಯಿಯೂ ಮನನ ಮಾಡಿ ಆಚರಿಸಲು ಯತ್ನಿಸಬೇಕು. ಮಕ್ಕಳಿಗೆ ಶಿಸ್ತನ್ನು ಕಲಿಸುವ ವೈಜ್ಞಾನಿಕವಾದ ಎಂಟು ಅಂಶಗಳನ್ನು ಕೊಟ್ಟಿರುವುದು ವ್ಯವಹಾರ್ಯವೂ ಅತ್ಯಗತ್ಯವಾಗಿ ಎಲ್ಲ ಮಾತಾಪಿತೃಗಳು ಆಚರಿಸತಕ್ಕವೂ ಆಗಿವೆ. 'ಒಂದು ಮಗುವನ್ನು ತಪ್ಪಿಗಾಗಿ ಶಿಕ್ಷಿಸದೆ ಬಿಡುವುದು, ಮತ್ತೊಂದನ್ನು ಅದೇ ತಪ್ಪಿಗಾಗಿ ಗದರಿಸುವುದು, ಅಥವಾ ಒಂದು ದಿನ ತಪ್ಪಿಗಾಗಿ ಶಿಕ್ಷೆ ಕೊಟ್ಟು ಇನ್ನೊಂದು ದಿನ ಅದೇ ತಪ್ಪು ಮಾಡಿದರೆ ಸುಮ್ಮನಿರುವುದು" ಎಂಬ ಅನುಭವ ಎಲ್ಲರಿಗೂ ಇದೆ. ಇದರಿಂದಾಗುವ ದುಷ್ಪರಿಣಾಮವನ್ನು ಲೇಖಕರು ಸ್ಪಷ್ಟೋಕ್ತಿಯಿಂದ ನಮ್ಮ ಮುಂದಿಟ್ಟಿದ್ದಾರೆ. ಇದೇ ಮೇರೆಗೆ ಆಸೆ ತೋರಿಸಿ ಕೆಲಸ ಮಾಡಿಸುವುದೇ ಮೊದಲಾದ ಮಾತಾಪಿತೃಗಳ ಅನೇಕ ದುಃಶೀಲಗಳನ್ನು ಬಯಲಿಗೆಳೆದು ಸೂಕ್ಷ್ಮವಾಗಿ, ವಿವರಪೂರ್ಣವಾಗಿ ಅವುಗಳಿಂದ ಮಗುವಿನ ಗುಣ ನಡತೆಗಳು ಕೆಡುವ ಬಗೆಯನ್ನು ಹೇಳಿರುವುದ್ಯ ಅತ್ಯಂತ ಉಪಯುಕ್ತವಾಗಿದೆ.

ಮಾತ್ಸರ್ಯ ಮತ್ತು ಭಯ

ಮಕ್ಕಳ ಮಾತ್ಸರ್ಯ ಭೇದಗಳನ್ನು ಬಹಳ ಸರಳವಾಗಿ ವಿವರಿಸಿ, ಅದರಿಂದ ಅವಕ್ಕಾಗುವ ಅನ್ಯಾದೃಶ ಹಾನಿಯನ್ನೂ ಅದನ್ನು ತಡೆಯಲು ಉಪಾಯವನ್ನೂ ಬಹಳ ವ್ಯವಹಾರ್ಯವಾಗಿ ಕೊಡಲಾಗಿದೆ. ಅದರ ಜೊತೆಗೆ ಮಗುವಿನ ಹೃದಯದಲ್ಲಿ ಮಾತ್ಸರ್ಯಕ್ಕೆ ಎಡೆ ದೊರಕಬಾರದೆಂದು ಪ್ರಯತ್ನಪೂರ್ವಕವಾಗಿ ಬಯಸುವವರು, ಮೊತ್ತ ಮೊದಲು ತಮ್ಮ ಹೃದಯದಲ್ಲಿರುವ ಆ ಕೊಳಕನ್ನು ನಿವಾರಿಸುವುದಗತ್ಯ; ಅದು ಇತರ ಎಲ್ಲ ಸಲಹೆಗಳಿಗಿಂತ ಹೆಚ್ಚಿಗೆ ಗಮನಾರ್ಹ ಎಂದಿರುವುದು ಋಷಿ ಸಹಜವಾದ ದೂರದರ್ಶಿತ್ವದ ಮಾತಲ್ಲವೆ? ಮಕ್ಕಳ ಭಯದ ಕಾರಣವಾದರೂ ಹೆಚ್ಚಾಗಿ (ತಂದೆ) ತಾಯಂದಿರ ಅಜ್ಞಾನ, ಅಲಸ್ಯ, ಕ್ರೋಧಾದಿ ಭಾವೋದ್ರೇಕ ಎಂದು ಲೇಖಕರು ನಮಗೆ ವಸ್ತುಜ್ಞಾನ ಮಾಡಿಕೊಟ್ಟಿದ್ದಾರೆ. ಭೂತ ಪಿಶಾಚಿಗಳ ಕತೆ ಹೇಳುವುದರಿಂದಲೂ ಹಿಂಸೆ, ಕೊಲೆ, ಸುಲಿಗೆಗಳೇ ಮೊದಲಾದ ಕ್ರೂರ ಕೃತ್ಯಗಳನ್ನು ವರ್ಣಿಸುವುದರಿಂದಲೂ ಮಕ್ಕಳ ಮನಸ್ಸಿನ ಮೇಲೆ ತುಂಬ ದುಷ್ಪರಿಣಾಮವಾಗುತ್ತದೆ ಎಂದು ಅವರು ಅನೇಕ ನಿದರ್ಶನಗಳ ಮೂಲಕ ವಿವರಿಸಿದ್ದಾರೆ. ಜೊತೆಗೆ, 'ಒಬ್ಬನು ತನಗೆ ಅಪಾಯವಿದೆಯೆಂಬುದರ ಪೂರ್ವಜ್ಞಾನವಿಲ್ಲದೆ ಒಂದು ಅಪಾಯವನ್ನು ಎದುರಿಸುವುದೊಂದು ಧೈರ್ಯವಲ್ಲ; ಒಂದು ಪರಿಸ್ಥಿತಿಯಲ್ಲಿ ತನಗೆ ಅಪಾಯವಿದೆಯೆಂಬುದನ್ನು ಅರಿತೇ ಅದನ್ನು ಎದುರಿಸಿ ಬುದ್ಧಿವಂತಿಕೆಯಿಂದ ಪಾರಾಗಬಲ್ಲವನೇ ನಿಜವಾದ ಧೀರ ಮಕ್ಕಳನ್ನು ಅಂಥ ಧೈರ್ಯಶಾಲಿಗಳನ್ನಾಗಿ ಮಾಡಲು ಯಾವ ರೀತಿಯಿಂದ ನಡೆದುಕೊಳ್ಳಬೇಕು ಎಂಬುದನ್ನು ಸುಲಭ ರೀತಿಯಿಂದ ಶ್ರೀ ಶೆಣೈ ಬೋಧಿಸಿದ್ದಾರೆ. ಇದನ್ನು ಮಕ್ಕಳ ಆರೈಕೆಯ ಹೊಣೆ ಹೊತ್ತವರೆಲ್ಲ ಅಗತ್ಯವಾಗಿ ಮನನ ಮಾಡಬೇಕು.

ಆರನೆಯ ಅಧ್ಯಾಯದಲ್ಲಿ ಮಕ್ಕಳು ಸುಳ್ಳು ಹೇಳುವ ಬಗೆ, ಕಾರಣ, ಪ್ರತಿಬಂಧಕೋಪಾಯಗಳನ್ನು ಕೊಟ್ಟಿದೆ. ಅಂಜಿ ಆಚರಿಸಿದ ಸದಾಚಾರ ಅಸಹಜ ಎಂದಂತೆ ಅಂಜಿ ಆಡಿದ ದಿಟ ಯಾಂತ್ರಿಕ, ಅಪ್ರಯೋಜಕ ಎಂಬ ಅಂಶವನ್ನು ಇಲ್ಲಿ ಖಂಡಿತೋಕ್ತಿಯಿಂದ ಹೇಳಲಾಗಿದೆ. ಹೆಂಗಸರು ಈ ಮಾತನ್ನು ಮೊದಲು ಲಕ್ಷ್ಯಕ್ಕೆ ತಂದುಕೊಳ್ಳಬೇಕು; ಏಕೆಂದರೆ, ಅವರು ಅಂಜಿಕೆಗೆ ಹೆಸರಾದವರು. ಮಾತು ಮಾತಿಗೆ ಸುಳ್ಳಾಡುವವರ ಮನೆಯಲ್ಲಿ ಬೆಳೆಯುವ ಮಕ್ಕಳು ತಮ್ಮ ಹೆತ್ತವರ ಅನುಕರಣೆ ಮಾಡತೊಡಗಿದರೆ ಪರಿಣಾಮವೇನಾದೀತೆಂಬುದನ್ನು ಲಕ್ಷ್ಯದಲ್ಲಿಡಬೇಕೆಂದು ಲೇಖಕರು ಎಚ್ಚರಿಸಿರುವುದು ಬಹಳ ಮನನೀಯವಾದುದು. ಮುಂದೆ ಮಕ್ಕಳ ಹಟಮಾರಿತನದ ಕಾರಣಗಳನ್ನೂ ಅದನ್ನು ತಡೆಯುವ ಬಗೆಯನ್ನೂ ವಿಸ್ತರಿಸಿ ಹೇಳಲಾಗಿದೆ. ಹಟಮಾರಿಗಳ ಸ್ವಭಾವವನ್ನು ತಿದ್ದಲು ಬಹಳ ಎಚ್ಚರಿಕೆ ವಹಿಸಬೇಕಾಗುತ್ತದೆ ಎಂಬ ಅಂಶವನ್ನು ಒತ್ತಿ ಹೇಳಲಾಗಿದೆ.

ಕಾಮಶಿಕ್ಷಣದ ಬಗ್ಗೆ ಲೇಖಕರು ಹೇಳಿದ ಪ್ರತಿಯೊಂದು ವಾಕ್ಯವೂ ಗಮನಾರ್ಹವೆನ್ನಬೇಕು. ನಮ್ಮ ಕಾಮಶಿಕ್ಷಣದ ದೃಷ್ಟಿಯಲ್ಲಿ ಕ್ರಾಂತಿಯೇ ಆಗಬೇಕೆಂದು ಅವರು ಹೇಳಿರುವರಲ್ಲದೆ ಅತ್ಯಂತ ಸಹಜವಾದ ರೀತಿಯಲ್ಲಿ ಅದನ್ನು ಕೊಡುವ ಮಾದರಿಯನ್ನೂ ಅವರು ಕೊಟ್ಟಿರುವುದು ಬಹಳ ಪ್ರಶಂಸನೀಯವಾಗಿದೆ. ಕಾಮವು ಪಾಪವಲ್ಲ, ಹೇಯವಲ್ಲ, ಭಯಂಕರವಲ್ಲ, ಅಸಹ್ಯವಲ್ಲ; ಅದು ಸಹಜ ಸುಂದರ ಎಂಬ ಅಭಿಪ್ರಾಯ ಮಕ್ಕಳಲ್ಲಿ ಉಂಟಾಗಬೇಕೆಂಬ ಅವರ ವಾದವನ್ನು ಯಾವ ಮನಃಶಾಸ್ತ್ರಜ್ಞನೂ ಅಲ್ಲಗಳೆಯಲಾರನು. ದೊಡ್ಡವರು ಆ ವಿಷಯದ ಬಗ್ಗೆ ಮಕ್ಕಳೆದುರು ಜುಗುಪ್ಸೆ, ಅಪಹಾಸ್ಯ, ಭಯ, ಪಾಪಶಂಕೆ, ಗೂಢಭಾವ, ಅಲಕ್ಷ್ಯಗಳಿಂದ ವರ್ತಿಸುವುದರಿಂದ ಮಕ್ಕಳ ಮನಸ್ಸು ಪಾಪಮಯವಾಗುವುದು ಎಂಬುದನ್ನು ತಾಯ್ತಂದೆಯರು ಅರಿತ ದಿನ ನಮ್ಮ ಸುಶೀಲವಂತಿಕೆ ಆದರ್ಶವಾದೀತು; ಮಕ್ಕಳ ಹೃದ್ಬುದ್ಧಿಗಳು ಸಹಜ ಸುಂದರವಾದಾವು; ಹುಡುಗ ಹುಡುಗಿಯರ ವಯೋಮಾನಕ್ಕೆ ಅನುಗುಣವಾದ ಸಹವಾಸ, ಸಾಹಿತ್ಯ ಅವರಿಗೆ ದೊರಕಿಸುವ ಕರ್ತವ್ಯವನ್ನೂ ಗ್ರಂಥಕರ್ತರು ಎತ್ತಿ ತೋರಿಸಿದ್ದಾರೆ. ಆ ಸಂದರ್ಭದಲ್ಲಿ, ಇಂದಿನ ಕತೆಗಳಲ್ಲಿ ಹಲವು ಕೇವಲ ಯುವಕ ಯುವತಿಯರ ಪ್ರಣಯ ಕತೆಗಳೇ ಆಗಿದ್ದು ಮನೋರಂಜನೆಯೊಂದೇ ಅವುಗಳ ಉದ್ದೇಶವೆಂಬಂತೆ ತೋರುವುದು; ಮತ್ತೆ ಕೆಲವು ಕತೆಗಳು ಉದ್ದೇಶರಹಿತವಾಗಿದ್ದು ಭಾಷಾದೃಷ್ಟಿಯಿಂದ ಹಲವು ಕಷ್ಟಗಳನ್ನೊಳಗೊಂಡಿರುತ್ತವೆ. ತರುಣ-ತರುಣಿಯರಲ್ಲಿ ಮನೋವಿಕಾರಗಳನ್ನುಂಟುಮಾಡುವ ಹಾಗೂ ಭಾಷಾದೃಷ್ಟಿಯಿಂದ ಕೀಳಾದ ಕತೆಗಳನ್ನು ಓದುವುದು ಹಾನಿಕರವೆಂಬುದರಲ್ಲಿ ಸಂದೇಹವಿಲ್ಲ ಎಂಬ ಲೇಖಕೋಕ್ತಿಯನ್ನು ಇಂದಿನ ಲೇಖಕಂಮನ್ಯರು ದಯವಿಟ್ಟು ಪರಾಮರ್ಶಿಸಬೇಕು.

ಅಪರಾಧಿ ಮಕ್ಕಳ ಆರೈಕೆಯಲ್ಲಿ ಅಗತ್ಯವಾಗಿ ಬೇಕಾದ ನಯಜ್ಞತೆ, ಇಂಗಿತಜ್ಞತೆಗಳನ್ನು ೧೦ ನೆಯ ಅಧ್ಯಾಯದಲ್ಲಿ ಕೊಡಲಾಗಿದೆ. ೧೧ ನೆಯದರಲ್ಲಿ ಶಿಶುಶಿಕ್ಷಣ ವಿದೇಶದಲ್ಲಿ ನಡೆಯುತ್ತಿರುವ ಬಗೆಯನ್ನು ಸಂಕ್ಷೇಪವಾಗಿ ಕೊಟ್ಟಿದೆ. ಲೇಖಕರು ಅಂತ್ಯದಲ್ಲಿ ಹೇಳಿರುವಂತೆ ಶಿಶುಕಲ್ಯಾಣವಾಗದೆ ದೇಶದ ಕಲ್ಯಾಣವಾಗದು ಎಂಬ ಅಂಶವನ್ನು ಪ್ರಜೆಗಳೂ ಸರಕಾರವೂ ಹೃದತ ಮಾಡಿಕೊಂಡ ಹೊರತು ನಮ್ಮ ಮುಂದಿನ ಜನಾಂಗ ನಾವು ಈಗಿರುವ ಸ್ಥಿತಿಗಿಂತ ಯಾವ ದೃಷ್ಟಿಯಿಂದಲೂ ಪ್ರಗತಿಹೊಂದಲಾರದು. ಲೇಖಕರ ಶೈಲಿ, ವಿಷಯವಿವರಣಪದ್ಧತಿ ಇವುಗಳಲ್ಲಿ ಎಲ್ಲಾದರೂ ಒಂದೆರಡೆಡೆ ಬರುವ ಅಪಪ್ರಯೋಗಗಳನ್ನು ಬಿಟ್ಟರೆ ಮತ್ತೇನೂ ದೋಷವಿಲ್ಲ. ತತ್ವಗಳಿಗೆ ವಿವರಣ ಹೇಳುವಾಗ ನಮ್ಮಲ್ಲಿಯ ಸಾಮಾನ್ಯರ ಮನೆಗಳಲ್ಲಿ ಹಿರಿಯರು ಮಕ್ಕಳೊಡನೆ ವರ್ತಿಸುವ ವಿಶಿಷ್ಟ ನಿದರ್ಶನಗಳನ್ನೇ ಕೊಟ್ಟಿದ್ದು ಸಾಮಾನ್ಯರ ಮುಖಕ್ಕೆ ಕನ್ನಡಿ ಹಿಡಿಯುವಂತಿದೆ. ಇಷ್ಟು ವ್ಯವಹಾರ್ಯವಾದ ಸಲಹೆಗಳಿಂದಲೂ ವೈಜ್ಞಾನಿಕವಾದ ಸರಳ ವಿಮರ್ಶೆಯಿಂದಲೂ ಕೂಡಿದ ಶಿಕ್ಷಣ ಪದ್ಧತಿಯ ಪುಸ್ತಕ ಕನ್ನಡದಲ್ಲಿ ಅಭೂತಪೂರ್ವವಾಗಿದೆ. ಇದನ್ನು ಪ್ರತಿಯೊಬ್ಬ ಕನ್ನಡ ತಾಯಿಯೂ ಓದಿ ಪ್ರಯೋಜನ ಪಡೆಯುವುದೇ ಲೇಖಕರ ಶ್ರಮಕ್ಕೆ ತಕ್ಕ ಬಹುಮಾನವೆಂದು ನಮ್ಮ ಮತ.

ಸೊಸೆಗೆ ಮಾರ್ಗದರ್ಶನ

ಬಂಗಾಲದಲ್ಲಿ ನೀಹಾರಬಾಲಾ ದೇವಿಯೆಂಬ ಮಲ-ಅತ್ತೆಯೊಬ್ಬಳಿಗೆ ತನ್ನ ಮಲ-ಸೊಸೆಯನ್ನು ಉರುಲು ಹಾಕಿಕೊಳ್ಳಲು ಪ್ರಚೋದಿಸಿದ್ದಕ್ಕಾಗಿ ಶಿಕ್ಷೆಯಾಯಿತು. ಮಲಮಗನ ಹೆಂಡತಿ ಗೌರಿಯೆಂಬಾಕೆ ಮದುವೆಯಾಗಿ ಮನೆಗೆ ಬಂದಂದಿನಿಂದಲೂ ನೀಹಾರಬಾಲೆ ಅವಳನ್ನು ಬೈದು ಛಂಗಿಸುತಿದ್ದಳಲ್ಲದೆ ಸಾವು ಬಾರದಿದ್ದರೆ ಉರುಲು ಹಾಕಿಕೋ ಅನ್ನುತಿದ್ದಳು. ಅಂದು ಕೂಡ ಹಾಗೆಯೆ ಹೇಳಿ, ಉರುಲು ಹಾಕಿಕೊಳ್ಳಲುಬೇಕಾದರೆ ಕಲಿಸಿಕೊಡುವದಾಗಿ ಹೇಳಿದ್ದಳಂತೆ. ಕೊನೆಗೆ ಕಲಿಸಿಕೊಳ್ಳದೆನೆ ಸೊಸೆ ಆ ರಾತ್ರಿ ಉರುಲು ಹಾಕಿಕೊಂಡಳು. ಕೆಳ ನ್ಯಾಯಸ್ಥಾನದಲ್ಲಿ ಅತ್ತೆಗೆ ೧೮ ತಿಂಗಳ ಶಿಕ್ಷೆಯಾಗಿತ್ತು. ಕಲಕತ್ತೆಯ ಹೈಕೋರ್ಟ ಅದನ್ನು ಇಳಿಸಿ ೧೦೦೦ ರೂಪಾಯಿ ದಂಡ ವಿಧಿಸಿತು.

ನಿಮಿಷಾವಲೋಕನ

ಮಾರ್ಕೆಟ ಕಾಯದೆಯ ಕೈಪಿಡಿ: ಮುಂಬಯಿ ಒಕ್ಕಲತನ ಹುಟ್ಟುವಳಿಯ ಮಾರ್ಕೆಟಿಂಗ್ ಕಾಯದೆಯನ್ನು ತಿಳಿಗನ್ನಡದಲ್ಲಿ ವಿವರಿಸುವ ಟೀಕೆಯನ್ನೊಳಗೊಂಡು ಆ ಕಾಯದೆಯ ಅನುವಾದವನ್ನು ಇಲ್ಲಿ ಕಾಣಬಹುದು. ಶ್ರೀ ವ್ಹಿ. ಎಸ್. ಪಾಟೀಲ, ಅಗ್ರಿ ಕೇಟ ಬಾಗಲಕೋಟೆ, ಮತ್ತು ಡಾ. ಎಸ್. ಪಿ. ಪಾಟೀಲ, ಒಕ್ಕಲತನ ಕಾಲೇಜ, ಧಾರವಾಡ ಇವರು ರಚಿಸಿದ ಈ ೧೭೮ ಪುಟದ ಹೊತ್ತಿಗೆಗೆ ಮುಂಬಯಿ ಉಪಮಂತ್ರಿ ಶ್ರೀ ಕಂಠಿಯವರ ಮುನ್ನುಡಿಯಿದೆ. ಪ್ರಕಾಶಕರು: ಶ್ರೀ ವ್ಹಿ. ಎಸ್. ಪಾಟೀಲ, ಅಗ್ರಿಕಲ್ಚರಲ್ ಪ್ರೊಡ್ಯೂಸ ಮಾರ್ಕೆಟ ಕಮಿಟಿ, ಬಾಗಲಕೋಟೆ ರೂ ೨.

ಕಾಮಧೇನು: ಗೋವನ್ನು ದೇವರೆಂದು ಪೂಜಿಸುವ ಈ ದೇಶದಲ್ಲಿ ಗೋವುಗಳ ಮತ್ತು ಗೋಪಾಲನೆಯ ಸ್ಥಿತಿ ನಿಕೃಷ್ಟಕ್ಕೆ ಇಳಿದು ಹೋಗಿರುವದನ್ನೂ ಅದರ ಪರಿಹಾರೋಪಾಯಗಳನ್ನೂ ಕುರಿತು ಈ ಬಗ್ಗೆ ತಜ್ಞರು ಮಾಡಿದ ಲೆಕ್ಕಾಚಾರ ಮತ್ತು ಸಂಶೋಧನೆಗಳ ಸಾರವನ್ನು ಪಾಮರರಿಗೂ ತಿಳಿಯುವ ಮತ್ತು ರುಚಿಸುವ ತಮ್ಮ ಸರಳ ಶೈಲಿಯಿಂದ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರು ಬರೆದಿದ್ದಾರೆ. ಮಿನೂ ಮಸಾನಿಯವರ "ನಮ್ಮ ಹಿಂದುಸ್ಥಾನ"ದ ಮಾದರಿಯಲ್ಲೇ ಬರೆದ ಇದರಲ್ಲಿರುವ ಚಿತ್ರಗಳು ವಿಷಯಗ್ರಹಣಕ್ಕೆ ತುಂಬ ಸಹಕಾರಿಯಾಗಿವೆ. ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ, ಮೈಸೂರ, ಇವರಿಂದ ಹನ್ನೆರಡಾಣೆಗೆ ಪಡೆಯಬಹುದು.

ಮಾಯಾವಿ: "ಪಾಂಚಕಡಿ ದೇ" ಅವರ ಪ್ರಸಿದ್ಧ ಬಂಗಾಲಿ ಪತ್ತೇದಾರಿಕಾದಂಬರಿಯ ಕನ್ನಡ ಅನುವಾದ. ಹಲವು ವರ್ಷಗಳ ನಂತರ ಪುನರ್ಮುದ್ರಣ ಕಂಡಿದೆ. ಅನುವಾದಿಸಿದವರು ಶ್ರೀ ಎಂ ವೆಂಕಟಾದ್ರಿ ಶಾಸ್ತ್ರಿ. ಪ್ರಕಾಶಕರು: ಎಸ್. ಎಸ್. ಎನ್. ಬುಕ್ ಡಿಪೊ. ನಂ ೨೭, ಪಿ. ಬೀದಿ, ಕೋಟೆ ಬೆಂಗಳೂರ. ೩೧೦ ಪುಟ ರೂ. ೩|೪

ವಿಕಾಸ: ವಿಜಾಪುರದ ಪಿ. ಡಿ. ಜೆ. ಹಾಯಸ್ಕೂಲಿನ ವಿದ್ಯಾರ್ಥಿಗಳ ಲೇಖಗಳನ್ನೊಳಗೊಂಡಿದೆ. ಕನ್ನಡ, ಮರಾಠಿ, ಇಂಗ್ಲಿಷ. ಹಿಂದೀ, ಲೇಖಗಳಿವೆ. ವಿದ್ಯಾರ್ಥಿಗಳ ಲೇಖನ ಕಲೆ ಬೆಳೆಯಲಿ.

ನೂತನ ಗಣಿತ: ಐದನೆ, ಆರನೆ, ಮತ್ತು ಏಳನೆ ವರ್ಗಗಳಿಗೆ ಗಣಿತ ಕಲಿಸಲನುಕೂಲವಾದ ಈ ಮೂರೂ ಪುಸ್ತಕಗಳನ್ನು ಶ್ರೀ ಕೆ. ಕೆ. ಗಲಗಲಿಯವರು ಬರೆದಿದಾರೆ. ಪಠ್ಯಪುಸ್ತಕಾಧಿಕಾರಿಗಳಿಂದ ಮಂಜೂರಾಗಿವೆ. ಧಾರವಾಡದ ಆಕಳವಾಡಿ ಬುಕ್ ಡಿಪೊ ಅವರು ಪ್ರಕಟಿಸಿದ್ದಾರೆ. ಬೆಲೆ ಕ್ರಮವಾಗಿ ರೂ. ೧|–, ೧|೪ ಆಣೆ ಮತ್ತು ರೂ. ೧|೨

ವಿರೋಧಿ ಸಂವತ್ಸರದ

ಅಗೇರ ಉಪಾಧ್ಯಾಯ ಶ್ರೀ ಕೃಷ್ಣ ಪಂಚಾಂಗವನ್ನು ಶ್ರೀ ಗಜಾನನ ಪ್ರಿಂಟಿಂಗ್ ಪ್ರೆಸ್, ಅಂಕೋಲಾ ಇವರಿಂದ ೬ ಆಣೆಗೆ ಪಡೆಯಬಹುದು.

ವಿರೋಧಿ ಸಂವತ್ಸರದ

ಶ್ರೀ ಬಸವರಾಜ ಪಂಚಾಂಗವನ್ನು ಶ್ರೀ ಸಿದ್ಧಾಂತಿ ಚನವೀರ ಶಾಸ್ತ್ರಿಗಳು, ಸಾಲಿಮಠ, ಹಾವೇರಿ, ಧಾರವಾಡ, ಇವರು ರಚಿಸಿ ಪ್ರಕಟಿಸಿದ್ದಾರೆ. ಬೆಲೆ ರೂ. ೧|–

ಗ್ರಹಗಳ ಮುನ್ನೋಟ

ಮೇ ೨ ರಿಂದ ೮ ರ ವರೆಗೆ

ಜ್ಯೋತಿಷಿ:— ಶ್ರೀ ಕೃಷ್ಣಶಾಸ್ತ್ರಿ ಭಿಡೆ, ಬೆಳಗಾಂವಿ

ಮೇಷ

ನಿಮಗೆ ಪಿತ್ತದ ಮುತ್ತು ಹೆಂಡತಿಗೆ ಕಫ ವಿಕಾರವಾಗುವ ಸಂಭವವಿದೆ. ಆದರೆ ನಿಮ್ಮ ನಿಮ್ಮೊಳಗಿನ ಮನಃಸಾಮರಸ್ಯ ಚನ್ನಾಗಿದ್ದು ಪ್ರಾಪಂಚಿಕ ಸುಖವನ್ನು ಅನುಭವಿಸಿರಿ. ಉದ್ಯೋಗದಲ್ಲಿ ಪ್ರತಿಷ್ಠೆಯೂ ಲಾಭವೂ ಉತ್ತಮ. ವಾದಸ್ಪರ್ಧೆಗಳಲ್ಲಿ ನಿಮಗೇ ಯಶಸ್ಸು. ಸ್ಥಾವರ ಆಸ್ತಿಯಲ್ಲಿಯೂ ಸಾಲಿನ ಲಾಭಕ್ಕಾಗಿಯೂ ತುಂಬ ಹಣ ತೊಡಗಿಸ ಬೇಕಾಗುವದು. ಪ್ರವಾಸ ಸುಖಕರ. ಪತ್ರ ವ್ಯವಹಾರ ಭೆಟ್ಟಿಗಿಂತ ನೆಟ್ಟಗೆ. ಅಶ್ವಿನಿಯ ಕೊನೆಯ ೨ ಮತ್ತು ಭರಣಿಯ ಮೊದಲ ೨ ಚರಣಗಳಿಗೆ ತೊಂದರೆಯೇ ಇಲ್ಲ. ತಾ॥ ೨, ೩, ೭, ೮ ಅನುಕೂಲ.

ವೃಷಭ

ನಿಮ್ಮ ಪ್ರಕೃತಿಯ ವಿಷಯ ಬಹಳ ಎಚ್ಚರಿಕೆ. ನಿಮ್ಮ ಪತ್ನಿಯ ಆರೋಗ್ಯವೂ ಸ್ವಲ್ಪಕೆಡಬಹುದು. ಆದರೆ ಮಕ್ಕಳ ಆರೋಗ್ಯ ಮತ್ತು ಭಾಗ್ಯದ ಉನ್ನತಿಯೋಗವಿದೆ. ಉದ್ಯೋಗದಲ್ಲಿ ಪ್ರತಿಷ್ಠೆ, ಲಾಭ ಚನ್ನಾಗಿದ್ದರೂ ವೆಚ್ಚ ತುಂಬ ಮಾಡಬೇಕಾಗುವದು. ಆದರೂ ಕಾರ್ಯಸಿದ್ಧಿಯಾಯಿತಲ್ಲಾ ಎಂದು ಸಮಾಧಾನಪಡುವಿರಿ. ಕೆಲವೊಂದು ಕೆಲಸದಲ್ಲಿ ನಿಮ್ಮ ಅಜಾಗರೂಕತೆ ಆಲಸ್ಯಗಳ ಫಲವಾಗಿ ತುಂಬ ಗೊಂದಲವುಂಟಾದೀತು. ವಾದ ಸ್ಪರ್ಧೆಗಳಲ್ಲಿ ಹೇಳಬೇಕಾದ ಮಾತೇನೂ ಘಟಿಸಲಾರದು. ಪ್ರವಾಸ ಕ್ಲೇಶದಾಯಕ. ಭೆಟ್ಟಿ ಪತ್ರವ್ಯವಹಾರಗಳು ಸಫಲವಾಗುವವು. ಕೃತ್ತಿಕೆಯ ಕೊನೆಯ ೩ ಮತ್ತು ರೋಹಿಣಿಯ ಮೊದಲ ೨ ಚರಣಗಳಿಗೆ ತೊಂದರೆಯಿಲ್ಲ. ತಾ। ೨, ೩, ೪, ೫ ಹಿತ.

ಮಿಥುನ

ನಿಮ್ಮಿಬ್ಬರ ಪ್ರಕೃತಿಯೂ ಅಷ್ಟಿಷ್ಟು ಕೆಡಬಹುದಾದರೂ ನಿಮ್ಮೊಳಗಿನ ಒಮ್ಮತ ಚನ್ನಾಗಿರುವದು. ಮಕ್ಕಳು ಮನನೋಯಿಸುವ ಮಾತಾಡಬಹುದು. ಉದ್ಯೋಗದಲ್ಲಿ ನಿಮ್ಮ ಪ್ರಾಮಾಣಿಕತೆಯ ಬಗ್ಗೆ ಕುಶಂಕೆಗಳೇಳಬಹುದಾದರೂ ಉತ್ಪನ್ನಕ್ಕೆ ಕೊರತೆಯಿಲ್ಲ. ವಾದ ಸ್ಪರ್ಧೆಗಳಲ್ಲಿ ಯಥಾಸ್ಥಿತಿ. ಶತ್ರುವಿಗೆ ಬೇರೆ ಕಡೆಯಿಂದ ತುಂಬ ಹಾನಿ. ಸ್ಥಾವರ ಆಸ್ತಿಯಲ್ಲಿಯೂ ತುಂಬ ವೆಚ್ಚವಾಗಬಹುದಾದ ಕೆಲಸಗಳಲ್ಲಿಯೂ ಹಣ ತೊಡಗಿಸುವ ಮನಸು. ಪ್ರವಾಸ ಸುಖಕರ. ಆದರೆ ಭೆಟ್ಟಿ ಪತ್ರವ್ಯವಹಾರಗಳಿಂದ ವಿಶೇಷ ಫಲ ದೊರಕದು. ಆರ್ದ್ರೆಯ ಕೊನೆಯ ೨ ಮತ್ತು ಪುನರ್ವಸುವಿನ ಮೊದಲ ೨ ಚರಣಗಳಿಗೆ ಅನಿಷ್ಟ ಫಲಗಳ ಬಾಧೆ ಕಡಿಮೆ. ತಾ॥ ೨, ೩, ೪, ೫ ಅನುಕೂಲ.

ಕರ್ಕ

ನಿಮ್ಮಿಬ್ಬರ ಪ್ರಕೃತಿಯೂ ಕೆಡಬಹುದು. ಮಕ್ಕಳ ಉನ್ನತಿಯಾದರೂ ಅವರ ವ್ಯವಹಾರ ನಿಮಗೆ ಮೆಚ್ಚಿಗೆಯಾಗದು. ಉದ್ಯೋಗದಲ್ಲಿ ಪ್ರತಿಷ್ಠೆಯ ಮುಳ್ಳಿಗೆ ಬಿದ್ದು ಲಾಭವಿಲ್ಲದ ಕೆಲಸಗಳಲ್ಲಿ ಹಣವೆಚ್ಚ ಮಾಡುವಿರಿ. ವಾದ ಸ್ಪರ್ಧೆಗಳಲ್ಲಿ ಮಧ್ಯಮ. ಪ್ರವಾಸಾದಿ ಕಾರ್ಯ ನಿರಾತಂಕ. ಮಿತ್ರರಲ್ಲೊಬ್ಬನು ಒಮ್ಮಿಂದೊಮ್ಮೆ ನಿಮ್ಮ ಮೇಲೆ ತಿರುಗಿ ಬೀಳುವ ಸಂಭವವಿದೆ. ಪುಷ್ಯದ ಕೊನೆಯ ೨ ಮತ್ತು ಆಶ್ಲೇಷೆಯ ಮೊದಲ ೨ ಚರಣಗಳು ಅಷ್ಟು ಚಿಂತಿಸಬೇಕಾಗಿಲ್ಲ. ತಾ. ೫, ೬, ೮ ಅನುಕೂಲ.

ಸಿಂಹ

ನಿಮ್ಮ ಪ್ರಕೃತಿ ಚನ್ನಾಗಿದ್ದರೂ ಮಕ್ಕಳಿಗೆ ತುಸು ಜಡ್ಡಾಗಬಹುದು. ಸ್ಥಾವರದಲ್ಲಿ ಹೆಚ್ಚಳ. ಅಲ್ಲದೆ ಕಳೆದು ಹೋದ ಹಕ್ಕು ಪುನಃ ದೊರೆಯುವ ಯೋಗವುಂಟು. ಉದ್ಯೋಗದಲ್ಲಿ ಪ್ರತಿಷ್ಠೆ ಲಾಭ ಉತ್ತಮ. ಆದರೆ ಪ್ರತಿಯೊಂದು ವಿಷಯದಲ್ಲಿಯೂ ನಾನಾ ಪ್ರಕಾರವಾದ ಅಡೆತಡೆಗಳನ್ನೆದುರಿಸಬೇಕಾಗುವದು. ವಾದ ಸ್ಪರ್ಧೆಗಳ ಪರಿಸ್ಥಿತಿಯಲ್ಲಿ ಬದಲಾವಣೆಯಿಲ್ಲ. ಪ್ರವಾಸಾದಿ ಕಾರ್ಯಗಳು ಹಿತಾವಹ. ಮಘೆಯ ಕೊನೆಯ ೨ ಮತ್ತು ಪೂರ್ವದ ಮೊದಲ ೨ ಚರಣಗಳಿಗೆ ತೊಂದರೆ ಕಡಿಮೆ. ತಾ. ೨, ೩, ೭, ೮ ಒಳಿತು.

ಕನ್ಯಾ

ಮಕ್ಕಳ ಪ್ರಕೃತಿಗೆ ತುಸು ಕ್ಲೇಶ. ಬೇರೆ ವಿಧದಿಂದಲೂ ತಾಪತ್ರಯಗಳು. ಉದ್ಯೋಗದಲ್ಲಿ ಪ್ರತಿಷ್ಠೆ ಲಾಭಗಳು ಎಣಿಸಿದ್ದಕ್ಕಿಂತ ತೀರ ಕಡಿಮೆ. ಪ್ರತಿಯೊಂದು ಕೆಲಸದಲ್ಲಿಯೂ ವ್ಯರ್ಥ ವೆಚ್ಚ ಮತ್ತು ತೊಂದರೆ. ವಾದ ಸ್ಪರ್ಧೆಗಳಲ್ಲಿ ಯಥಾಸ್ಥಿತಿ. ಮಿತ್ರರಲ್ಲಿ ವಿರೋಧ. ಸ್ವಲ್ಪ ಅನಿರೀಕ್ಷಿತ ಲಾಭದ ಯೋಗವಿದೆ. ಪ್ರವಾಸ ಒಳಿತಲ್ಲ. ಭೆಟ್ಟಿ ಪತ್ರವ್ಯವಹಾರಕ್ಕೆ ಅಡ್ಡಿಯಿಲ್ಲ. ಉತ್ತರೆಯ ಕೊನೆಯ ೨ ಮತ್ತು ಹಸ್ತದ ಮೊದಲ ೨ ಚರಣಗಳಿಗೆ ತೊಂದರೆಯಿಲ್ಲ. ತಾ. ೨, ೩, ೪, ೫ ಅನುಕೂಲ.

ತುಲಾ

ಹೆಂಡತಿಗೆ ಜಡ್ಡಾಗಬಹುದು. ಅಲ್ಲದೆ ದಂಪತಿಗಳಲ್ಲಿ ತುಂಬ ಮತಭೇದ. ಆದರೆ ಮಕ್ಕಳ ಉನ್ನತಿ. ಉದ್ಯೋಗದಲ್ಲಿ ಲಾಭ ಮೊದಲಾದವುಗಳಿಂದ ಪ್ರಾಪಂಚಿಕ ಉತ್ಸಾಹ ಹೆಚ್ಚುವದು. ವಾದ ಸ್ಪರ್ಧೆಗಳಲ್ಲಿ ನಿಮ್ಮ ಕೈಮೇಲಾಗುವದು. ಪ್ರವಾಸ, ಪತ್ರವ್ಯವಹಾರಗಳಿಗೆ ಅನುಕೂಲ ವೇಳೆಯಲ್ಲ. ಸ್ವಾತಿಯ ಕೊನೆಯ ೨ ಮತ್ತು ವಿಶಾಖೆಯ ಮೊದಲ ೨ ಚರಣಗಳಿಗೆ ಅಷ್ಟು ಬಾಧೆಯಿಲ್ಲ. ತಾ. ೨, ೩, ೭, ೮ ಅನುಕೂಲ.

ವೃಶ್ಚಿಕ

ಪ್ರಕೃತಿ ಸೌಖ್ಯವಾಗಿದ್ದರೂ ಅತಿಶ್ರಮದಿಂದ ಬೇಸತ್ತು ಹೋಗುವಿರಿ. ಹೆಂಡತಿಗೆ ಚಿಲ್ಲರೆ ದೇಹ ವ್ಯಥೆಗಳು. ಆದರೆ ಉದ್ಯೋಗದಲ್ಲಿ ಸರ್ವವಿಧದಿಂದಲೂ ಅನುಕೂಲ. ದೊಡ್ಡವರ ಕೃಪೆಯಿಂದ ಒಂದು ಮಹಾಕಾರ್ಯವನ್ನು ಕೈಗೂಡಿಸಿಕೊಳ್ಳುವಿರಿ. ಕೈಕೆಳಗಿನವರ ಹೊಟ್ಟೆಕಿಚ್ಚಿನಿಂದ ತೊಂದರೆಪಡಬೇಕಾದೀತು. ಶತ್ರುವಿಗೆ ಹೊರಗಿಂದಲೇ ದೊಡ್ಡ ವಿಪತ್ತೊದಗುವದು. ಪ್ರವಾಸ ಒಳಿತಲ್ಲ. ಭೆಟ್ಟಿ ಪತ್ರವ್ಯವಹಾರಕ್ಕೆ ಆತಂಕವಿಲ್ಲ. ಅನುರಾಧೆಯ ಕೊನೆಯ ೨ ಮತ್ತು ಜ್ಯೇಷ್ಠದ ಮೊದಲ ೨ ಚರಣಗಳಿಗೆ ತೊಂದರೆಯಿಲ್ಲ. ತಾ. ೫, ೬, ೭, ೮ ಹಿತ.

ಧನು

ನಿಮ್ಮ ಪ್ರಕೃತಿ ಸ್ವಸ್ಥವಾಗಿದ್ದರೂ ಹೆಂಡತಿ ಮಕ್ಕಳದು ಕೆಡಬಹುದು. ಸ್ಥಾವರದಲ್ಲಿ ಅನುಕೂಲಮಾತುಗಳುತಾವಾಗಿಯೆ ಕೈಗೂಡುವವು. ಉದ್ಯೋಗದಲ್ಲಿ ಲಾಭ ಚನ್ನಾಗಿದ್ದರೂ ಪ್ರತಿಷ್ಠೆಯ ಮಟ್ಟಿಗೆ ಸ್ವತಂತ್ರ ಧಂದೆಯವರಿಗಿಂತ ನೌಕರವರ್ಗದವರಿಗೆ ಹೆಚ್ಚು ಅನುಕೂಲ. ವಾದ ಸ್ಪರ್ಧೆಗಳಲ್ಲಿ ತೊಂದರೆ, ಪ್ರವಾಸ ಸುಖಕರ, ಭೆಟ್ಟಿ ಪತ್ರವ್ಯವಹಾರ ಕಠಿಣ. ಮೂಲದ ಕೊನೆಯ ೨ ಮತ್ತು ಪೂರ್ವಾಷಾಢದ ಮೊದಲ ೨ ಚರಣಗಳಿಗೆ ತೊಂದರೆ ಕಡಿಮೆ. ತಾ. ೨, ೩, ೭, ೮ ಅನುಕೂಲ.

ಮಕರ

ನಿಮಗೂ ನಿಮ್ಮ ಹೆಂಡತಿಗೂ ತುಸು ಅಸೌಖ್ಯವಾಗಬಹುದಾದರೂ ಮಕ್ಕಳ ಉನ್ನತಿ. ಆಪ್ತರು ಮತ್ತು ನೆರೆಹೊರೆಯವರು ಒರಟುತನ ತೋರಿಸುವರು. ಉದ್ಯೋಗದಲ್ಲಿ ಲಾಭ ಚೆನ್ನಾಗಿದ್ದರೂ ಪ್ರತಿಷ್ಠೆ ಅಷ್ಟಕ್ಕಷ್ಟೆ. ಮಿತ್ರರಿಂದ ತೊಂದರೆಯೆ ಹೊರತು ಉಪಕಾರವಿಲ್ಲ. ವಾದ ಸ್ಪರ್ಧೆಗಳಲ್ಲಿ ಸ್ಥಿತ್ಯಂತರವಿಲ್ಲ. ಭೆಟ್ಟಿ ನಿಷ್ಫಲ, ಪ್ರವಾಸ ಪತ್ರವ್ಯವಹಾರಗಳು ನಿರಾತಂಕ. ಉತ್ತರಾಷಾಢದ ಕೊನೆಯ ೨ ಮತ್ತು ಶ್ರವಣದ ಮೊದಲ ೨ ಚರಣಗಳಿಗೆ ಹಾನಿ ಕಡಿಮೆ. ತಾ. ೪, ೫, ೬ ಅನುಕೂಲ.

ಕುಂಭ

ಪ್ರಕೃತಿ ಎಲ್ಲರದೂ ಚನ್ನಾಗಿದ್ದರೂ ಪರಸ್ಪರ ವೈಮನಸ್ಯದಿಂದ ಪ್ರಾಪಂಚಿಕ ಸೌಖ್ಯಕ್ಕೆ ಎರವಾಗುವಿರಿ. ಉದ್ಯೋಗದಲ್ಲಿ ಲಾಭ ಕೆಳಮುಖವಾಗಿ ಸಂಗ್ರಹದಿಂದಲೇ ತುಂಬ ಬಳಸಬೇಕಾದ ಪ್ರಸಂಗವೊದಗೀತು. ವಾದ ಸ್ಪರ್ಧೆಗಳಲ್ಲಿತುಂಬ ಖರ್ಚುಮಾಡಿ ಕೊನೆಗೆ ಜಯಿಸುವಿರಿ. ಮಿತ್ರರಿಂದ ಮಹತ್ವದ ಕಾರ್ಯಗಳಲ್ಲಿ ದೊಡ್ಡ ಪ್ರಮಾದವಾಗುವದು. ಪ್ರವಾಸಾದಿ ಕಾರ್ಯಗಳು ಅನುಕೂಲವಾಗಿ ನಡೆಯುವವು. ಶತತಾರೆಯ ಕೊನೆಯ ೨ ಮತ್ತು ಪೂರ್ವಾಭಾದ್ರದ ಮೊದಲ ೨ ಚರಣಗಳಿಗೆ ಅಷ್ಟು ತೊಂದರೆಯಿಲ್ಲ. ತಾ॥ ೨, ೩, ೭, ೮ ಅನುಕೂಲ.

ಮೀನ

ಈ ವಾರ ನಿಮಗೆ ಸರ್ವತೋಮುಖ ಸುಖದ ಕಾಲ. ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ. ಮಕ್ಕಳೂ ಉನ್ನತಿ ಹೊಂದುವರು. ದೊಡ್ಡವರ ಭೆಟ್ಟಿ ಮತ್ತು ಭಾವೀ ಉನ್ನತಿಯ ಕಾರ್ಯಗಳಿಗಾಗಿ ಸಹಾಯದ ಆಶ್ವಾಸನ ವಾದ. ಸ್ಪರ್ಧೆಗಳಲ್ಲಿ ಯಶ. ಜಂಗಮ ವಸ್ತುಗಳ ಸಂಗ್ರಹ. ಪ್ರವಾಸಾದಿ ಕಾರ್ಯಗಳು ಅನುಕೂಲ ಉತ್ತರಾಭಾದ್ರದ ಕೊನೆಯ ೨ ಮತ್ತು ರೇವತಿಯ ಮೊದಲ ೨ ಚರಣಗಳಿಗೆ ತುಂಬ ಅನುಕೂಲ ತಾ. ೪, ೫, ೬ ಅನುಕೂಲ.

ಎಲಿಫೆಂಟಾ ಗುಹೆಗಳ ಅದ್ವಿತೀಯ ಕಲಾಕೃತಿಗಳು

(ಮಧ್ಯಪುಟದಿಂದ ಮುಂದರಿದುದು)

ಬಣ್ಣದ ಇಟ್ಟಿಗೆಗಳ ಬಾಹುಲ್ಯದಿಂದ ಆದಕ್ಕೆ ಈ ಹೆಸರು ಬಂದಿರಬಹುದು. ಈ ದ್ವೀಪದ ಮೇಲಿನ 'ಮೂರೀ' ಬಂದರಹಿಂದೆ ವ್ಯಾಪಾರ ಕೇಂದ್ರವಾಗಿತ್ತಂತೆ. ಹತ್ತಿರದ ಶೂರ್ಪಾರಕದಲ್ಲಿ ಅಶೋಕನ ಒಂದು ಶಾಸನವೂ ೫ ನೇ ಶತಮಾನದ ಲಿಪಿಯಲ್ಲಿ "ನಾರಾಯಣ" ಎಂದು ಕೆತ್ತಿದ ಒಂದು ಮುದ್ರೆಯೂ ೬ ನೇ ಶತಮಾನದ ಮಾದರಿಯ ಒಂದು ಸಿಂಹ ಮೂರ್ತಿಯೂ ಇಲ್ಲಿ ದೊರೆತಿವೆ. ಎರಡನೆ ಪುಲಿಕೇಶಿ ಇದನ್ನು ಗೆದ್ದುದಾಗಿಯೂ ಮುಂದೆ ಕೊಂಕಣದಲ್ಲಿ ಆಳುತಿದ್ದ ಮೌರ್ಯ ವಂಶದ ಸುಕೇತುವರ್ಮನೂ ೯ ನೆ ಶತಮಾನದಲ್ಲಿ ಶಿಲಹಾರರೂ ೧೩ ನೆ ಶತಮಾನದಲ್ಲಿ ಯಾದವರೂ ಅನಂತರ ಗುಜರಾತದ ಸುಲ್ತಾನರೂ ಇದನ್ನು ಅಧೀನದಲ್ಲಿಟ್ಟುಕೊಂಡಿದ್ದರು. ೧೬ ನೆ ಶತಕದಲ್ಲಿ ಪೋರ್ತುಗೀಸರು ಈ ನಡುಗಡ್ಡೆಯನ್ನು ಆಕ್ರಮಿಸಿದರು.

ಕಲಾವೈರಿ ಪೋರ್ತುಗೀಸರು

ಇಲ್ಲಿನ ಶಿಲ್ಪ ಕಲಾಕೃತಿಗಳೆಲ್ಲ ಹಾಳಾದುದು ಪೋರ್ತುಗೀಸರ ಕಾಲದಲ್ಲಿಯೆ. ಅವರು ಈ ವಿಷಯದಲ್ಲಿ ಮಾಡಿದ ಹಾವಳಿ ಅಷ್ಟಿಷ್ಟಲ್ಲ. ಅನೇಕ ಪ್ರವಾಸಿಗಳು ಅವರ ದುಷ್ಕೃತ್ಯಗಳನ್ನು ಕುರಿತು ಬರೆದಿದ್ದಾರೆ. ಈ ಕೃತಿಗಳ ದೃಷ್ಟಿಯಿಂದ ಅವರು ಕೇವಲ ಪಶು ಸಮಾನರಾಗಿ ವರ್ತಿಸಿದರೆಂದು ಹೇಳಬಹುದು. ಅಜಂತ ವೆರೂಳಗಳ ಭಾಗದಲ್ಲಿ ಅನೇಕ ಕಾಲ ಮುಸಲ್ಮಾನರು ರಾಜ್ಯವಾಳಿದ್ದರು. ಆದರೂ ಅಲ್ಲಿ ಇಂದಿಗೂ ಕೆಲ ಮೂರ್ತಿಗಳು ಅಭಿನ್ನವಾಗಿ ಉಳಿದಿವೆ. ಆದರೆ ತ್ರಿಮೂರ್ತಿಯಂಥ ಅದ್ವಿತೀಯ ಕಲಾಕೃತಿಯನ್ನು ಕೂಡ ಕೈಮುರಿದು ಅಂದಗೆಡಿಸಿದ ಪೋರ್ತುಗೀಸರು ಮೂರ್ತಿಭಂಜಕರಿಗಿಂತ ಹೇಯವಾಗಿ ವರ್ತಿಸಿದ್ದಾರೆ.

ಎಲಿಫೆಂಟದ ಕಲಾ ವೈಶಿಷ್ಟ್ಯ

ಶಿಲ್ಪ ಸೌಂದರ್ಯದ ದೃಷ್ಟಿಯಲ್ಲಿ ಮಾತ್ರವಲ್ಲದೆ ಇನ್ನೂ ಹಲ ಕಾರಣಗಳಿಂದ ಎಲಿಫೆಂಟಾ ಗುಹೆಗಳು ವಿಶಿಷ್ಟವೂ ಆದಕ್ಕಾಗಿ ಆಕರ್ಷಕವೂ ಆಗಿವೆ.

ಮೊದಲನೆಯದಾಗಿ ಇತರ ಗುಹಾಂತರ್ಗತ ದೇವಾಲಯಗಳಂತೆ ಇದು ಒಳನಾಡಿನ ರದೆ ದ್ವೀಪದಲ್ಲಿದ್ದು ಸುಖ ಪ್ರವಾಸಕ್ಕೆ ಆದರ್ಶ ಸ್ಥಳವಾಗಿದೆ.

ನಮ್ಮ ದೇಶದಲ್ಲಿರುವ ಅನೇಕ ಗುಹಾಂತರ್ಗತ ದೇವಾಲಯಗಳಲ್ಲಿ ಕೆಲವು ಶುದ್ಧ ಬೌದ್ಧ, ಕೆಲವು ಶುದ್ಧ ಜೈನ, ಉಳಿದವು ಸಂಮಿಶ್ರವಾಗಿವೆ. ಬ್ರಾಹ್ಮಣ ಗುಹೆಗಳಲ್ಲಿ ಶೈವವೈಷ್ಣವಗಳು ಸಂಮಿಶ್ರವಾಗಿರುವದು ಕಾಣಬರುತ್ತದೆ ಆದರೆ ಇದು ಶುದ್ಧ ಶೈವವಾಗಿದೆ. ಶಿವನೇ ಇಲ್ಲಿನ ಎಲ್ಲ ಕೆತ್ತನೆಗಳ ಕೇಂದ್ರ. ಬ್ರಹ್ಮ ವಿಷ್ಣು ಮೊದಲಾದವರು ಇದ್ದರೂ ಅವರಿಗೆ ಗೌಣ ಸ್ಥಾನ. ಆದರೂ ಇವರೆಲ್ಲರೂ ಒಂದೇ ಸತ್ತಿನ ವಿವಿಧ ಅಭಿವ್ಯಕ್ತಿಗಳೆಂಬುದು ಇಲ್ಲಿನ ಆದರ್ಶ.

ಶಿಲ್ಪ ಕಲಾದೃಷ್ಟಿಯಿಂದ ಇಲ್ಲಿನ ವಿಗ್ರಹಗಳನ್ನು ಇಬ್ಬಗೆಯಾಗಿ ವರ್ಗೀಕರಿಸಬಹುದು. ಮೊದಲನೆಯದಾಗಿ ತಂತ್ರದೃಷ್ಟಿಯಿಂದ ಮೂರು ತರಗಳು ಇಲ್ಲಿ ಕಾಣುತ್ತವೆ. ದ್ವಾರಪಾಲಕರು, ವಿವಾಹ ಮಂಗಲ, ಅರ್ಧನಾರೀಶ್ವರ ಮೊದಲಾದವನ್ನೊಳಗೊಂಡ ಉದ್ದ ಆಕಾರದ ಕೃತಿಗಳು. ಅವುಗಳಲ್ಲಿ ಮುಖ್ಯವಾದ ಒಂದೆರಡು ಮೂರ್ತಿಗಳು ಮಾತ್ರ ಇರುತ್ತವೆ. ಇನ್ನೊಂದು ವರ್ಗದಲ್ಲಿ ಅಡ್ಡಲಾಗಿ ಕಡೆದ ರಾವಣಾನುಗ್ರಹ, ಮಾನವತಿ ಪಾರ್ವತಿ ಮೊದಲಾದ ಕೃತಿಗಳು ಅನೇಕ ಮೂರ್ತಿಗಳಿಂದ ಕೂಡಿರುತ್ತವೆ. ಉನ್ನಳಿದ ತಪಸ್ವಿಶಿವ ಮೊದಲಾದವುಗಳು ಎರಡೂ ವರ್ಗದಲ್ಲಿ ಸೇರಬಹುದು.

ಹೀಗೆ ಅನ್ಯತ್ರ ದುರ್ಲಭವಾದ ವೈವಿಧ್ಯಗಳಿಂದ ಕೂಡಿದ ಈ ಶಿಲ್ಪ ನಂದನದ ಹಿಂದಿದ್ದ ಉದ್ದೇಶವೂ "ಏಕಂ ಸತ್ ವಿಪ್ರಾಬಹುಧಾ ವದಂತಿ" ಎಂದು ಜಗದಾದಿ ಶಕ್ತಿಯ ಏಕತ್ವವನ್ನು ಪ್ರತಿಪಾದಿಸುವುದೇ ಆಗಿದೆ.

ಮೂರ್ತಿಗಳ ಆಕಾರ, ಗುಹೆಗಳ ರಚನೆ ಮೊದಲಾದವುಗಳಲ್ಲಿಯೂ ಈ ವೈವಿಧ್ಯಗಳು ಎದ್ದು ಕಾಣುತ್ತದೆ. ಚಿಕ್ಕ ಚಿಕ್ಕ ಅಪ್ಸರೆಯರ ಮೂರ್ತಿಗಳಿಂದಾರಂಭಿಸಿ ಉತ್ತುಂಗ ಆಕಾರದ ಮಹಾವಿಗ್ರಹಗಳ ವರೆಗೆ ಎಲ್ಲ ಬಗೆಯ ವಿವರಗಳನ್ನೂ ಇಲ್ಲಿ ಕಾಣಬಹುದಾದರೂ ಗೌಣ ಮುಖ್ಯ ಭೇದವಿಲ್ಲದೆ ಪ್ರತಿಯೊಂದರಲ್ಲೂ ಅದೇ ಸೂಕ್ಷ್ಮತೆ,ಅದೇ ಕೌಶಲ,ಅದೇ ನಯ ನಾಜೂಕುಗಳನ್ನು ಶಿಲ್ಪಿ ಪ್ರದರ್ಶಿಸಿದ್ದಾನೆ. ಅವುಗಳ ಭಾವಗಳಲ್ಲಿಯೂ ಅಷ್ಟೇ ವೈವಿಧ್ಯಗಳಿಗೆ ಎಡೆಯಾಗಿದೆ. ಒಬ್ಬನೇ ಶಂಕರನಾದರೂ ಮದುವಣಿಗ ಶಂಕರ, ತಾಂಡವ ಮೂರ್ತಿ ರುದ್ರ, ಮಹಾಯೋಗಿ ಶಿವ ಇವರಲ್ಲಿ ವ್ಯಕ್ತವಾದ ವಿವಿಧ ಭಾವ ವೈಖರಿಗಳು ಪ್ರೇಕ್ಷಕರನ್ನು ಬೊಟ್ಟು ಕಚ್ಚಿಸುವಂತಿವೆ. ನೋಡ ನೋಡಿದಂತೆ "ಶಿಲೆಯಲ್ಲವೀ ಗುಡಿಯು ಕಲೆಯ ಬಲೆಯು" ಎಂಬ ಕವಿವಾಕ್ಯದ ಸತ್ಯತೆ ಮನವರಿಕೆಯಾಗುವದು.

ಜೋಳದ ಹಪ್ಪಳ

ಅಕ್ಕತಂಗಿಯರೇ, ಈಗಿನ ಕಾಲದಲ್ಲಿ ಧಾನ್ಯ ಧವಸಗಳು ಬಹಳೇ ತುಟ್ಟಿಯಾಗಿ ಬಡವರಾದವರು ಹಪ್ಪಳ ಸಂಡಿಗೆಗಳನ್ನು ಕಾಣುವದೇ ಬಹಳ ಅಪರೂಪವಾಗಿದೆ. ಆದಕ್ಕಾಗಿ ನನ್ನ ಅಕ್ಕತಂಗಿಯರು ಜೋಳದ ಹಪ್ಪಳಗಳನ್ನು ಮಾಡಿ ಹಪ್ಪಳದ ಮೇಲಿನ ಪ್ರೀತಿಯನ್ನು ತೀರಿಸಿಕೊಳ್ಳಬಹುದು.

ಈ ಹಪ್ಪಳಗಳು ನೋಡಲಿಕ್ಕೆ ಸ್ವಲ್ಪ ದಪ್ಪವಾಗಿ ಕಂಡರೂ ತಿನ್ನಲು ಬಹು ರುಚಿಯಾಗಿ ಅರಿಯದವರಿಗೆ ಆಶ್ಚರ್ಯವನ್ನುಂಟುಮಾಡುತ್ತವೆ. ಮಾಡುವ ವಿಧಾನ:— ನಿಮಗೆ ಬೇಕಾದಷ್ಟು ಉತ್ತಮ ಬಿಳಿ ಜೋಳ ತೆಗೆದುಕೊಂಡು ಹಸನಮಾಡಿ ಚೆನ್ನಾಗಿ ಅಕ್ಕಿಯಾಗುವಂತೆ ಕುಟ್ಟಿ, ನಂತರ ಸಣ್ಣಾಗಿ ಬೀಸಬೇಕು. ಇಷ್ಟಾದ ಮೇಲೆ ಹಪ್ಪಳಕ್ಕೆ ಹಾಕುವ ಎಲ್ಲ ಸಾಮಾನುಗಳನ್ನೂ ಸ್ವಲ್ಪ ಉದ್ದಿನ ಹಿಟ್ಟನ್ನೂ ಕೂಡಿಸಿ ಕುದಿಸಿ ಗಟ್ಟಿಯಾದ ಮುದ್ದೆಯನ್ನು ಮಾಡಬೇಕು. ಸಾಧ್ಯವಿದ್ದರೆ ಸ್ವಲ್ಪ ಬೆಂಣೆ, ಲಿಂಬೆಹುಳಿ ಹಾಕಿ ಚೆನ್ನಾಗಿ ನಾದಿ ಹಪ್ಪಳ ಮಾಡಿ ಒಣಗಿಸಿಟ್ಟು ಬೇಕಾದಾಗ ಸುಟ್ಟುಕೊಂಡು ತಿನ್ನಬಹುದು.

— ದೇವೇಂದ್ರಮ್ಮ

ಹರಿಜನ ಲೇಖ

ಅಗ್ರಲೇಖ

ಹೃದಯತಾಪ ನಿವಾರಣೆ

ಸುಶಿಕ್ಷಿತ ಹರಿಜನ ಯುವಕನೊಬ್ಬ ಬರೆಯುತ್ತಾನೆ:

"ಜಯಪುರ ಸಂಸ್ಥಾನದಲ್ಲಿ ಸವರ್ಣ ಹಿಂದುಗಳು ಹರಿಜನರನ್ನು ದಿನದಿನವೂ ಅಪಮಾನಗೊಳಿಸುತಿದ್ದಾರೆ. ಬೇಸಗೆಯಲ್ಲಿ ಬೇರೆ ಬೇರೆ ಕಡೆಗಳಲ್ಲಿ ತೆರೆದ ಅರವಟ್ಟಿಗೆಗಳಲ್ಲಿ ಸವರ್ಣ ಹಿಂದುಗಳ ಕೊಡಗಳಿಗೆ ನೇರವಾಗಿ ನೀರು ಹೊಯ್ದರೆ ಹರಿಜನರಿಗೆ ಮಾತ್ರ ಬಿದುರಿನ ಕೊಳವೆಗಳ ಮೂಲಕ ನೀರು ಹೊಯ್ಯುತ್ತಾರೆ. ಯಾರಾದರೊಬ್ಬ ಹರಿಜನನು ಈ ಪರಿಯಾಗಿ ನೀರು ತೆಗೆದುಕೊಳ್ಳಲು ಒಪ್ಪದೆಹೋದರೆ ಅವನನ್ನು ಬೈದು ಥಂಗಿಸುವದು ನಿತ್ಯಕಟ್ಟಳೆಯ ಮಾತಾಗಿಬಿಟ್ಟಿದೆ. ಸ್ವತಂತ್ರ ಭಾರತದಲ್ಲಿ ಹರಿಜನರನ್ನು ಹೀಗೆ ನಡೆಸಿಕೊಳ್ಳುವದು ಖೇದಜನಕವಾದುದು. ಅನೇಕ ಶತಮಾನಗಳಿಂದ ದಲಿತರಾದ ಅವರಿಗೆ ಕಾಯದೆಯ ಪ್ರಯೋಜನ ಪಡೆಯುವ ಸಾಮರ್ಥ್ಯವಿಲ್ಲ. ಮೇಲಾಗಿ ಇಂದಿನ ಅಧಿಕಾರಿ ವರ್ಗವೂ ಸವರ್ಣರಿಂದಲೇ ತುಂಬಿದೆ. ಇಂಥ ಸ್ಥಿತಿಯಲ್ಲಿ ಸಿಲುಕಿದವರ ಬಾಳು ಕಷ್ಟಕರವಾಗಿ ಅವರಿಗೆ ಜೀವನದಲ್ಲೇ ಬೇಸರ ಹುಟ್ಟುವ ಅವಸ್ಥೆಯುಂಟಾಗುತ್ತದೆ. ಹೀಗೆ ಮೇಲಿಂದ ಮೇಲೆ ಪೀಡೆ ಅವಮಾನಗಳಿಗೊಳಗಾಗುತಿದ್ದರೂ ನಾವು ಹಿಂದುಗಳೆಂದು ಹೆಮ್ಮೆ ಪಡಬೇಕೆ? ಎಂಬ ಶಂಕೆ ನನ್ನನ್ನು ಬಾಧಿಸತೊಡಗಿದೆ. ಅಂಥ ಅಭಿಮಾನ ಬಹಳ ಕಾಲ ತಾಳುವದು ಹೇಗೆ ಸಾಧ್ಯವೊ ನಾನರಿಯೆ. ಅಗ ಪ್ರತಿಹಿಂಸಾಬುದ್ಧಿ ಉರಿದೇಳುತ್ತದೆ. ಇಂಥ ಸ್ಥಿತಿಯಲ್ಲಿ ನಮ್ಮ (ಹರಿಜನರ) ಕರ್ತವ್ಯವೇನೆಂದು ದಯವಿಟ್ಟು ತಿಳಿಸಿರಿ."

ಪ್ರತಿಹಿಂಸಾಬುದ್ಧಿ ಉತ್ಪನ್ನವಾಗುವದು ಅಪಮಾನದಿಂದುಂಟಾದ ಹೃದಯ ತಾಪವನ್ನು ತಣಿಸುವ ಆತುರದಿಂದ. ಹೃದಯ ತಾಪವನ್ನು ತಣಿಸಲು ಎರಡು ಉಪಾಯಗಳುಂಟು. ಸವರ್ಣರನ್ನು ರಕ್ಷಿಸುವಗೋಸ್ಕರ ಪ್ರತೀಕಾರೋಪಾಯಗಳನ್ನು ಕೈಕೊಳ್ಳುವದು ಒಂದನೆಯದು. ಈ ಕ್ರಮ ಮನಸಿಗೆ ಬಲು ಬೇಗನೆ ಹೊಳೆಯುವದು. ಏಕೆಂದರೆ ಅದು ಸಹಜ ಪ್ರವೃತ್ತಿ ಮತ್ತು ಚಿಕ್ಕಂದಿನಿಂದ ನಮಗೆ ಪರಿಚಿತವಾದ ರೀತಿ. ಅದು ಇತರ ಪಶುಗಳಿಗೂ ಮಾನವನಿಗೂ ಸಾಮಾನ್ಯವಾಗಿದೆ. ಬಾಲ್ಯ ಕಳೆದ ಮೇಲೂ ಮನುಷ್ಯನು ಪಶುವಿಗಿಂತ ಬಹಳ ಎತ್ತರಕ್ಕೇರುವದು ವಿರಳ. ಬದಲಾಗಿ ಅವನ ಬುದ್ಧಿ ಬೆಳೆದಂತೆ ಇನ್ನೂ ಹೆಚ್ಚು ಪಶುತ್ವಕ್ಕಿಳಿಯುವದುಂಟು. ಹೀಗೆ ಬೀಜವೃಕ್ಷನ್ಯಾಯದಿಂದ ಹಿಂಸೆ-ಪ್ರತಿಹಿಂಸೆಗಳ ಕುಚಕ್ರ ತಿರುಗುತ್ತಲೇ ಹೋಗುತ್ತದೆ. ಇದು ವ್ಯಕ್ತಿಗಳಿಗೆ ಮಾತ್ರ ಸೀಮಿತವಾಗಿರದೆ ಮಹಾ ರಾಷ್ಟ್ರಗಳನ್ನೂ ಸರಕಾರಗಳನ್ನೂ ಬಳಸಿದೆ.

ಆದರೆ ದ್ವೇಷವೆಂಬದು ಎಷ್ಟೇ ಹಿಂಸೆ-ಪ್ರತಿಹಿಂಸೆಗಳಿಂದಲೂ ತಣಿಯುವ ಬಾಬಲ್ಲ. ಇದನ್ನು ಕೊನೆಗಾಣಿಸಲು ಸಮರ್ಥವಾಗುವದು ಆ ಎರಡನೆಯ ಉಪಾಯವೊಂದೆ.- ಅಂದರೆ ಸತ್ಯಾಗ್ರಹ. ಅದು ಒಡಲ ಉರಿಯನ್ನು ತಣಿಸುವದು ಮಾತ್ರವಲ್ಲದೆ ನ್ಯಾಯಪ್ರಾಪ್ತಿಗೊಂದು ಮಾರ್ಗವನ್ನು ತೆರೆದು ಕೊಡುತ್ತದೆ. ಸತ್ಯಾಗ್ರಹದಲ್ಲಿ, ಅನ್ಯಾಯಕ್ಕೊಳಗಾದ ಮನುಷ್ಯನು ಅನ್ಯಾಯಿಯನ್ನು ಶಿಕ್ಷಿಸಲು ಬಗೆಯದೆ, ತಾನೇ ಕ್ಲೇಶಗಳನ್ನು ಅನುಭವಿಸುತ್ತ ಅನ್ಯಾಯಿಗೆ ವಿವೇಕೋದಯವಾಗಿ ಅವನು ಪಶ್ಚಾತ್ತಾಪ ಪಡುವ ವರೆಗೆ ತಪಸ್ಸನ್ನಾಚರಿಸುವನು.

ಜಾತಿಯೂ ಅನ್ನ-ನೀರಿಗೆ ಸಂಬಂಧಿಸಿದ ಅದರ ನಿರ್ಬಂಧಗಳೂ ಈ ದೇಶದಲ್ಲಿ ಅತ್ಯಂತ ಪ್ರಾಚೀನ ಕಾಲದಿಂದ ರೂಢವಾಗಿವೆಯೆಂದು ನಾವು ನೆನಪಿನಲ್ಲಿಡಬೇಕು. ವೈದಿಕ ಧರ್ಮೀಯರು ಮಾತ್ರವಲ್ಲ, ಜೈನ, ಸೀಖ, ಮುಸ್ಲಿಮ ಕ್ರೈಸ್ತ ಮೊದಲಾದ ಧರ್ಮಗಳ ಅನುಯಾಯಿಗಳು ಕೂಡ ಅದರ ಹಿಡಿತದಿಂದ ತಪ್ಪಿಸಿಕೊಂಡಿಲ್ಲ. ಸಾಮಾನ್ಯ ಹಿಂದುವಿಗೆ, ಎಷ್ಟೋ ವೇಳೆ, ಧರ್ಮವೆಂದರೆ, ಅನ್ನ-ನೀರು, ಸ್ನಾನ ಮತ್ತು ಸಮಾಜದಲ್ಲಿ ಮುಟ್ಟುಚಟ್ಟು ಇವುಗಳಿಗೆ ಸಂಬಂಧಿಸಿದ ಕೆಲ ನಿಬಂಧನೆಗಳನ್ನು ಪಾಲಿಸುವದೇ ಅಲ್ಲದೆ ಬೇರೇನೂ ಅಲ್ಲ. ಧರ್ಮದ ಬಗ್ಗೆ ಈ ಬಗೆಯ ಭಾವನೆ ಹಿಂದೂ ಜಾತಿಯ ಎಲ್ಲ ಪಂಗಡಗಳಲ್ಲಿ-ಮುಹಾ ಪಂಡಿತರಲ್ಲಿ ಹೇಗೋ ಹಾಗೆಯೆ ಪಾಮರ ಕಿಸಾನ, ಕೂಲಿಕಾರರಲ್ಲಿಯೂ ಹೆಂಗಸರು ಮಕ್ಕಳಲ್ಲಿಯೂ ಬೇರೂರಿದೆ. ಇದಕ್ಕೆ ಹರಿಜನರು ಕೂಡ ಹೊರತಾಗಿಲ್ಲ.

ಸವರ್ಣರೆನಿಸುವವರು ಹಾಗೆನಿಸಿಕೊಳ್ಳಲು ಅವರು ಆಕಸ್ಮಿಕವಾಗಿ ಆ ಜಾತಿಯಲ್ಲಿ ಹುಟ್ಟಿದ್ದೇ ಕಾರಣವೆಂಬದನ್ನೂ ನಾವು ಮರೆಯತಕ್ಕದ್ದಲ್ಲ. ನಿಜವಾಗಿ ಅವರಲ್ಲಿ ಹೆಚ್ಚು ಜನರು ಹರಿಜನರಲ್ಲಿನ ಹೆಚ್ಚು ಜನರಂತೆ ಹಿಂದುಳಿದವರೂ ಅಜ್ಞಾನಿಗಳೂ ಆಗಿದ್ದಾರೆ. ವಿಚಾರವಂತರೂ ಪ್ರಗತಿಪರರೂ ಎರಡೂ ಪಂಗಡಗಳಲ್ಲಿ ಬಹಳ ವಿರಳ. ಅರ್ಥಾತ್ ಹರಿಜನರಿಗೆ ಒದಗುವ ದುರ್ವ್ಯವಹಾರಕ್ಕೆ ರೂಢವಾದ ರೀತಿ ನೀತಿಗಳಷ್ಟು ದುರ್ಬುದ್ಧಿ ಕಾರಣವಲ್ಲ. ಹರಿಜನರು ಕಾಯದೆಗೆ ಶರಣುಹೋಗಲು ಎಷ್ಟು ಅಸಮರ್ಥರೋ ಅಷ್ಟೇ ಸವರ್ಣರು ರೂಢವಾದ ಆಚಾರಗಳನ್ನು ಮೀರಲೂ ಅಸಮರ್ಥರಾಗಿರುವರು. ಅವರ ರಾಜಕೀಯ ಶೃಂಖಲೆಗಳು ಹೋಗಿರಬಹುದು; ಆದರೆ ಸಾಮಾಜಿಕ ರೂಢಿ ನಿರ್ಬಂಧಗಳು ಇನ್ನೂ ಹೋಗಿಲ್ಲ.

ಆದುದರಿಂದ ನಮ್ಮ ಮುಂದಿರುವದು ಸವರ್ಣ ಮತ್ತು ಹರಿಜನ ಇವರಿಬ್ಬರನ್ನೂ ವಿಮೋಚಿಸುವ ಸಮಸ್ಯೆ. ಅದಕ್ಕಾಗಿ ಉದಾರಶೀಲರಾದ ಸವರ್ಣರೂ ಹರಿಜನರೂ ಕ್ಲೇಶಗಳನ್ನು ಸ್ವಾಗತಿಸಿ ತಪಸ್ಸನ್ನು ಆಚರಿಸುವ ಮೂಲಕ ಎರಡೂ ಪಂಗಡಗಳನ್ನು ಕೊಡಕುಗಳಿಂದ ಬಿಡಿಸಬೇಕು.

ಪ್ರಸ್ತುತ ಸಂದರ್ಭದಲ್ಲಿ ಒಂದು ಉಪಾಯವಿದೆ. ಸವರ್ಣ ಗೆಳೆಯರು ಬಾಯಾರಿದ ಹರಿಜನರನ್ನು ಸಂಗಡ ಕರೆದುಕೊಂಡು ಅರವಟ್ಟಿಗೆಗಳಿಗೆ ಹೋಗಿ ಉಳಿದವರಿಗೆ ಕೊಡುವ ರೀತಿಯಲ್ಲೆ ಅವರಿಗೂ ನೀರು ಕೊಟ್ಟಲ್ಲದೆ ತಾವೂ ನೀರು ಕೊಳ್ಳಲೊಲ್ಲೆವೆನ್ನಬೇಕು. ಹರಿಜನರಿಗೆ ಸಮಾನತೆ ನಿರಾಕರಿಸಲ್ಪಟ್ಟರೆ ಆಗ ಅವರ ಗೆಳೆಯರು ಅಲ್ಲೇ ಕೂತು ನೂಲುತ್ತ ರಾಮಧುನಿಯನ್ನು ಭಜಿಸಬೇಕು. ಅವರಿಗೆ ನೀರಡಿಕೆಯಿಂದಾಗಿ ನೂಲುವದು ಅಸಾಧ್ಯವಾದರೆ, ಆಗ ಅವರು ಬೇರೆಲ್ಲೂ ನೀರು ಕುಡಿಯದೆ ಶಾಂತರೀತಿಯಿಂದ ಮೌನವಾಗಿ ಕುಳಿತುಕೊಳ್ಳಬೇಕು ಅರವಟ್ಟಿಗೆಯವನ ಮೇಲೆ ಯಾವ ದುರ್ಭಾವನೆಯನ್ನೂ ಇಟ್ಟುಕೊಳ್ಳದೆ ಈ ಕ್ರಮವನ್ನು ಶ್ರದ್ಧೆಯಿಂದ ಸಾಗಿಸಿದರೆ ಅದು ಫಲಕಾರಿಯಾಗುವ ಆಶೆ ಇದ್ದೇಇದೆ. ಈ ಕ್ರಮದಲ್ಲಿ ಯಾವ ಕಪಟವೂ ಇರಕೂಡದು, ಉದಾಹರಣೆಗಾಗಿ ನೀರಡಿಕೆಯಿಲ್ಲದೆ ಸುಮ್ಮನೆ ಕಪಟ ಸತ್ಯಾಗ್ರಹವನ್ನು ಕೈಕೊಳಕೂಡದು. ನಮ್ಮ ಹೃದಯದ ತಳದಲ್ಲಿ ಹುದುಗಿರುವ ಅಸತ್ಯವೇ ನಮ್ಮ ಪ್ರಯತ್ನಗಳನ್ನು ವಿಫಲಗೊಳಿಸಲು ಸಾಕು. ಆದ್ದರಿಂದ ನೀರಡಿಕೆಯಾದವರು ಮಾತ್ರ ಸತ್ಯಾಗ್ರಹಕ್ಕೆ ಕೈಹಾಕಬೇಕು. ಯಾವ ಸವರ್ಣನೂ ತನ್ನೀ ಕಾರ್ಯದಲ್ಲಿ ಸಹಕರಿಸದೆ ಹೋದರೆ ಹರಿಜನನು ತಾನೇ ಸತ್ಯಾಗ್ರಹವನ್ನು ಕೈಕೊಳ್ಳಲಾಪನು. ಅಂಥ ಪ್ರಸಂಗದಲ್ಲಿ ಅವನು ಇನ್ನಷ್ಟು ಕ್ಲೇಶಗಳನ್ನು ಅನುಭವಿಸಬೇಕಾದೀತು. ಆದರೂ ಅವನು ದೇವರ ವರವೆಂದು ಅವನ್ನು ಸ್ವೀಕರಿಸಬೇಕು. ಅಜ್ಞಾನಿಗಳೂ ದುಷ್ಟರಂತೆ ಕಾಣಿಸುವವರೂ ಬೈದರೆ ಹೊಡೆದರೆ ಕೂಡ ಕ್ಷಮಾಬುದ್ಧಿಯಿಂದ ಅವರಿಗೆ ಹಿತವನ್ನೆ ಬಯಸಬೇಕು. ಈ ಪ್ರಕಾರವಾಗಿ ನಡೆದುಕೊಳ್ಳುವವನೇ ಸಾರ್ಥಕ್ಯ ಹೊಂದಿದ ಹರಿಜನ. ಅವನೇ ನಿಜವಾದ ಸತ್ಯಾಗ್ರಹಿ.

ಚರಕವು ಸಾತ್ವಿಕ ಬಲವನ್ನು ಉಂಟು ಮಾಡಲು ಸಹಾಯವಾಗುವದು. ಏಕೆಂದರೆ ಅದು ತಾನೇ ಇಂದಿನ ಫ್ಯಾಶನ್ನಿಗೊಂದು ಪ್ರತಿಭಟನೆಯ ರೂಪದಲ್ಲಿ ಉದ್ಭವಿಸಿದ ವಸ್ತು. ಈ ಯಂತ್ರಯುಗದಲ್ಲಿ ಚರಕದಂಥ ವಸ್ತುಗಳು ವಿಕಟವೂ ಹಾಸ್ಯಾಸ್ಪದವೂ ಆಗಿ ತೋರುತಿರುವಾಗ ಅದನ್ನು ತಿರುಗಿಸುವವನು ಪ್ರವಾಹಕ್ಕೆ ವಿರುದ್ಧವಾಗಿ ಸಾಗುವ ದಿಟ್ಟತನವುಳ್ಳವನೇ ಸರಿ. ಒಂದು ವಿಷಯದಲ್ಲಿ ಪ್ರವಾಹಕ್ಕೆ ವಿರುದ್ಧವಾಗಿ ವಿವೇಕವನ್ನು ಅವಲಂಬಿಸುವ ಧೀರನು ಅಂಥ ಹಲ ಅನ್ಯಾಯಗಳ ವಿರುದ್ಧವೂ ಎದ್ದು ನಿಲ್ಲುವ ಧೈರ್ಯವನ್ನು ಪಡೆಯುವ ಸಂಭವವಿದೆ.

ವರ್ಧಾ

೧೫-೮-೪೯ ಕಿ. ಘ. ಮಶ್ರೂವಾಲಾ

(ಹಿಂದುಸ್ತಾನಿಯಿಂದ)

ಪ್ರಾಥಮಿಕ ಶಾಲೆಗಳ ಮಾಧ್ಯಮ

ಪ್ರಾಂತ ಭಾಷೆಯಾವುದಿದ್ದರೂ (ಕೆಲಿಯ... ಪಾಕಷ್ಟು ಮಕ್ಕಳಿದ್ದರೆ) ಮಗುವಿನ ಮಾತೃಭಾಷೆಯಲ್ಲೇ ಶಿಕ್ಷಣ ಮಾಧ್ಯಮವಾಗಿ ತೆಗೆದುಕೊಳ್ಳಬೇಕು ಎಂಬುದು ಎಲ್ಲ ಪ್ರಾಂತಗಳ ಸರ್ವ ಸಾಮಾನ್ಯ ಧೋರಣೆಯಾಗಬೇಕೆಂದು ತಿಳ್ಳಯಿಸಿದ್ದನ್ನು ಓದಿದಾಗ ನಾನು ಇದು ತೃಪ್ತಿಕರವಾದ ನಿರ್ಣಯವೆಂದು ಕೊಂಡೆ. ಆದರೆ, ಬಳಸಿದ ಪದಗಳಿಗೆ ನಾನು ತಿಳ್ಳವರೊಡನೆ ಕಲ್ಪಿಸಿಕೊಂಡ ಅರ್ಥಕ್ಕಿಂತ ಭಿನ್ನವಾದ ಅರ್ಥವಿದೆಯೆಂದು ತೋರುತ್ತದೆ.

ಮೂಲಶಿಕ್ಷಣದ ಕಲ್ಪನೆಯನ್ನು ಸ್ವೀಕರಿಸಿದಾಗಿನಿಂದ "ರಾಷ್ಟ್ರೀಯ ಶಿಕ್ಷಣಜ್ಞರು" ಪ್ರಾಥಮಿಕ ಶಿಕ್ಷಣ ಎಂಬ ಪರಿಭಾಷೆಗೆ ಮಕ್ಕಳಿಗೆ ಮೊದಲು ಏಳು ವರ್ಷಗಳಿಗೆ ಕಡಿಮೆಯಿಲ್ಲದ ಅವಧಿಯಲ್ಲಿ ಕೊಡಲಾಗುವ ಮೂಲ ಶಿಕ್ಷಣವೆಂದೇ ಅರ್ಥ ಹಚ್ಚಿದರು. ಸರಕಾರ ಕೂಡ ಮೂಲ ಶಿಕ್ಷಣವೆಂಬ ಪರಿಭಾಷೆಯನ್ನು ಸ್ವೀಕರಿಸಿದ್ದರಿಂದ ಮಗು ಮೂಲಶಿಕ್ಷಣದ ಇಡೀ ಅವಧಿಯಲ್ಲಿ ತನ್ನ ಮಾತೃಭಾಷೆಯನ್ನು ಕಲಿಯುವುದೆಂದು ನಾನು ತಿಳಿದುಕೊಂಡೆ. ಕೆಳಗಿನ ಮತ್ತು ಮೇಲಿನ ಮೂಲಶಿಕ್ಷಣ ಅಥವಾ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಎಂದು ಶಿಕ್ಷಣವನ್ನು ನಾಲ್ಕು ಇಲ್ಲವೆ ಐದು ವರ್ಷಗಳ ನಂತರ ಇಭ್ಭಾಗಿಸಿದ್ದರಿಂದ ಈಗ ಮೊದಲಿನ ನಾಲ್ಕೈದು ವರ್ಷಗಳ ಶಿಕ್ಷಣವನ್ನು ಮಾತ್ರ ಪ್ರಾಥಮಿಕ ಶಿಕ್ಷಣವೆನ್ನುತ್ತಾರೆ ಎಂದು ನನಗೆ ತಿಳಿಯಿತು. ಮಾತೃಭಾಷೆಯ ಜ್ಞಾನಕ್ಕೆ ಒಂದು ಒಳ್ಳೆಯ ತಳಗಟ್ಟು ಕೊಡಬೇಕಾದರೆ ಕೂಡ ಈ ಅವಧಿ ಕಡಿಮೆಯೇ ಸೈ. ಆದುದರಿಂದ ಯಾವ ಅಲ್ಪಸಂಖ್ಯರ ಸಂತುಷ್ಟಿಗಾಗಿ ಈ ಸೌಲಭ್ಯವನ್ನು ಕಲ್ಪಿಸಲಾಯಿತೋ ಅವರಿಗೆ ಇದು ತೃಪ್ತಿಕರವೆನಿಸದು. ಶಿಕ್ಷಣ ಶಾಸ್ತ್ರದೃಷ್ಟ್ಯಾ ಈ ಪರಿವರ್ತನ ಅಯುಕ್ತ. ತಾಯ್ನುಡಿಯ ಮಾಧ್ಯಮದ ಔದಾರ್ಯವನ್ನು ಅಲ್ಪಸಂಖ್ಯರಿಗೆ ಕೊಡಬೇಕೆಂಬುದೇ ಆದರೆ ಅದು ಏಳು ವರ್ಷ ಅವಧಿಯ ಇಡೀ ಮೂಲ ಶಿಕ್ಷಣದ ಕಾಲದಲ್ಲೂ ಸಿಗುವಂತಾಗಬೇಕು. ಅವಧಿಯ ನಂತರ ಮಗುವಿಗೆ ಪ್ರಾಂತಭಾಷೆಯಲ್ಲಿ ಶಿಕ್ಷಣ ಕೊಡಿಸಲು ಬಿಡಬೇಕೋ ಇಲ್ಲವೆ ತನ್ನ ಮೂಲ ಪ್ರಾಂತದಲ್ಲಿ ಶಿಕ್ಷಣ ಕೊಡಿಸಲು ಕಳಿಸಬೇಕೋ ಎಂಬುದನ್ನು ನಿರ್ಣಯಿಸುವ ವಿಕಲ್ಪ ಪಾಲಕನಿಗಿರುತ್ತದೆ. ಮಗು ಅಷ್ಟು ಹೊತ್ತಿಗೆ ಮನೆಬಿಟ್ಟು ಹೊರಗೆ ಹೋಗಿ ಕಲಿಯುವಷ್ಟು ದೊಡ್ಡದಾಗಿರುತ್ತದೆ. ನಾನಿದನ್ನು ಬರೀ ತಾತ್ವಿಕ ಶಿಕ್ಷಣ ಶಾಸ್ತ್ರಜ್ಞನಾಗಿ ಹೇಳುತ್ತಿಲ್ಲ; ಪ್ರಾಥಮಿಕ ದಶೆಯಲ್ಲಿ ಗುಜರಾತಿಯಿಂದ ಮರಾಠಿಗೆ, ಮರಾಠಿಯಿಂದ ಗುಜರಾತಿಗೆ ಹೀಗೆ ಅದಲು ಬದಲು ಮಾಡಿ ಮಗುವಿನ ಮನಸ್ಸಿಗೆ ಎಷ್ಟು ಧಕ್ಕೆಯಾಗುವದೆಂಬುದನ್ನು ತಿಳಿದವನಾಗಿ ಹೇಳುತ್ತಿದ್ದೇನೆ. ಅಲ್ಲದೆ, ನಾನು ನನ್ನ ಕುಟುಂಬದಲ್ಲಿ ಕೆಲವರಿಗೆ ಸಂಪೂರ್ಣವಾಗಿ ಮರಾಠಿಯ ಮೂಲಕ, ಕೆಲವರಿಗೆ ಮೊದಲಿಂದ ಕಡೆತನಕ ಗುಜರಾತಿಯ ಮೂಲಕ ಮತ್ತೆ ಕೆಲವರಿಗೆ ಸಂದರ್ಭಾನುಸಾರ ಅದರಿಂದ ಇದಕ್ಕೆ ಇದರಿಂದ ಅದಕ್ಕೆ ಸುತ್ತಾಡಿಸಿ ವಿದ್ಯಾಭ್ಯಾಸ ಮಾಡಿಸಿದವನು; ಆದ್ದರಿಂದ ಅವರಿಗೆ ಅದರಿಂದ ಯಾವ ಯಾವ ವಿಧದ ಹಾನಿಯಾಗಿದೆ ಎಂಬುದನ್ನು ತಿಳಿದುಕೊಂಡು ಮಾತಾಡುತ್ತಿದ್ದೇನೆ. ಬಹಳ ಜನರು ಅನೇಕ ಭಾಷೆಗಳಲ್ಲಿ ತಕ್ಕಮಟ್ಟಿನ ಜ್ಞಾನವನ್ನು ಪಡೆಯಬಲ್ಲವರಾದರೂ ಸಾಮಾನ್ಯವಾಗಿ ಒಬ್ಬ ಮನುಷ್ಯನಿಗೆ ಎರಡೇ ಭಾಷೆಗಳಲ್ಲಿ ಶುದ್ಧವಾಗಿ ಬರೆಯಲೂ ಮಾತಾಡಲೂ ಸಾಧ್ಯ ಎಂದು ಹೇಳಲಾಗಿದೆ. ಬುಡದಲ್ಲೇ ಮಿಶ್ರಣ ಮಾಡಿದರೆ ಹೀಗಾಗುವದು ಇನ್ನೂ ಹೆಚ್ಚು. ತಾಯ್ನುಡಿಯು ಮೊದಲಿನ ನಾಲ್ಕೈದು ವರ್ಷಗಳ ವರೆಗೆ ಮಾತ್ರ ಮಾಧ್ಯಮವಾಗುವದಾದರೆ ನನ್ನ ಮನೆಯ ಸಮೀಪದ ಶಾಲೆಯಲ್ಲಿ ಮೊದಲಿಂದಲೂ ನನ್ನ ಮಗುವಿಗೆ ಪ್ರಾಂತಭಾಷೆಯಲ್ಲೇ ವಿದ್ಯಾಭ್ಯಾಸ ಮಾಡಿಸಿಯೇನಲ್ಲದೆ, ಮೊದಲು ನಾಲ್ಕು ವರ್ಷ ತಾಯ್ನುಡಿಯಲ್ಲಿ ಮಾಡಿಸಿ ಅನಂತರ ಪ್ರಾಂತಭಾಷೆಯಿಂದ ಮಾಡಿಸಲಾರೆ. ಎರಡನೆಯ ಬಗೆಯಲ್ಲಿ ಶಿಕ್ಷಣ ತೆಗೆದುಕೊಂಬ ಮಗುವಿಗೆ ಭಾಷೆಯು ಕಚ್ಚಾಯ ದುರ್ಬಲವಾಗಿ ನಷ್ಟಕ್ಕೊಳಗಾಗುವದಲ್ಲದೆ, ವ್ಯಾಕರಣ, ಪದಿಸುಧಿ, ಉಚ್ಚಾರಣೆಗಳಲ್ಲಿ ತಪ್ಪಿ ಮಿಳ್ಳವರ ಅಪಹಾಸ್ಯಕ್ಕೆ ಗುರಿಯಾಗುತ್ತದೆ. ೧೧ ರಿಂದ ೧೫ ರೊಳಗಿನ ಮಗು ಅಂಥ ಅಪಹಾಸ್ಯವನ್ನು ಸಹಿಸಿಕೊಳ್ಳ[illegible] ಅದಕ್ಕೆ ಆ ವಯಸ್ಸಿನಲ್ಲಿ ಸ್ವಾಭಿಮಾನ ಬಹಳ ಇರುತ್ತದೆ.

[illegible]

[illegible]

ಜಾತಿಕ ಓಹಾರದಕ್ಕೆ ಬರೆಯುತ್ತಾರೆ [illegible] ಉರ್ದು ಕ್ಯಾಡರ್ ಎಂಬ [illegible] ಯನ್ನು ಎತ್ತಿದ್ದೀರಿ. ಆಕರೆ [illegible] ಕೇಳುತೆ- ಈ ಉರ್ದು ಮಡುಕೆಳ [illegible] ಇನ್ನು ದ್ವಿರಾಷ್ಟ್ರ ಸಿದ್ಧಾಂತಕ್ಕೆ [illegible]

[illegible] ಒಂದೇ ರಾಷ್ಟ್ರದ ದೃಷ್ಟಿ [illegible] ಯಬೇಕ, ದಂತ್ರ ಒಂದೇ ರಾಷ್ಟ್ರ [illegible] ಘಟನಾಸಮಿತಿ ಇನ್ನು ನಿಶ್ಚಯವನ್ನು [illegible] ನಿರ್ಣಯ. ಕೆಲವು ಶ್ರಮವಾದರೂ ಒಂದು [illegible] ಭಾಷೆಯಿಂದೇಕೆ [illegible] ಪ್ರಾಂತಗಳಲ್ಲ ಶಿಕ್ಷಣವು ಅತ್ [illegible] ಗಳೂ ಪ್ರಾಂತಭಾಷೆಗಳಲ್ಲೇ [illegible] ಬೇಕೆಂದೂ ಗೊತ್ತಾಗಿದೆ. ಉರ್ದು [illegible] ಪ್ರಾಂತಕ್ಕೆ ಸೇರಿದ್ದೆಂದು ತಿಳಿವು [illegible] ಬಲ್ಲಿರಾ? ಯಾವ ಪ್ರಾಂತವಾಗಲಿ [illegible] ವಾಗಲಿ ಉರ್ದುವನ್ನು ರಾಷ್ಟ್ರಭಾಷೆಯ [illegible] ಮಾಡಬೇಕೆಂದು ದಣಿಯುತ್ತಿದೆಯೆ?

"ಲಿಪಿಯ ಪ್ರಶ್ನೆ ಇನ್ನು [illegible] ಯಲ್ಲೇ ಇದ್ದರೂ ಉತ್ತರ [illegible] ಹಿಂದಿಯ ಏಕಮಾತ್ರ [illegible] ಮುಖ್ಯಮಂತ್ರಿ ಪಂಡಿತ [illegible] ಕೂಡ ರಾಷ್ಟ್ರಭಾಷೆಯನ್ನು [illegible] ಕರೆಯಲಿ, ಹಿಂದುಸ್ತಾನಿಯೆನ್ನಲಿ, ರಾಷ್ಟ್ರಲಿಪಿ ದೇವನಾಗರಿಯೆ ಆಗುವದೆಂದು [illegible] ದ್ದಾರೆ.

"ಅಕೋಲಾ ಸ್ಟೇಶನ್ನಿನ [illegible] ಗುಜರಾತಿ ಅಥವಾ ಬಂಗಾಲಿ [illegible] ಬರೆಯುವದು ಅವಶ್ಯವಾಗಿಲ್ಲದಲ್ಲಿ, [illegible] ಉರ್ದುವಿನಲ್ಲಿ ಮಾತ್ರ ಬರೆಯ[illegible] ಅವಶ್ಯ? ನಾವೇಕೆ ದ್ವಿರಾಷ್ಟ್ರ ಸಿದ್ಧಾಂತ[illegible] ಬೀಜವಾದ ಉರ್ದು ಲಿಪಿಯಿಂದ [illegible] ಹಿತದಾಗಬೇಕು?"

ಉರ್ದು ಲಿಪಿಯ ಅವಶ್ಯಕತೆ ಅನಪೇಕ್ಷ್ಯತೆಗಳ ವಾದವನ್ನು ಪುನಃ ಪ್ರಾರಂಭಿಸಲು ನನಗೆ ಇಚ್ಛೆಯಿಲ್ಲ. ಎರಡೂ ಪಕ್ಷಗಳಲ್ಲಿ [illegible] ಚರ್ಚೆಯಾಗಿದೆ. ಅದು ಉರ್ದು [illegible] ಪ್ರಶ್ನೆಯಾಗಿರದೆ, ನ್ಯಾಯ ಮತ್ತು [illegible] ವ್ಯವಹಾರದ್ದಾಗಿದೆ. ಕೇಂದ್ರ ಸರಕಾರ [illegible] ಕುರಿತು ಇನ್ನೂ ನಿರ್ಣಯ ಮಾಡದಿರುವಾಗ ಅದರ ಒಂದು ಶಾಖೆ ತನ್ನ ಅಧಿಕಾರ [illegible] ಕಾರ್ಯಗಳನ್ನು ಮಾಡುವದು ತರವಲ್ಲ. [illegible] ರಿಂದಲೇ ಪ್ರತಿಭಟಿಸಬೇಕಾಯಿತು. ಪ್ರಾಂತೀಯ ಭಾಷೆಗಳ ಮಾತನ್ನು— ಇಂಗ್ಲೀಷ ಕೂಡ— ಬಿಡಿರಿ, ಇತರ ಪ್ರಾಂತೀಯರಿಗೆ [illegible] ರವರ ಲಿಪಿಗಳನ್ನು ಬಿಡಬೇಕೆಂದು [illegible] ಸ್ಟೇಶನ್ನಿನ ಕಲೆಹಲಗೆಗಳಿಂದ [illegible] ಲಿಪಿಯ ಸೂಚನೆಗಳನ್ನು ತೆಗೆದು [illegible] ಬೇಕೆಂದು ಹೇಳುವಷ್ಟು ಧೈರ್ಯವು [illegible] ವಾದಿಗಳಿಗಿಲ್ಲ.

ಉರ್ದು ಭಾಷೆಗಾಗಲಿ ಉರ್ದು [illegible] ಗಾಗಲಿ ಮುಂದೇನಾದೀತೆಂಬ ಚಿಂತೆ [illegible] ಕಾಲದಹಿತ ಅನಾಥವಾದುದು. [illegible] ಭಾಷೆ ಲಿಪಿ ಮೊದಲಾದವುಗಳನ್ನೆ[illegible] ಸಮಸ್ತ ವಿಷಯಗಳಲ್ಲಿಯೂ ಅದ್ಭುತ [illegible] ವರ್ತನೆಗಳನ್ನೂ ಕಂಡೊಡ್ಡಲು [illegible] ವಾಗಿದೆ. ಲಿಪಿ ಕಲ್ಲರನ್ನು ಬಿಟ್ಟೆ [illegible] ವರ್ಷ ಹಳೆಯ ಶಾಸನಗಳನ್ನು [illegible] ಸಳಿಗಳನ್ನೂ ಇಂದು ಓದಬಲ್ಲವರಾರು? [illegible] ಬೇರೆ ತರದ ಲಿಪಿಗಳನ್ನು ಇಂದು[illegible] ದೇವನಾಗರಿ ಮತ್ತು ತಮಿಳು [illegible] ಒಂದೇ ಬ್ರಾಹ್ಮೀಲಿಪಿಯಿಂದ [illegible] ರೂಪಗೊಂಡಿವೆಯೆಂದು ನಂಬಲಾಗದ [illegible] ನಿಜವಾಗಿಯೂ ಅದುದು ಹಾಗೆಯೆ. [illegible] ಅಕ್ಷ, ಬ್ರಾಹ್ಮಿ, ಅರಬ್ಬಿ ಮತ್ತು [illegible] ಇವೆಲ್ಲವಕ್ಕೂ ಒಂದೇ ಮೂಲವೆಂದು [illegible] ತೋರಿಸಿಕೊಡಬಹುದು. [illegible] ದೇವನಾಗರಿ ಬೇಡಕೆಗಳ [illegible] ಗಳಿ, ಉರ್ದು ಅಥವ [illegible]

[illegible]

ಲಿಪಿಯೆಂದಾಗಲಿ, ದೇವನಾಗರಿ [illegible] ದೆಂದಾಗಲಿ [illegible]

—[illegible]

[illegible]

ಸ್ಕಾಟರ ಮಿತವ್ಯಯಬುದ್ಧಿ

ಹಿಂದುಸ್ಥಾನದಲ್ಲಿ ನಾವು ಬನಿಯಾ, ಮಾರವಾಡಿ, ಕೋಮಟಿಗಳನ್ನು ಆಸೆಬುರುಕರೆಂದು ಗೇಲಿ ಮಾಡುವಂತೆ ಬ್ರಿಟನ್ನಿನಲ್ಲಿ ಸ್ಕಾಟ ಜನರ ಅತಿಶಯ ಮಿತವ್ಯಯವೊಂದು ನಗೆಚಾಟಿಕೆಯ ಮಾತಾಗಿದೆ. ಬಹಳ ದೊಡ್ಡ ದೊಡ್ಡ ಬುದ್ಧಿವಂತರನ್ನು ನಡೆಸಿ ಇಂಗ್ಲಂಡಿನ ಆರ್ಥಿಕಾಭಿವೃದ್ಧಿಗೆ ಕಾರಣರಾಗಿದ್ದರೂ ಸ್ಕಾಟ ಜನರ ಮೇಲಿನ ಈ ಅಪವಾದ ಇಂದಿಗೂ ಗಾದೆಯ ಮಾತಾಗಿದೆ. ಇಂಗ್ಲಿಷ ಪತ್ರಿಕೆಗಳಲ್ಲಿ ಸ್ಕಾಟ್ ಜನರನ್ನು ಅಪಹಾಸ ಮಾಡುವ ನಗೆಮಾತುಗಳು ಯಾವಾಗಲೂ ಬರುತ್ತಿರುತ್ತವೆ. ಇಂಥ ಒಂದು ಹಾಸ್ಯವನ್ನು ನೋಡಿರಿ.

ಒಬ್ಬ ಸ್ಕಾಟಮನ್ನನು ತಂತಿ ಕೊಡಲೆಂದು ಟಪಾಲುಕಚೇರಿಗೆ ಬಂದನಂತೆ. ತಂತಿ ಮಾಸ್ತರನ ಹತ್ತಿರ ಅವನು ತಂತಿದರಗಳನ್ನು ವಿಚಾರಿಸಿದನು. ಶಬ್ದಕ್ಕೊಂದು ಪೆನ್ನಿ ಮತ್ತು ತಂತಿ ಪಡೆಯುವವರ ಹೆಸರು ಪುಕ್ಕಟೆ ಎಂದವನು ತಿಳಿಹೇಳಿದ. ಸ್ಕಾಟ್ಸಮನ್ನನು ಸ್ವಲ್ಪ ಹೊತ್ತು ವಿಚಾರಿಸಿ ಜೇಬಿನಿಂದ ಒಂದು ಕಾಗದದ ತುಂಡು ಹೊರದೆಗೆದು ಮಾಸ್ತರನ ಕೈಯಲ್ಲಿತ್ತು ಹೇಳಿದ: "ನೋಡಿರಿ ಈ ವಿಳಾಸಕ್ಕೆ ತಂತಿ ಕೊಡಬೇಕಾಗಿದೆ. ವಿಳಾಸದಲ್ಲಿ ಮೂರು ಶಬ್ದವಿದೆ. ತಿಳಿಸಬೇಕಾದ ವಿಷಯವೇನೂ ಇಲ್ಲ ಹೆಸರು ಮಾತ್ರ ಕೊಟ್ಟರೆ ಸಾಕು, ನನ್ನ ಹೆಸರು "ಶನಿವಾರ ಬರುತ್ತೇನೆ 'ಸೈಮನ್' ಎಂಬದಾಗಿ!"

* * *

ಇನ್ನೊಬ್ಬ ಸ್ಕಾಟನಿಗೆ ಕುಡಿಯುವ ಚಟ. ಆದರೆ ರೊಕ್ಕ ಬಿಚ್ಚಲು ಕಳ್ಳ. ಅದಕ್ಕಾಗಿ ಆತ ಒಂದು ಉಪಾಯ ಶೋಧಿಸಿದ. ಊರಲ್ಲಿದ್ದ ಪ್ರತಿಯೊಂದು ವ್ಹಿಸ್ಕಿ ಅಂಗಡಿಗೆ ಹೋಗಿ ವಿಸ್ಕಿ ದರ ವಿಚಾರಿಸಿ ತನ್ನ ಬಾಟಲಿ ತುಂಬ ಹೊಯ್ಸಿಕೊಳ್ಳುವದು, ಅದನ್ನು ಮೂಸಿ ನೋಡಿದಂತೆ ಮಾಡಿ, 'ಛೆ ಅದು ಚನ್ನಾಗಿಲ್ಲ' ಎಂದು ತಿರುಗಿ ಅಂಗಡಿಯವನ ಬುದ್ದಿಗೆ ಸುರುವಿಬಿಡುವದು; ಅಲ್ಲಿಂದ ಮನೆಗೆ ಬಂದು ಆ ಬಾಟ್ಲಿಯ ಕೆಳಗೆ ಇರಿಸಿದ್ದ ದಪ್ಪನ್ನ ಸ್ಪಂಜನ್ನು ಹೊರದೆಗೆದು ಹಿಂಡುವದು. ಹೀಗೆ ಎಲ್ಲ ಅಂಗಡಿಗಳಿಗೂ ಒನ್ನೊಮ್ಮೆ ಭೆಟ್ಟಿ ಕೊಟ್ಟು ಸ್ವಲ್ಪಹೊತ್ತಿನಲ್ಲಿ ಅವನು ಏನೂ ಕೊಡದೆ ತನಗೆ ಬೇಕಾದಷ್ಟು ಮದ್ಯವನ್ನು ಶೇಖರಿಸಿಬಿಟ್ಟನಂತೆ!

* * *

ಮತ್ತೊಬ್ಬ ಸ್ಕಾಟನು ಒಂದು ಕ್ಷೌರದಂಗಡಿಗೆ ಹೋದನಂತೆ. ಕ್ಷೌರಿಕನು, ಎಲ್ಲ ಕ್ಷೌರಿಕರೂ ಮಾಡುವಂತೆ, ಒಮ್ಮೆ ಬೋಳಿಸಿ ಎರಡನೆ ಬಾರಿ ನುಣುಪು ಮಾಡಲೆಂದು ಕ್ಷೌರಕತ್ತಿಯನ್ನು ಮುಖದ ಮೇಲೆ ಆಡಿಸಿದನು. ವಿಸ್ಮಿತನಾಗಿ ಸ್ಕಾಟ್ಸಮನ್ ಕೇಳಿದ: "ಇದೇನು?" "ನಾವು ಯಾವಾಗಲೂ ಎರಡು ಸಲ ಕೆರೆಯುತ್ತೇವೆ" ಎಂದು ಕ್ಷೌರಿಕ ಸಮಾಧಾನ ಕೊಟ್ಟ.

ಸ್ಕಾಟ ಮನುಷ್ಯ ಒಮ್ಮೆ ಗಡ್ಡ ಸವರಿಕೊಂಡು ಒಡನೆ ಹೇಳಿದ: "ಹಾಗಾದರೆ ತಡೆ, ಎರಡನೆ ಸಲದ್ದಕ್ಕೆ ನಾಡಿದ್ದು ಶನಿವಾರ ಬರುವೆ!"

* * *

ಇಂಗ್ಲಿಷ್, ಐರಿಶ್ ಮತ್ತು ಸ್ಕಾಟ ಜನರ ಸ್ವಭಾವ ವೈಶಿಷ್ಟ್ಯಗಳ ಬಗ್ಗೆ ಒಂದು ಕತೆ ಹೇಳುವದುಂಟು. ಅಮೇರಿಕೆಯಿಂದ ಪ್ರವಾಸಕ್ಕಾಗಿ ಬಂದಿದ್ದವನೊಬ್ಬನು ತನ್ನ ಇಂಗ್ಲಿಷ್, ಐರಿಶ್ ಮತ್ತು ಸ್ಕಾಟ ಗೆಳೆಯರಲ್ಲಿ ಒಂದೊಂದು ದಿನವನ್ನು ಕಳೆದನಂತೆ. ಅವನಿಗೆ ಚಹಾಕ್ಕೆ ಸ್ವಲ್ಪ ಸಕ್ಕರೆ ಹೆಚ್ಚು ಬೇಕು. ಇಂಗ್ಲಿಷ್ ಗೆಳೆಯನಲ್ಲಿ ಚಹಾ ಕುಡಿಯುವಾಗ ಸಕ್ಕರೆ ಬೇಡಿದರೆ ಅವನು ಇಡಿ ಸಕ್ಕರೆ ದಾನಿಯನ್ನೂ ಚಮಚೆಯನ್ನು ಅತಿಥಿಯ ಮುಂದಿರಿಸಿದನಂತೆ. ಬೇಕಾದಷ್ಟು ಹಾಕಿಕೊಳ್ಳಲಿ, ಎಂದ. ಅದೇ ಪ್ರಸಂಗ ಐರಿಶ ಗೆಳೆಯನಲ್ಲಿ ಬಂದಾಗ ಅವನು ದಾನಿಯಿಂದ ಒಂದು ಚಮಚೆ ಸಕ್ಕರೆಯನ್ನೆತ್ತಿ ಅತಿಥಿಯ ಚಹಾದಲ್ಲಿ ಬೆರಸಿದನಂತೆ. ಸ್ಕಾಟನಲ್ಲಿ ಮಾತ್ರ ಆ ಅಮೇರಿಕನ್ ಅತಿಥಿಗೆ ಬೇರೆಯೆ ಅನುಭವ ದೊರಕಿತು. ಸಕ್ಕರೆ ಕೇಳಿದೊಡನೆ ಅವನು ಬರಿ ಒಂದು ಚಮಚವನ್ನು ಅತಿಥಿಯ ಕೈಗಿತ್ತನು. ಹೇಳಿದನು: "ಸ್ವಲ್ಪ ಕದಡು, ಕಪ್ಪಿನ ಕೆಳಗೆ ಕರಗದೆ ಉಳಿದಿರಬಹುದು!"

* * *

ಆದರೆ ಸ್ಕಾಟನ ಮಿತವ್ಯಯಬುದ್ಧಿಯ ಕತೆಗಳಲ್ಲಿ ಎಲ್ಲಕ್ಕಿಂತ ಸ್ವಾರಸ್ಯವಾದುದು ಈಚೆಗೆ ಒಂದು ಪತ್ರಿಕೆಯಲ್ಲಿ ಬಂದಿದೆ. ಒಂದೂರಿನಲ್ಲಿ ಬಸ್ ದರವನ್ನು ಎರಡು ಪೆನ್ನಿಯಿಂದ ಒಂದು ಪೆನ್ನಿಗೆ ಇಳಿಸಲಾಯಿತಂತೆ. ಮರುದಿನ ಊರಿನ ಸ್ಕಾಟ ಜನರೆಲ್ಲ ಸಭೆ ಸೇರಿ ಬಸ್ ಕಂಪನಿಯ ಈ ಕೃತಿಯನ್ನು ನಿಷೇಧಿಸಿದರು. ದರ ಇಳಿಸಿದ್ದನ್ನು ನಿಷೇಧಿಸುವ ಮಿತವ್ಯಯಬುದ್ಧಿ ವಿಚಿತ್ರವೆನಿಸೀತು. ಆದರೆ ಆ ಸ್ಕಾಟರ ದೂರು ಬೇರೆಯೆ ಆಗಿತ್ತು. ನಿಷೇಧ ಗೊತ್ತುವಳಿಯಲ್ಲಿ "ಮೊದಲು ನಾವು ಬಸ್ ಹತ್ತದೆ ಕಾಲ್ನಡಿಗೆಯಿಂದ ಹೋದರೆ ನಮಗೆ ಎರಡು ಪೆನ್ನಿ ಲಾಭವಾಗುತಿತ್ತು. ಇನ್ನು ಹಾಗೆ ಮಾಡಿದರೆ ಒಂದೇ ಪೆನ್ನಿ ಉಳಿಯುವದರಿಂದ ನಾವು ಈ ಕೃತಿಯನ್ನು ನಿಷೇಧಿಸುತ್ತೇವೆ" ಎಂದಿತ್ತು!

ಆದರ್ಶ ನಿರಾಶ್ರಿತ

ತಮ್ಮ ಯೋಗಕ್ಷೇಮ ಪಾಲನ ಪೋಷಣದ ಭಾರವೆಲ್ಲ ಸರಕಾರದ ಹೊಣೆಯೆಂದು ಭಾವಿಸಿ ಆ ಬಗ್ಗೆ ಗೊಂದಲವೆಬ್ಬಿಸಲು ಕೂಡ ಹಿಂಜರಿಯದ ನಿರಾಶ್ರಿತರ ಕತೆ ಕೇಳಿ ಬೇಸತ್ತವರಿಗೆ ಬಂಗಾಲಿ ನಿರಾಶ್ರಿತ ಯುವಕನೊಬ್ಬನ ಆದರ್ಶ ನಡೆವಳಿಯನ್ನು ಕೇಳಿ ಸಂತೋಷವಾಗಬಹುದು.

ಸಂತೋಷ ಕುಮಾರ ಚಕ್ರವರ್ತಿಯೆಂಬ ಸುಂದರ ಬಂಗಾಲಿ ಯುವಕನೊಬ್ಬನು (ವಯಸ್ಸು: ೩೭) ಕಲಕತ್ತೆಯ ರಸ್ತೆಗಳಲ್ಲಿ ಪಾದರಕ್ಷೆಗಳನ್ನು ತಿಕ್ಕಿ ಬೆಳಗಿಸುವ ವೃತ್ತಿಯನ್ನು ಕೈಕೊಂಡಿದ್ದಾನೆ. ಅವನು ಪೂರ್ವ ಬಂಗಾಲದಿಂದ ವಲಸೆ ಬಂದ ನಿರಾಶ್ರಿತ. ಫರೀದಪುರದ ಒಂದು ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಸದಸ್ಯನಾಗಿದ್ದವ. ಎರಡು ಮಕ್ಕಳ ತಂದೆಯಾದ ಅವನು ಹನ್ನೆರಡು ಜನರ ಕುಟುಂಬದ ಹೊಟ್ಟೆ ಹೊರೆಯಬೇಕಾಗಿದೆ. ಡಂ-ಡಂ ಬಳಿಯಲ್ಲಿ ೧೦೦ ರೂಪಾಯಿ ಬಾಡಿಗೆಯ ಮನೆಯಲ್ಲಿ ಅವನು ವಾಸಿಸಬೇಕಾದುದರಿಂದ ಕೈಯಲ್ಲಿ ಇದ್ದಬಿದ್ದ ಹಣ ಕರಗಿ ಹೋಯಿತು. ಹೊಸದಾಗಿ ಉದ್ಯೋಗವೇನನ್ನಾದರೂ ಪ್ರಾರಂಭಿಸೋಣವೆಂದು ಸರಕಾರಕ್ಕೆ ೫೦೦೦ ರೂಪಾಯಿ ಸಾಲಕ್ಕಾಗಿ ಅರ್ಜಿ ಹಾಕಿದ. ಆದರೆ ಅದೂ ಬೇಗ ಕೈಗೆ ಬರುವಲಕ್ಷಣ ಕಾಣಲಿಲ್ಲ. ಅದ್ದರಿಂದ ಅವನು ಒಂದು ದಿನ ಬೆಳಿಗ್ಗೆ ಎಷ್ಟು ತಕ್ಕ ಸಲಕರಣೆಗಳೊಡನೆ ಕಲಕತ್ತೆಯ ಕಾಲ್ನಡಿಗೆಯರಸ್ತೆಯಂಚಿನಲ್ಲಿ ಬಂದುದಾರಿಗರ ಪಾದರಕ್ಷೆಗಳನ್ನು ತಿಕ್ಕಿ ಬೆಳಗಿಸಲುದ್ಯುಕ್ತನಾದ. ಯಾವ ರೀತಿಯಲ್ಲೂ ಅವನು ಸರಕಾರದಿಂದ ಧರ್ಮಾದಾಯವನ್ನಾಗಲಿ ಪುಕ್ಕಟೆ ಆಹಾರವನ್ನಾಗಲಿ ಈ ವರೆಗೂ ಪಡೆದಿಲ್ಲ. ಒಂದು ಜತೆ ಪಾದರಕ್ಷೆ ತಿಕ್ಕಿದ್ದಕ್ಕೆ ಅವನ "ಫೀಜು" ಒಂದಾಣೆ. ಮೆಟ್ರಿಕ್ ಕಲಿತ ಇಂಗ್ಲಿಷ್ ಮಾತಾಡುವ ಈ ಯುವಕನ ದುರವಸ್ಥೆ ನೋಡಿ ಯಾರಾದರೂ ಹೆಚ್ಚು ಹಣ ಕೊಡಬಂದರೆ ಅವನು ಸ್ವೀಕರಿಸುವದಿಲ್ಲ. ಕಾರಕೂನಿಕೆ ಮಾಡಲೂ ಅವನಿಗೆ ಮನಸಿಲ್ಲ. ಮೊದಲನೆ ದಿವಸ ಅವನು ಈ ವೃತ್ತಿಯಿಂದ ಮುಂಜಾನೆ ೭॥ ಯಿಂದ ಸಂಜೆ ೬ ರ ವರೆಗೆ ರೂ. ೨-೮-೦ ಗಳಿಸಿದನಂತೆ.

ಪರರಿಗೆ ಯಾವ ರೀತಿಯಿಂದಲೂ ಭಾರವಾಗದೆ ಸ್ವಾವಲಂಬನದಿಂದ ಬಾಳುವ ಮೇಲ್ಪಂಕ್ತಿಯನ್ನು ನಿರಾಶ್ರಿತರಿಗೆ ಹಾಕಿಕೊಡುವದೇ ತನ್ನ ಉದ್ದೇಶವೆಂದು ಅವನು ಪತ್ರಿಕಾಪ್ರತಿನಿಧಿಗಳಿಗೆ ತಿಳಿಸಿದನಂತೆ.

ಗೆಣಸಿನ ಹಿರಿಮೆ

ಲೇ: ಶ್ರೀ ಸುಬ್ರಾಯ ಕೃಷ್ಣ ಹೆಗಡೆ, ಶಾನಗೋಡು

ದೇಶದಲ್ಲಿ ಬೆಳೆದು ನಿಂತ ಆಹಾರ ಸಮಸ್ಯೆಯನ್ನು ನೀಗಿಸಲು ಅನೇಕ ಪ್ರಯತ್ನಗಳು ನಡೆಯುತ್ತಿವೆ. ಧಾನ್ಯಗಳ ಬೆಳೆಯನ್ನು ಅವಶ್ಯಕ ಪರಿಮಾಣದಲ್ಲಿ ಹೆಚ್ಚಿಸಿ ಈ ಸಮಸ್ಯೆಯನ್ನು ನೀಗಿಸಲು ಸಾಧ್ಯವಾಗುವದು ಸಂಶಯಾಸ್ಪದ. ಅದಕ್ಕಾಗಿಯೆ ಜನರು ಆಹಾರದ ಅಭ್ಯಾಸಗಳನ್ನೇ ಪರಿವರ್ತಿಸಿಕೊಳ್ಳಬೇಕೆಂದು ತಜ್ಞರು ಸೂಚಿಸುತಿದ್ದಾರೆ. ಬಟಾಟಿಯ ಬೆಳೆ ಧಾನ್ಯಗಳಿಗಿಂತ ಹುಲುಸಾಗಿ ಬರುವದರಿಂದ ಅದರ ಉಪಯೋಗ ಹೆಚ್ಚಾಗಬೇಕೆಂದು ಅಭಿಪ್ರಾಯಪಡಲಾಗಿದೆ. ಆದರೆ ಗೆಣಸು ಬಟಾಟಿಗಿಂತ ಗುಣದಲ್ಲಿ ಏನೂ ಕಡಿಮೆಯಲ್ಲದಿದ್ದರೂ ರುಚಿಯಲ್ಲಿ ಮೇಲ್ಮೆಯಾಗಿದ್ದರೂ ಅದನ್ನು ಬೆಳೆಸುವದೂ ಬಳಸುವದೂ ಬಟಾಟಿಗಿಂತ ಎಷ್ಟೋ ಸುಕರವಾಗಿದೆ.

ಅಧಿಕೋತ್ಪಾದನೆಯ ಎಲ್ಲ ವಿಚಾರಗಳಲ್ಲಿಯೂ ಗೆಣಸನ್ನು ಸ್ಪರ್ಧಿಸುವದು ಬಟಾಟಿಯೇ ಸರಿ. ವರ್ಷದಲ್ಲಿ ಮೂರು ನಾಲ್ಕು ಬೆಳೆ ಕೊಡುವ ಗೆಣಸು, ಬಟಾಟಿಗಿಂತ ಅಲ್ಪ ರೀತಿಯ ಶ್ರಮ-ನೀರು-ಗೊಬ್ಬರಗಳಿಂದಲೇ ಅಧಿಕ ಪ್ರಮಾಣದಲ್ಲಿ ಬೆಳೆಯುವದು ಎಂದಾಗ ಇದನ್ನು ಒಂದು ಉದ್ಯಮವಾಗಿ ಮಾಡುವದು ವಿಹಿತ. ಬೇಕಷ್ಟು ಲಾಭಕರ. ಗೆಣಸು ಹೋಳಿಗೆ, ಹುಳಿ ಪಲ್ಲೆ ಮುಂತಾದ ವಿವಿಧೋಪಯೋಗ ಮತ್ತು ಸ್ವಾಭಾವಿಕ ಮಧುರತೆಯಿಂದ ಬಟಾಟಿಗಿಂತ ಎಷ್ಟೋ ಪಾಲು ಮೇಲು. ಸಮಯದಲ್ಲಿ ಬರಿಯ ಬೆಂದ ಗೆಣಸಿನಿಂದ ಊಟದ ತೃಪ್ತಿ ಪಡೆಯಲಾಗುವದು. ಗೆಣಸು ಬಟಾಟೆಯಂತೆ ಸಪ್ಪೆಯಲ್ಲ. ಒಳಗೆ ಸಣ್ಣ ನಾರಿದ್ದರೂ ನಿರಾತಂಕವಾದದ್ದು. ಕ್ಷೇತ್ರಮಾನದಿಂದ ಬಟಾಟೆಯ ಎರಡು ಪಟ್ಟು ಬೆಳೆಯುವ ಗೆಣಸಿನ ಉತ್ಪಾದನೆಯನ್ನು ದೊಡ್ಡ ಪ್ರಮಾಣದಲ್ಲಿ ಶಾಸ್ತ್ರೀಯವಾಗಿ ಕ್ರಮಗೊಳಿಸಿದರೆ ಭಾರವಾದ ಆಹಾರ ಸಮಸ್ಯೆ ಬೇಕಾದಷ್ಟು ಹಗುರಾಗಬಲ್ಲದು. ಮತ್ತೊಂದು ಹೆಚ್ಚಿನ ವೈಶಿಷ್ಟ್ಯವೆಂದರೆ ಬೆಳೆಯ ಪೂರ್ಣ ಭಾಗವನ್ನೂ ಉಪಯೋಗಿಸುವಲ್ಲಿ ಗೆಣಸು ಅದ್ವಿತೀಯ. ಬೀಜಕ್ಕಾಗಿ ಬೆಳೆದ ಬಟಾಟೆಯನ್ನೇ ಇರಿಸಿಕೊಂಡಂತೆ ಗೆಣಸು ಬೀಜಕ್ಕೆ ಖರ್ಚಾಗುವದಿಲ್ಲ. ಬಳ್ಳಿಯನ್ನು ರಕ್ಷಿಸಿಕೊಂಡರಾಯಿತು. ಗೆಣಸಿಗೆ ಬರುವ ಮಣ್ಣಿನೊಳಗಿನ ಕಿರುಕುಳ-ಹುಳುಕುಗಳನ್ನು ಬಟಾಟೆಯ ಮೇಲಿನ ಪ್ರಯೋಗಗಳಿಂದಲೇ ರಕ್ಷಿಸಿಕೊಳ್ಳಬಹುದು. ಅಲ್ಲದೆ ಹೆಚ್ಚಿನ ಶೋಧ ಬೇಕಿಲ್ಲ. ಮತ್ತೂ ಹೆಚ್ಚಿನದೆಂದರೆ ಗೆಣಸಿಗೆ ಬಟಾಟೆಯಂತೆ ಕೊಳೆಯುವ ಭೀತಿಯೂ ಇಲ್ಲ. ಇದಕ್ಕೆ ಹೊಲವೇ ಬೇಕೆಂದಿಲ್ಲ. ಮನೆಯ ಹಿತ್ತಲು-ಕೊಪ್ಪಲದಲ್ಲಿಯೂ ಬೆಳೆಯಬಲ್ಲದು. ಗೆಣಸಿನ ಇಷ್ಟೆಲ್ಲ ಮಹತ್ವ ವಿಚಾರಿಸಿದರೆ ಇದು ಅನ್ನಪೂರ್ಣೆಯ ಅಪರಾವತಾರವೆಂದರೆ ತಪ್ಪಿಲ್ಲ. ಇದಕ್ಕಾಗಿಯೇ ಪಂಡಿತಜಿಯಂಥವರು ಅನ್ನದೊಡನೆ ಗೆಣಸನ್ನೂ ಸೇವಿಸುವದಿಲ್ಲವೇ?

ಚಿಕ್ಕ ಮಕ್ಕಳ ಪುಟ್ಟಪಟ್ಟಣ

ಮುಂಬಯಿ ಪ್ರಾಂತದ ಇತಿಹಾಸಪ್ರಸಿದ್ಧ ಆರೋಗ್ಯಧಾಮವಾದ ನಾಸಿಕ ಪಟ್ಟಣದಲ್ಲಿ ಈ ಬಾಲಪಟ್ಟಣವು ಪಾರ್ಸಿಜನಾಂಗದ ಪ್ರಮುಖರ ಔದಾರ್ಯದಿಂದ, ಮೊನ್ನೆ ಮೊನ್ನೆ ರೂಪಗೊಂಡು, ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನೆಬ್ಬಿಸಿದೆಂದು ಹೇಳಲಡ್ಡಿಯಿಲ್ಲ. ಈ ದೇಶದ ಸಾಮಾನ್ಯ ಜನತೆಗೆ ಇದೊಂದು ಸೋಜಿಗವೇ! ಈ ಸಂಸ್ಥೆಯಲ್ಲಿ, ಎಲ್ಲ ತರದ ಜೀವನೋಪಯುಕ್ತ ಕೆಲಸಗಳನ್ನು ನಿರ್ವಹಿಸಿಕೊಂಡು ಹೋಗುವ ಕಲೆಯನ್ನು ಕಲಿಸಲಿಕ್ಕೆ ಬೇಕಾಗುವ ಎಲ್ಲ ಸಲಕರಣೆಗಳೂ ಇವೆ. ಈ ಸಂಸ್ಥೆಯನ್ನು ಬಾಲಕರೇ ನಡೆಸುತ್ತಾರೆ. ಇಲ್ಲಿ ಬ್ಯಾಂಕು, ಪೋಸ್ಟ ಆಫೀಸು, ಅಂಗಡಿಗಳು, ಕೋರ್ಟು ಮೊದಲಾದವು ಇವನ್ನೆಲ್ಲ ಬಾಲಕರೇ ಮುಖ್ಯೋಪಾಧ್ಯಾಯರ ಸಲಹೆಯ ಮೇರೆಗೆ ಸಾಗಿಸುತ್ತಾರೆ. ಈ ಪಟ್ಟಣದ ಮೇಯರನು ಕೂಡ ಬಾಲಕನೇ! ಮುಂಬಯಿಯ ಗವ್ಹರ್ನರರಾದ ಸರ್ ಮಹಾರಾಜಸಿಂಗರು ಈ ಪಟ್ಟಣಕ್ಕೆ ಭೆಟ್ಟಿ ಕೊಟ್ಟಾಗ ಹೀಗೆ ಉದ್ಗಾರ ತೆಗೆದರು: "ಈ ಮಕ್ಕಳ ಪಟ್ಟಣವು" ಅಮೇರಿಕೆಯನ್ನು ಹೊರತುಪಡಿಸಿ, ಜಗತ್ತಿನಲ್ಲಿಯೇ ಏಕಮೇವ ಪಟ್ಟಣವಾಗಿದೆ.

ಇಂಥ ಪಟ್ಟಣಗಳು ದೇಶದಾದ್ಯಂತವಾಗಿ ನಿರ್ಮಿತವಾದರೆ, ಬಾಲಶಿಕ್ಷಣದ ಸಮಸ್ಯೆಯೇ ಬಿಟ್ಟಂತಾಗುವದು. ಹಿರಿಯರು ಮಾಡಿದಂತೆ ಮಾಡುವ ಕಲೆಯು ಮಕ್ಕಳಲ್ಲಿ ಸಹಜವಾಗಿ ಇದ್ದದ್ದರಿಂದ, ಅವರು ಇಂಥ ಪಟ್ಟಣದಲ್ಲಿ ಲೀಲೆಯಿಂದ ಪಾಠ ಕಲಿತು ಉತ್ತಮ ನಾಗರಿಕರಾಗಬಲ್ಲರು. ಹುಡುಗರು ಆಲಸ್ಯದಿಂದ ಮತ್ತು ಸ್ವಾವಲಂಬನದ ಅಭಾವದಿಂದ ಅಡ್ಡಹಾದಿ ಹಿಡಿಯುತ್ತಾರೆ. ಬರೀ ಪುಸ್ತಕೀಯ ಜ್ಞಾನಕ್ಕಿಂತಲೂ ಮಕ್ಕಳ ವೇಳೆಯನ್ನು ಈ ರೀತಿಯಿಂದ ತೊಡಗಿಸಿದರೆ, ಸಹಜ ಮಾರ್ಗದಿಂದ ಜ್ಞಾನ ಸಂಪಾದನೆಯಾಗುತ್ತದೆ.

ಸಮಸ್ತ ಭಾರತ

ಮುಂಬಯಿ

ಕೊಯನಾ ಕೊಳ್ಳದ ನೀರಾವರಿ ಯೋಜನೆ ೧೯೫೪ ರೊಳಗೆ ಪೂರ್ಣವಾಗುವದೆಂದು ಭಾರತದ ಗಣಿ ಮತ್ತು ವಿದ್ಯುತ್ ಮಂತ್ರಿ ಶ್ರೀ ಎನ್. ವಿ. ಗಾಡಗೀಳರು ಸೊಲ್ಲಾಪುರ ಜಿಲ್ಹಾ ಬೋರ್ಡಿನ ಮಾನಪತ್ರಕ್ಕೆ ಉತ್ತರ ಕೊಡುತ್ತ ಹೇಳಿದರು.

ಸಂಕಲ್ಪಿತ ಗುಜರಾಥ ವಿಶ್ವವಿದ್ಯಾಲಯಕ್ಕೆ ಶ್ರೀಮತಿ ನಿರ್ಮಲಾಬೇನ ಅಕುಭಾಯಿಯವರು ೧॥ ಲಕ್ಷ ರೂಪಾಯಿಗಳ ದಾನವನ್ನು ಶಿಕ್ಷಣ ಮತ್ತು ಮಕ್ಕಳ ಮಾನಸಶಾಸ್ತ್ರ ಸಂಶೋಧನೆಗಳಿಗಾಗಿ ಕೊಟ್ಟಿದ್ದಾರೆ.

ಕಿರ್ಲೋಸ್ಕರ ಆಯಿಲ ಎಂಜಿನ ಕಾರಖಾನೆ (ಪುಣೆ)ಯ ಪ್ರಾರಂಭೋತ್ಸವ ಮಾಡುತ್ತ ಭಾರತ ಸರಕಾರದ ಉದ್ಯೋಗ ಮತ್ತು ಪೂರೈಕೆ ಮಂತ್ರಿ ಡಾ. ಶ್ಯಾಮಪ್ರಸಾದ ಮುಕರ್ಜಿಯವರು ಭಾರತದಲ್ಲಿ ಒಂದು ಡೀಸೆಲ ಎಂಜಿನ್ ಕಾರಖಾನೆಯನ್ನು ಸ್ಥಾಪಿಸುವ ಸರಕಾರದ ಮನೀಷೆಯನ್ನು ವ್ಯಕ್ತಗೊಳಿಸಿದರು. ಸದ್ಯಕ್ಕೆ ಭಾರತದಲ್ಲಿ ವರ್ಷಕ್ಕೆ ೧೨೦೦ ಆಯಿಲ ಎಂಜಿನುಗಳು ತಯಾರಾಗುತಿದ್ದು ೩ ೪ ಸಾವಿರ ಎಂಜಿನುಗಳು ಹೊರಗಿಂದ ತರಿಸಲ್ಪಡುತಿವೆ.

ದಿಲ್ಲಿಯ ಜನರಲ್ ಪ್ರಿಂಟಿಂಗ್‌ವರ್ಕ್ಸ್‌ನವರು ಪ್ರಕಟಿಸಿದ "ಇಬ್ಬರು ನ್ಯಾಯ ಕೇಳಿದರು: ಗಾಂಧೀಜಿ-ಗುರೂಜೀ" ಎಂಬ ಆರ್. ಎಸ್. ಎಸ್. ಪುಸ್ತಿಕೆಯನ್ನು ಜಪ್ತು ಮಾಡಲಾಗಿದೆ.

ಭಾರತದ ಮುಖ್ಯ ಸೇನಾಪತಿ ಜನರಲ್ ಕಾರ್‍ಯಪ್ಪನವರಿಗೆ ಅಹಮದಾಬಾದ ಮಿಲಿಟರಿ ಮತ್ತು ರೈಫಲ್ ತರಬೇತಿ ಸಂಘದವರು ಪ್ರೀತಿಯ ಕುರುಹೆಂದು ಒಂದು ಬೆಳ್ಳಿ ಖಡ್ಗವನ್ನು ಅರ್ಪಿಸಿದರು.

ಮುಂಬಯಿ ಎಸ್. ಎಸ್. ಸಿ. ಪರೀಕ್ಷೆಯ ಫಲಿತಾಂಶ ಮೇ ೩೧ ಕ್ಕೆ ಜಾಹೀರಾಗುವದು. ಪ್ರಶ್ನೆಪತ್ರ ಒಡೆದುದೇ ಮೊದಲಾದ ಅಕಾರ್‍ಯಗಳ ವಿಚಾರಣೆಯೂ ಆಗುವದಂತೆ.

ಕಾಂಗ್ರೆಸ್ ಮತ್ತು ಕಾಂಗ್ರೆಸ್ ಸರಕಾರಗಳ ನೀತಿ ಮತ್ತು ತ್ರಿಮೂರ್ತಿಗಳ ವರದಿ ಮೊದಲಾದವುಗಳನ್ನು ಟೀಕಿಸಿ, ಕರ್ನಾಟಕದಿಂದ ಅ. ಭಾ. ಕಾಂಗ್ರೆಸ್ ಸದಸ್ಯರಾದ ಶ್ರೀ ಎ. ಎ. ಮಂಡಗಿಯವರು ರಾಜೀನಾಮೆ ಯಿತ್ತಿದ್ದಾರೆ.

ಬಟ್ಟೆ ನಿಯಂತ್ರಣ ಬೇಗನೆ ಹೋಗುವದಿಲ್ಲೆಂದು ಡಾ. ಶ್ಯಾಮಪ್ರಸಾದ ಮುಕರ್ಜಿಯವರು ಮುಂಬಯಿ ಅರಳೆ ಬಟ್ಟೆ ಸಂಘದವರಿತ್ತ ಸತ್ಕಾರ ಸಮಾರಂಭದಲ್ಲಿ ಸ್ಪಷ್ಟಗೊಳಿಸಿದರು.

ಗುಜರಾತ ಸಂಸ್ಥಾನಗಳು ಮತ್ತು ಕೊಲ್ಹಾಪುರ ಸಮೇತವಾಗಿ ಎಲ್ಲ ದಕ್ಷಿಣ ಸಂಸ್ಥಾನಗಳೂ ಮೇ ೧೫ ಕ್ಕೆ ಸಂಪೂರ್ಣವಾಗಿ ಮುಂಬಯಿ ಪ್ರಾಂತದಲ್ಲಿ ಸಮ್ಮಿಲೀಕರಣ ಹೊಂದುವವು. ಬಡೋದೆ ಮೇ ೧ ರಿಂದಲೇ ಲೀನವಾಗುವದು.

ಭಾರತವು ಕ್ಷಾರದ ಸಲಕರಣೆಗಳಲ್ಲಿ ಸ್ವಾವಲಂಬಿಯಾದರೆ ವರ್ಷಕ್ಕೆ ೧ ಕೋಟಿ ರೂಪಾಯಿ ಉಳಿತಾಯವಾಗುವದೆಂದು ಡಾ. ಶ್ಯಾಮಪ್ರಸಾದರು ಮುಂಬಯಿಯ ಕ್ಷಾರೋಪಕರಣಗಳ ಪ್ರಥಮ ಕಾರಖಾನೆಗೆ ಭೆಟ್ಟಿ ಕೊಟ್ಟಾಗ್ಗೆ ಹೇಳಿದರು.

ಹಿಂದುಸ್ತಾನದ ಮೊಟ್ಟಮೊದಲನೆ ನೌಕಾ ಸಂಸ್ಥೆ ಇನ್ನು ಕೆಲ ವಾರಗಳಲ್ಲಿ ರಜಿಸ್ಟರಾಗುವದೆಂದು ಸಿಂಧ್ಯಾ ಹಡಗು ಕಂಪನಿಯ ಜನರಲ್ ಮ್ಯಾನೇಜರ ಶ್ರೀ ಎಂ. ಎ. ಮಾಸ್ತರರು ಹೇಳಿದ್ದಾರೆ. ಇದಕ್ಕಾಗಿ ಈಗಾಗಲೆ ಎರಡು ಹಡಗುಗಳನ್ನು ಭಾರತ ಸರಕಾರ ಕೆನಡಾದಲ್ಲಿ ಕೊಂಡಿದೆ. ೫ ವರ್ಷದಲ್ಲಿ ೨೦ ಲಕ್ಷ ಟನ್ ಹಡಗು ಕಟ್ಟಬೇಕೆಂದು ಸರಕಾರದ ಯೋಜನೆಯಿದೆ.

ವೈದ್ಯಕೀಯ ಮತ್ತು ಒಕ್ಕಲತನದ ಉದ್ಯೋಗಗಳಲ್ಲಿ ವಿಶೇಷ ಫಲಕಾರಿಯಾಗಬಹುದಾದ ಒಂದು ಹೊಸ ರಾಸಾಯನಿಕ ದ್ರವ್ಯವನ್ನು ಪುಣೆಯ ರಸಾಯನ ಶಾಸ್ತ್ರಜ್ಞರಾದ ಪ್ರೊ. ಲಿಮಯೆಯವರು ಕಂಡುಹಿಡಿದಿದ್ದಾರೆ.

ಪೆನಿಸಿಲಿನ್, ಸಲ್ಫಾ ಗುಂಪಿನ ಔಷಧಗಳು ಮತ್ತು ಮಲೇರಿಯಾ ಔಷಧಗಳನ್ನು ತಯಾರಿಸುವ ೪ ಕೋಟಿ ರೂಪಾಯಿ ಬಂಡವಲದ ಯೋಜನೆಗೆ ಮುಂಬಯಿಯಲ್ಲಿ ಸೇರಿದ್ದ ಪೂರೈಕೆ ಮಂತ್ರಿಗಳ ಪರಿಷತ್ತು ಸಮ್ಮತಿಯಿತ್ತಿದೆ.

ಪಶ್ಚಿಮಬಂಗಾಲ-ಬಿಹಾರ-ಓಡಿಸಾ

"ನಾಗರಿಕತ್ವದ ಗುರುತು" ಎಂಬ ವಿಷಯದ ಮೇಲೆ ಕಲಕತ್ತೆಯ ಆಕಾಶವಾಣಿಯಲ್ಲಿ ಭಾಷಣಮಾಡುತ್ತ ಗವರ್ನರ್ ಕೈಲಾಸನಾಥ ಕಟಜೂ ಅವರು ಇಡಿ ಜಗತ್ತು ಒಂದೇ ರಾಷ್ಟ್ರವಾದರೇ ಜಗತ್ತು ಬದುಕೀತೆಂದು ಅಭಿಪ್ರಾಯಪಟ್ಟರು. ಕಾಯದೆಯ ಪರಿಪಾಲನೆ, ದೇಶಸೇವಾ ಬುದ್ಧಿ, ಪರರ ಹಕ್ಕು ಬಾಧ್ಯತೆಗಳ ಬಗ್ಗೆ ಗೌರವ ಮತ್ತು ನೈತಿಕ ಕರ್ತವ್ಯಪರತೆಯೆಂಬೀ ಗುಣಗಳು ನಾಗರಿಕತೆಯ ಹೆಗ್ಗುರುತೆಂದು ಅವರು ಹೇಳಿದರು.

ರಾಜಕೀಯ ಕೈದಿಗಳ ಬಿಡುಗಡೆ, ನಾಗರಿಕ ಸ್ವಾತಂತ್ರ್ಯ ಮೊದಲಾದ ತಮ್ಮ ಬೇಡಿಕೆಗಳು ಮಾನ್ಯವಾಗದಿದ್ದರೆ ನೇಪಾಳದಲ್ಲಿ ಅಹಿಂಸಾತ್ಮಕ ಚಳುವಳಿ ಹೂಡುವದಾಗಿ ನೇಪಾಳಿ ಕಾಂಗ್ರೆಸ್ ಕ್ರಿಯಾಸಮಿತಿ ನಿರ್ಧರಿಸಿದೆ.

ಮೋಟಾರ ಅಪಘಾತಕ್ಕೊಳಗಾಗಿ ಕಟಕದ ಆಸ್ಪತ್ರೆಯಲ್ಲಿರುವ ಸಮಾಜವಾದಿ ಧುರೀಣ ಶ್ರೀ ಜಯಪ್ರಕಾಶ ನಾರಾಯಣರ ಆರೋಗ್ಯ ಅಪೇಕ್ಷಿಸಿದಷ್ಟು ತೀವ್ರವಾಗಿ ಸುಧಾರಿಸುತ್ತಿಲ್ಲೆಂದು ತಿಳಿಯುತ್ತದೆ.

ಕಲಕತ್ತೆಯಲ್ಲಿ ಮಕ್ಕಳನ್ನು ಅಪಹರಿಸುವವಳೆಂಬ ಸಂಶಯದಿಂದ ಕ್ರುದ್ಧರಾದ ಜನರು ಒಬ್ಬ ಭಿಕ್ಷುಕಿಯನ್ನು ಹೊಡೆದುಕೊಂದರು. ಆ ಬಗ್ಗೆ ಕೆಲ ಬಂಧನಗಳಾಗಿವೆ.

ಕಲಕತ್ತೆಯ ಡಾಲಹೌಸಿ ಸ್ಮಾರಕಭವನವನ್ನು ಕೆಡವಿ ಅಲ್ಲಿ ಸ್ವಯಂಪ್ರೇರಿತ ಟೆಲಿಫೋನ ಕಚೇರಿಗಾಗಿ ಕಟ್ಟಡ ಕಟ್ಟಿಸಲಾಗುವದು.

ಯುಕ್ತಪ್ರಾಂತ---ಪೂ. ಪಂಜಾಬ

ಒತ್ತಾಯದ ಧಾನ್ಯ ವಸೂಲಿ ಯೋಜನೆಯನ್ನು ಪ್ರತಿಭಟಿಸಲು ಸಮಾಜ ವಾದಿಗಳ ನೇತೃತ್ವದಲ್ಲಿ ೧೦೦೦೦ ಹಳ್ಳಿಗರು ಲಖನೌದಲ್ಲಿ ಮೆರವಣಿಗೆ ತೆಗೆದರು. ಸಮಾಜವಾದಿ ನಾಯಕರಾದ ಡಾ. ರಾಮಮನೋಹರ ಲೋಹಿಯಾರು ಸರಕಾರದ ಯೋಜನೆಯನ್ನು ಟೀಕಿಸಿ ಒಂದು ಹೇಳಿಕೆ ಕೊಟ್ಟಿದ್ದಾರೆ.

ಹರಿದ್ವಾರದ ಋಷಿಕುಲ ಬ್ರಹ್ಮಚಾರಿ ಆಶ್ರಮದಲ್ಲಿ ಹರಿಜನರಿಗೆ ಪ್ರವೇಶವಿಲ್ಲದ್ದರಿಂದ ಅದರ ವಾರ್ಷಿಕೋತ್ಸವದ ಆಮಂತ್ರಣವನ್ನು ಯುಕ್ತಪ್ರಾಂತ ಮಂತ್ರಿ ಗಿರಿಧರಲಾಲರು ನಿರಾಕರಿಸಿದರು.

ಮಹಾತ್ಮಾಗಾಂಧಿ ಕೊಲೆ ಖಟ್ಲೆಯ ಅಪೀಲಿನ ವಿಚಾರಣೆ ಮೇ ೨ ಕ್ಕೆ ಪೂ. ಪಂಜಾಬ ಹೈಕೋರ್ಟಿನಲ್ಲಿ ಪ್ರಾರಂಭವಾಗುವದು.

ಫಿರೋಜಪುರ ಜೇಲಿನಲ್ಲಿ ಉಪವಾಸ ಹೂಡಿದ ೩೦೦ ಆರ್. ಎಸ್. ಎಸ್. ಕೈದಿಗಳಲ್ಲಿ ೮೦ ಜನರನ್ನು ಬಿಡುಗಡೆ ಮಾಡಲಾಗಿದೆ. ಹಿಸ್ಸಾರದಲ್ಲಿ ಉಪವಾಸ ಹೂಡಿದವರ ಸಂಖ್ಯೆ ೨೯೦ ಕ್ಕೆ ಮುಟ್ಟಿದೆ.

ಕರದ ಮುದ್ರೆಯಿಲ್ಲದ ಬಟ್ಟೆಗಳನ್ನು ಮಾರುತಿದ್ದ ೮೦ ಜವಳಿ ವರ್ತಕರನ್ನು ಬಂಧಿಸಿ ೧೦೦೦೦ ರೂಪಾಯಿ ಗಿರಣಿ ಬಟ್ಟೆಯನ್ನು ಬನಾರಸ ಪೋಲೀಸರು ಹಿಡಿದಿದ್ದಾರೆ.

ಮುಂಬಯಿ ಶಾಸನ ಸಭೆಯ ನಾಲ್ಕನೆ ಪಕ್ಷದ ಧುರೀಣರಾದ ಶ್ರೀ ಎ. ಎ. ಖಾನರು ಒಂದು ಹೇಳಿಕೆಕೊಟ್ಟು ಸರ್ವರಿಗೂ ಉದ್ಯೋಗ, ನಿರಕ್ಷರತಾ ನಿವಾರಣೆ ಮೊದಲಾದ ಆರ್ಥಿಕ ಕಾರ್ಯಕ್ರಮಗಳ ಆಧಾರದ ಮೇಲೆ ಎಲ್ಲ ಪ್ರಾಂತಿಕ ಮುಸ್ಲಿಂ ಶಾಸನ ಸಭಾಸದಸ್ಯರೂ ಜಾತ್ಯತೀತ ಪಕ್ಷಗಳನ್ನು ಅಲ್ಲಲ್ಲಿ ಸಂಘಟಿಸಬೇಕೆಂದು ಬಿನ್ನವಿಸಿಕೊಂಡಿದ್ದಾರೆ.

ಔದ್ಯೋಗಿಕ ನ್ಯಾಯಾಲಯದವರು ಕೊಟ್ಟ ಒಂದು ತೀರ್ಪಿನ ಮೇರೆಗೆ ಮುಂಬಯಿಯ ಗಿರಣಿಗಳು ಕಳೆದ ವರ್ಷದ ಬಗ್ಗೆ ಎಲ್ಲ ಕೂಲಿಕಾರರಿಗೆ ೪॥ ತಿಂಗಳ ಪಗಾರದಷ್ಟು ಬೋನಸ್ ಕೊಡಲಾಗುವದು. ಇದರಿಂದ ೨ ಲಕ್ಷ ಮೇಲ್ಪಟ್ಟ ಕೂಲಿಕಾರರಿಗೆ ೨॥ ಕೋಟಿ ರೂಪಾಯಿ ಲಾಭವಾಗುವದು.

ಎಸ್. ಎಸ್. ಸಿ. ಪ್ರಶ್ನ ಪತ್ರಿಕೆಗಳ ಗೌಪ್ಯಸ್ಫೋಟವೇ ಮೊದಲಾದವುಗಳ ಅಕೃತ್ಯಗಳಿಂದ ನೂರಾರು ವಿದ್ಯಾರ್ಥಿಗಳಿಗೆ ತೊಂದರೆಯಾದುದರಿಂದ ಶಿಕ್ಷಣ ಮಂತ್ರಿ ಶ್ರೀ ಬಿ. ಜಿ. ಖೇರರು ರಾಜೀನಾಮೆ ಕೊಡಬೇಕೆಂದು ಸಮಾಜವಾದಿ ಪಕ್ಷದ ಸದಸ್ಯರು ಮುಂಬಯಿ ಕಾರ್ಪೋರೇಶನ ಸಭೆಯಲ್ಲಿ ಹೇಳಿದರು.

ಹೊಸದಿಲ್ಲಿ

ಹೊಸದಾಗಿ ಆದ ಒಡಂಬಡಿಕೆಯನ್ವಯ ರಶಿಯಾದಿಂದ ೨ ಲಕ್ಷ ಟನ್ ಗೋದಿ ಮತ್ತು ೫೦ ಸಾವಿರ ಟನ್ ಗೋದಿಹಿಟ್ಟು ಜುಲೈ ಕೊನೆಯೊಳಗಾಗಿ ಹಿಂದುಸ್ತಾನಕ್ಕೆ ಬರಲಿರುವದೆಂದು ತಿಳಿಯುತ್ತದೆ. ಇದಕ್ಕೆ ಬದಲಾಗಿ ಹಿಂದುಸ್ತಾನವು ರಶಿಯಾಕ್ಕೆ ೨೦ ಸಾವಿರ ಟನ್ ಕಚ್ಚಾ ನಾರು ಮತ್ತು ೬೦೦೦ ಟನ್ ಚಹಾ ಕೊಡುವದು.

ಹಿಂದುಸ್ತಾನ ಸರಕಾರವು ಚೀನದ ಕಮ್ಯುನಿಸ್ಟ ಸರಕಾರಕ್ಕೆ ಮನ್ನಣೆ ಕೊಟ್ಟಿರುವದೆಂದು ಹಬ್ಬಿದ ಸುದ್ದಿಯು ನಿರಾಧಾರವಾಗಿದೆಯೆಂದು ಹಿಂದುಸ್ತಾನ ಸರಕಾರ ಪ್ರಕಟಣೆ ಹೊರಡಿಸಿದೆ.

ಹಿಂದುಸ್ತಾನದಿಂದ ರಶಿಯಕ್ಕೆ ಕಳಿಸಲಾದ ೨೦,೦೦೦ ಟನ್ ಕಚ್ಚಾನಾರು ಮತ್ತು ೬,೦೦೦ ಟನ್ ಚಹಾಕ್ಕೆ ಪ್ರತಿಯಾಗಿ ಇದೇ ಜುಲೈ ಕೊನೆಯೊಳಗಾಗಿ ೨,೦೦,೦೦೦ ಟನ್ ಗೋದಿ ಮತ್ತು ೨೦೦೦೦ ಟನ್ ಗೋದಿನ ಹೋಳವನ್ನು ರಶಿಯಾದಿಂದ ಕಳಿಸಲೊಪ್ಪುವ ಒಂದು ಕರಾರ ಒಪ್ಪಂದವಾಗಿದೆ.

ಭಾರತ-ಇಜಿಪ್ತ ವ್ಯಾಪಾರ ಒಪ್ಪಂದದ ಸಂಧಾನಕ್ಕಾಗಿ ಒಂದು ಇಜಿಪ್ಸಿಯನ್ ಶಿಷ್ಟಮಂಡಲ ದಿಲ್ಲಿಗೆ ಬಂದಿದೆ.

ಈ ಕೆಲ ತಿಂಗಳುಗಳಲ್ಲಿ ರೇಲ್ವೆ ಸಾರಿಗೆಯಲ್ಲಾದ ಸುಧಾರಣೆ ಮಾರ್ಚ ೩೦ ಕ್ಕೆ ಅಂತ್ಯವಾಗುವ ತಿಂಗಳಲ್ಲೂ ಯಥಾವತ್ತಾಗಿ ಸಾಗಿದ್ದು ಬ್ರಾಡ್‌ಗೇಜ ರೇಲ್ವೆಯ ಮೇಲೆ ದಿನವೂ ೧೧,೫೨೮ ವ್ಯಾಗನ್ ಸರಕುಗಳು ಸಾಗಿಸಲ್ಪಟ್ಟವೆಂದು ತಿಳಿದುಬಂದಿದೆ.

ನಾಲ್ಕು ವರ್ಷಗಳಲ್ಲಿ ಪೂರ್ಣವಾಗಿ ವರ್ಷಕ್ಕೆ ಏಳೆಂಟು ಕೋಟಿ ರೂಪಾಯಿಯ ಉತ್ಪಾದನೆ ಮಾಡಬಲ್ಲ ಯಂತ್ರೋಪಕರಣಗಳ ಕಾರಖಾನೆಯೊಂದನ್ನು "ಬೆರ್ಲೆ" ಎಂಬ ಸ್ವಿಸ್ ಕಂಪನಿಯೊಂದು ೧೨ ಕೋಟಿ ರೂ. ಬಂಡವಲ ಹಾಕಿ ಹಿಂದುಸ್ತಾನದಲ್ಲಿ ಸ್ಥಾಪಿಸಲು ಭಾರತ ಸರಕಾರದೊಡನೆ ಒಡಂಬಡಿಕೆ ಮಾಡಿಕೊಂಡಿದೆ. ಇದರಲ್ಲಿ ಹಿಂದೀಯರ ತರಬೇತಿ, ಸರಕಾರಿ ಮೇಲ್ವಿಚಾರಣೆ ಮೊದಲಾದ ಬಗ್ಗೆ ಕರಾರುಗಳಿವೆ.

ಆರ್. ಎಸ್. ಎಸ್. ಬಗ್ಗೆ ಅದರ ಮುಖ್ಯ ಸಂಚಾಲಕ ಶ್ರೀ ಗೋಳವಲಕರರ ಒಪ್ಪಿಗೆ ಪಡೆದು ಕಳಿಸಲ್ಪಟ್ಟ ಘಟನೆಯನ್ನು ಗೃಹಶಾಖೆಯವರು ಒಪ್ಪಿದ್ದು ಆ ಸಂಸ್ಥೆಯ ಮೇಲಿನ ನಿರ್ಬಂಧ ಹೋಗಬಹುದೆಂದು ನಂಬಲಾಗಿದೆ.

೧೯೫೧ ರೊಳಗಾಗಿ ಭಾರತದ ಅಹಾರ ಪರಾವಲಂಬನೆಯನ್ನು ದೂರಗೊಳಿಸಲು ಒಂದು ಯೋಜನೆಯನ್ನು ಕೇಂದ್ರ ಸರಕಾರದವರು ಸಿದ್ಧಗೊಳಿಸಿದ್ದು ಪ್ರಾಂತಿಕ ಸರಕಾರಗಳಿಗೆ ಕಳಿಸಲಾಗಿದೆ. ಸುಧಾರಿತ ಒಕ್ಕಲುತನವನ್ನು ಜನಪ್ರಿಯ ಮಾಡುವದು, ಒಕ್ಕಲುತನದ ಉಪಕರಣಗಳಿಗಾಗಿ ಉಕ್ಕು ಮೊದಲಾದವುಗಳನ್ನು ಪ್ರಶಸ್ತ ಕೊಟ್ಟು ಒದಗಿಸುವದು, ನಗರಗಳಲ್ಲಿ ಕಡ್ಡಾಯವಾಗಿ ಮಲದ ಗೊಬ್ಬರವನ್ನು ತಯಾರಿಸುವದೇ ಮೊದಲಾದ ವಿಚಾರಗಳು ಅದರಲ್ಲಿ ಅಡಕವಾಗಿವೆ.

ಈಗಿರುವ ಬಟಾಟೆಯಂತೆ ಕಂಡರೂ ಹೆಚ್ಚು ಕಾಳಿಕೆ ಬರುವ ೨೦೦ ವಿಧದ ಬೇರೆ ಜಾತಿಯ ಬಟಾಟೆಗಳನ್ನು ಬೆಳೆಸಬಹುದೆಂದು ವ್ಯವಸಾಯಶಾಖೆಯ ಸಂಶೋಧನೆಗಳಿಂದ ವ್ಯಕ್ತವಾಗಿದೆ.

ಮದರಾಸ

೫೦೦ ಕ್ಕಿಂತ ಹೆಚ್ಚು ಜನವಸತಿಯುಳ್ಳ ಎಲ್ಲ ಗ್ರಾಮಗಳಿಗೂ ಪಂಚಾಯತಿಗಳನ್ನು ಜಾತ್ಯತೀತ ಪ್ರೌಢ ಮತದಾನ ಪದ್ಧತಿಯಿಂದ ಆರಿಸುವದಲ್ಲದೆ ಅಂಥ ಪಂಚಾಯತಿಗಳ ಅಧ್ಯಕ್ಷರನ್ನು ಪ್ರತ್ಯಕ್ಷವಾಗಿ ಮತದಾರರಿಂದಲೇ ಆರಿಸುವದಕ್ಕೆ ಅವಕಾಶ ಕೊಡುವ ಶಾಸನವೊಂದನ್ನು ಮದ್ರಾಸ ಸರಕಾರ ಒಪ್ಪಿದೆ. ಇದರಿಂದ ಅಧ್ಯಕ್ಷರೆ ಆಯ್ಕೆಯ ಬಗ್ಗೆ ಸದಸ್ಯರಲ್ಲಾಗುವ ಸ್ಪರ್ಧೆಗಳು ಕೊನೆಗೊಂಡು ಆಡಳಿತ ಸುಗಮವಾಗುವದೆಂದಾಶಿಸಲಾಗಿದೆ.

ಪಡಭೂಮಿಯ ವ್ಯವಸಾಯ, ಸುಧಾರಿಸಿದ ಬೀಜ ಮತ್ತು ಗೊಬ್ಬರ ಮೊದಲಾದವುಗಳ ಮೂಲಕ ೧೯೫೦-೫೧ ರೊಳಗಾಗಿ ಪ್ರಾಂತದಲ್ಲಿ ೮,೬೦,೦೦೦ ಟನ್ ಅಹಾರಧಾನ್ಯ ಹೆಚ್ಚಿಗೆ ಬೆಳೆಯುವ ಧೈರ್ಯವನ್ನು ಮದ್ರಾಸ ಸರಕಾರ ಕೇಂದ್ರಕ್ಕೆ ತಿಳಿಸಿದೆಯೆಂದು ಮದ್ರಾಸ ಅಹಾರ ಶಾಖೆಯ ನಿರ್ದೇಶಕರು ಸಾರಿದ್ದಾರೆ.

ವಿಶೇಷ ಸವಲತ್ತುಗಳನ್ನು ಬೇಡಿ ಮಚ್ಛಲೀಪಟ್ಟಣ ಸೆರೆಮನೆಯಲ್ಲಿರುವ ಕಮ್ಯುನಿಸ್ಟ ಕೈದಿಗಳು ಉಪವಾಸ ಹೂಡಿದ್ದಾರೆ. ಇಂಥ ಉಪವಾಸ ಬಂಗಾಲದಲ್ಲಿಯೂ ಕಮ್ಯುನಿಸ್ಟರಿಂದ ಪ್ರಾರಂಭಿಸಲ್ಪಟ್ಟಿದೆ.

ಸಂಸ್ಥಾನಗಳು

ನಿಜಾಮರಿಂದ ಸಂಸ್ಥಾನದ [illegible] ಹೈದರಾಬಾದ ಸರಕಾರ [illegible] ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದೆ.

ವರಂಗಲ್ ಮತ್ತು [illegible] ಗಳಲ್ಲಿ ಕಮ್ಯುನಿಸ್ಟ್ [illegible] ಮುಳಿಗಾಲದಲ್ಲಿ [illegible] ಹೈದರಾಬಾದಿಗೆ ಮುಕ್ತಿ [illegible] ದಳಗಳನ್ನು ಕಳಿಸಲಾಗಿದೆಯೆಂದು [illegible] ಗವರ್ನರ್ ಜನರಲ್ [illegible] ಹೇಳಿದರು.

ಹೈದರಾಬಾದ ಸಂಸ್ಥಾನವನ್ನು [illegible] ಸ್ಪಷ್ಟವಾಗಿ ವಿಭಜಿಸಿ ಲೀನಗೊಳಿಸಬೇಕೆಂದು ಹೈದರಾಬಾದ ಕಾಂಗ್ರೆಸ್ ಅಧ್ಯಕ್ಷ ಸ್ವಾಮಿ ರಮಾನಂದ ತೀರ್ಥರು ಅಭಿಪ್ರಾಯಪಟ್ಟಿದ್ದಾರೆ.

ತಿರ್ವಾಂಕೂರು ಮತ್ತು ಕೊಚಿನ ಸಂಸ್ಥಾನ ಒಕ್ಕೂಟದ ರಾಜಪ್ರಮುಖರಾಗಲು ನಿರಾಕರಿಸಿಲ್ಲೆಂದು ತಿರ್ವಾಂಕೂರಿನ ಮುಖ್ಯ ಮಂತ್ರಿ ಟಿ. ಕೆ. ನಾರಾಯಣ ಪಿಳ್ಳೆಯವರು ಹೇಳಿದ್ದಾರೆ.

ಭರತಪುರ ಸಂಸ್ಥಾನದಲ್ಲಿ ಉಪ್ಪಿನ ಕರ ಹೇರಿದ್ದರಿಂದ ೮ ವರ್ಷಗಳ ಹಿಂದೆ ನಿಂತು ಹೋಗಿದ್ದ ಉಪ್ಪಿನ ಗಣಿ ಬೇಗನೆ ಪ್ರಾರಂಭವಾಗುವದು. ಅಲ್ಲಿ ವರ್ಷಕ್ಕೆ ೪೦ ಲಕ್ಷ ಟನ್ ಉಪ್ಪು ತಯಾರಾಗುತ್ತದೆ.

ಬರೋಡೆಯ ಹೊಳೆಮುಖದ ಮುಖ್ಯಪಾರ್‍ಯ [illegible] ಮುಹಂಮದ ವಿಸಸ್ವಾಮಿಗಳಿಗೆ [illegible] ಶಾಮೋಲ ಹಳ್ಳಿಯ ಶ್ರೀ ಪಟೇಲ [illegible] ವರು ಮಹಾಕಾಳಮ್ಮನ ಗುಡಿಯ [illegible] ದಾಸೋಗ ಕಟ್ಟಿಸುವ ಸಲುವಾಗಿ ಎರಡು ಸಾವಿರ ರೂ. ಬೆಲೆಬಾಳುವ ಮೂರು ಎಕರೆ ಜಮೀನನ್ನು ಅಕ್ಕಪೂರ್ವಕವಾಗಿ ದಾನಮಾಡಿರುತ್ತಾರೆ.

ಕೂಳನೂರಲ್ಲಿಯ ಹರಿಜನರು ತಮ್ಮ ದಾವಿಯಲ್ಲಿ ಮಂಡು ತಗೆಯಲು ಹೋದಾಗ ಒಂದು ಭರಪೂರ ಬಂದೂಕು ಸಿಕ್ಕಿರುತ್ತದೆ. ಅದೇ ರೀತಿ ಜುಮ್ಮಾಮಸೂತಿ ಎದುರಿಗಿನ ಮನೆಗಳಲ್ಲಿ ಹುಗಿದಿಟ್ಟ ಒಂಬತ್ತು ಮಿಲಿಟರಿ ಕಪ್ಪಿನ ಟೊಪ್ಪಿಗೆಗಳು ಸಿಕ್ಕಿವೆ. ಪೋಲೀಸರು ಅವನ್ನೆಲ್ಲ ಒಯ್ದು ಪಂಚನಾಮೆಮಾಡಿರುವರು.

ಹಾಸನದಲ್ಲಿ ಅಖಿಲ ಮೈಸೂರು ಬ್ರಾಹ್ಮಣ ಮಹಾಸಭೆಯನ್ನು ಶ್ರೀ ಸೋಸಲೆ ಮಠದ ಸ್ವಾಮಿಗಳವರು ೨೫ ನೇ ತಾರೀಕಿನ ದಿನ ಪ್ರಾರಂಭಿಸಿದರು. ಶ್ರೀ ಜಕೂಡೆ ವೆಂಕಟ ಶಾಸ್ತ್ರಿಗಳು ಅದರ ಅಧ್ಯಕ್ಷತೆ ವಹಿಸಿದ್ದರು. ವರ್ಣಾಶ್ರಮ ಧರ್ಮಾನುಸಾರವಾಗಿ ಭಾರತೀಯರೆಲ್ಲ ನಡೆಯಬೇಕೆಂದು ಸ್ವಾಮಿಗಳೂ ಶಾಸ್ತ್ರಿಗಳೂ ಉಪದೇಶಿಸಿದರು.

ಉತ್ತಮವಾದ ಟೀಕೆಯೊಂದಿಗೆ ತೊರವೆ ರಾಮಾಯಣವನ್ನು ಸಿದ್ಧಮಾಡಿ ಪ್ರಕಟಿಸಬೇಕೆಂದು ಬೆಂಗಳೂರಿನ ಪ್ರಸಿದ್ಧ ಸಾಹಿತಿಗಳಾದ ಶ್ರೀ ಶಾಶಾಚಾರ್‍ಯ ಶರ್ಮರವರು ನಿರ್ಧರಿಸಿದ್ದು ಅದಕ್ಕಾಗಿ ಕನ್ನಡನಾಡಿನ ನಾನಾ ಭಾಗಗಳಲ್ಲಿನ ಜನರು ತಮ್ಮಲ್ಲಿದ್ದ ತಾಡವಾಲೆ, ಹಳೆಯ ಗ್ರಂಥ, ತೊರವೆ ರಾಮಾಯಣದ ಮುದ್ರಿತ ಹಳೆಯ ಪುಸ್ತಕ ಮೊದಲಾದವನ್ನು ಕಳುಹಿಸಿಕೊಡಬೇಕೆಂದು ಬಿನ್ನವಿಸಿಕೊಂಡಿದ್ದಾರೆ. ಪರೀಕ್ಷೆಯ ಕೆಲಸ ಮುಗಿದ ಕೂಡಲೆ ಗ್ರಂಥಗಳನ್ನು ತಿರುಗಿ ಕೊಡುವದಾಗಿ ಆಶ್ವಾಸಿಸಿದ್ದಾರೆ.

ಬೆಳಗಾವಿಯ ಸೀದಾ ಅಂಗಡಿಯಲ್ಲಿಯ ೩೦ ಸಾವಿರ ರೂಪಾಯಿಗಳನ್ನು ಮಂಡಳ ಯೋಗದಡಿ ೧೨ ವರುಷಗಳಿಂದ ಕಾಣೆಯಾಗಿದ್ದ ಅಂಗಡಿಯ ಖಜಾನದಾರ [illegible] ಅವರನ್ನು ಖಟ್ಲೆಯಲ್ಲಿ ಬಂಧಿಸಲಾಗಿದೆಯೆಂದು ತಿಳಿಯುತ್ತದೆ.

ನ್ಯಾಯಾಂಗವನ್ನು ಕಾರ್‍ಯಾಂಗದಿಂದ ಬೇಗನೆ ಪ್ರತ್ಯೇಕಿಸಲಾಗುವದೆಂದು ಮದ್ರಾಸ್ ಶಾಸನ ಸಭೆಯಲ್ಲಿ ಮಂತ್ರಿ ಶ್ರೀ ಟಿ. ಗೋಪಾಲ ರೆಡ್ಡಿಯವರು ಸಾರಿದರು.

ಮದ್ರಾಸ್ ಮಂತ್ರಿಮಂಡಲದಲ್ಲಿ ಹೊಸದಾಗಿ ಸೇರಿಸಿಕೊಳ್ಳಲ್ಪಟ್ಟ ೧೧ ನೆ ಮಂತ್ರಿಗಳಾದ ಶ್ರೀ ಪರಮಶಿವ [illegible] ರವರಿಗೆ ಉದ್ಯಮಗಳ ಖಾತೆ ಕೊಡಲಾಗಿದೆ.

ಚಲಚ್ಚಿತ್ರ ಪ್ರಪಂಚದಲ್ಲಿ ಆಗುತಿರುವ ಭ್ರಷ್ಟತೆಯನ್ನು ಅಭ್ಯಾಸಮಾಡಿ ಸಲಹೆ ಕೊಡಲು ದೈಹ್ಯಾ [illegible] ಒಂದು ಕೇಂದ್ರ ಚಲಚಿತ್ರ ಕೈಗಾರಿಕೆ ಸಮಿತಿಯನ್ನು ಸ್ಥಾಪಿಸುವ ವಿಚಾರ ಸರಕಾರಕ್ಕಿದೆಯೆಂದು ಭಾರತದ ಸುದ್ದಿ ಮತ್ತು ಆಕಾಶವಾಣಿ ಮಂತ್ರಿ ಶ್ರೀ ಆರ. ಆರ. ದಿವಾಕರರು ಮದ್ರಾಸಿನಲ್ಲಿ ಹೇಳಿದರು.

ಅಹಿಂಸೆಯೊಂದಿಗೆ ಸತ್ಯವೂ ಕೂಡಿದೆ

ಕಳೆದ ಜನವರಿಯಲ್ಲಿ ಸೇವಾಗ್ರಾಮದಲ್ಲಿ ನಡೆದ ಶಾಂತಿವಾದಿಗಳ ಸಮ್ಮೇಳನದ ೩ ನೆಯ ಠರಾವು "ಭಾರತಕ್ಕೆ ಸ್ವಾತಂತ್ರ್ಯವನ್ನು ದೊರಕಿಸುವದರಲ್ಲಿ ಅಹಿಂಸೆ ಪಾಲಿಸಿದ ಜಯಶಾಲಿಯಾದುದನ್ನು ನಮ್ಮ ಸರಕಾರಗಳೂ ಜನಗಳೂ ಪದೇ ಪದೇ ನೆನಪು ಮಾಡಿಕೊಂಡು ಇಂದು ಕಠಿನವಾದ ಸಮಸ್ಯೆಗಳನ್ನು ಸನ್ನಿವೇಶಗಳನ್ನು ಬಗೆಹರಿಸಲು ಅವಶ್ಯವಾಗಿರುವ ಅಹಿಂಸಾತ್ಮಕ ಕರ್ಮದ ಬಗೆಗಳನ್ನು ನಿಷ್ಠೆಯಿಂದ ಹುಡುಕಬೇಕು" ಎಂದು ಒತ್ತಾಯಪಡಿಸುತ್ತದೆ.

ಮೇಲಿನ ಠರಾವಿನ ಕರ್ತೃಗಳಂತೆಯೇ ಸ್ವಾತಂತ್ರ್ಯವನ್ನು ಗೆದ್ದು ಕೊಟ್ಟದ್ದು ಅಹಿಂಸೆಯೇ ಎಂದು ಹೇಳುವ ಅನೇಕರ–ಅವರಲ್ಲಿ ದೊಡ್ಡ ದೊಡ್ಡ ಮನುಷ್ಯರೆನಿಸಿಕೊಂಬವರನ್ನೊಳಗೊಂಡು ಅಸಂಖ್ಯ ಜನರ–ಲೇಖನಗಳನ್ನೂ ಭಾಷಣಗಳನ್ನೂ ಓದಿದ್ದೇನೆ ಮತ್ತು ಕೇಳಿದ್ದೇನೆ.

ಇದು ಪಾಕ್ಷಿಕ ಸತ್ಯವೆಂದು ನನ್ನ ವಿನಯಭರ ಅಭಿಪ್ರಾಯ. ನಿಜವಾದ ಸಂಗತಿಯನ್ನು ಹೇಳುವದಾದರೆ, ಮಹಾತ್ಮಾ ಗಾಂಧಿಯವರಿಗೆ ಸ್ವತಃ ಭಾರತ ಅಥವಾ ಕಾಂಗ್ರೆಸ್ಸು ಯಥಾರ್ಥವಾಗಿ ಅಹಿಂಸಾತ್ಮಕವಾಗಿ ನಡೆದುಕೊಳ್ಳಲು ಶಕ್ತವಾಗಿಲ್ಲವೆನಿಸಿತ್ತು. ನನ್ನನ್ನು ಕೇಳಿದರೆ ಸತ್ಯವೇ ಇನ್ನೊಂದಾದ, ಇದಕ್ಕೂ ಪ್ರಧಾನವೆನಿಸುವ ಶಕ್ತಿಭಾಗ ಎಂದು ಹೇಳಬಲ್ಲೆ. ಅದು ಹೇಗೆಂಬುದನ್ನು ತೋರಿಸುತ್ತೇನೆ.

ನಾನು ೧೯೦೭ ರಲ್ಲಿ, ಅಂದರೆ, ಸುರತ ಕಾಂಗ್ರೆಸ್ ಸಮ್ಮೇಲನಕ್ಕೆ ಹೋದ ಕಾಲದಲ್ಲಿ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿದೆ ಮತ್ತು ೬ ವರ್ಷದ ಕಾರಾವಾಸದಿಂದ ಲೋಕಮಾನ್ಯರು (೧೯೧೪ ರಲ್ಲಿ) ಮುಕ್ತರಾದಂದಿನಿಂದ ಅದರಲ್ಲಿ ಚಟುವಟಿಕೆಯಿಂದ ಭಾಗವಹಿಸಲಾರಂಭಿಸಿದೆ. ಲೋಕಮಾನ್ಯ ಮತ್ತು ಮಹಾತ್ಮಾಜಿಯವರ ತಂತ್ರಗಳಲ್ಲಿಯ ಭೇದವನ್ನು ನಾನು ಕಾಣಬಲ್ಲವನಾದೆ. ಈ ಭೇದದ ವಿವರಗಳಲ್ಲಿ ತಲೆ ಹಾಕುವುದು ಅನವಶ್ಯಕವಾದರೂ–೧೯೨೧ ರಲ್ಲಿ ಕಾಂಗ್ರೆಸು ಗಾಂಧಿಯವರ ನೇತೃತ್ವವನ್ನು ಸ್ವೀಕರಿಸಿದಂದಿನಿಂದ ಅದು ವಸ್ತುಸ್ಥಿತಿವಿನ್ಯಾಸದಲ್ಲಿ ಅಥವಾ ಉದ್ದೇಶನಿರೂಪಣದಲ್ಲಿ ಎಂದೆಂದೂ ಸತ್ಯಪಥವನ್ನು ಬಿಟ್ಟು ಹೋಗಿಲ್ಲ ಎಂಬಿಷ್ಟನ್ನು ನಿಃಸಂದೇಹವಾಗಿ ಹೇಳಿಬಿಡಬಹುದು.

ಕಾಂಗ್ರೆಸ್ಸು ಸರಕಾರದೊಡನೆ ವ್ಯವಹರಿಸುವಾಗ ಬಹಳ ಎಚ್ಚರಿಕೆಯಿಂದ ಈ ಸತ್ಯಸಂಧತೆಯನ್ನು ಅನುಸರಿಸುತ್ತಿತ್ತು.

ಗಾಂಧಿ–ಇರ್ವಿನ್ ಒಪ್ಪಂದದಲ್ಲಿ ಕೊನೆಗೊಂಡ ೧೯೩೦ ರ ಸತ್ಯಾಗ್ರಹದ ಜಯಪ್ರದವಾದ ಮುನ್ನಡೆಗೆ ಸತ್ಯವೇ ಕಾರಣವಾಯಿತು.

೧೯೨೨ ರಲ್ಲಿ ಬಾರ್ಡೋಲಿಯ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳಲು ಮತ್ತೆ ಸತ್ಯವೇ ಕಾರಣವೆನಿಸಿತು. ೧೯೨೪ ರಲ್ಲಿ ನಡೆದ ಬೆಳಗಾವಿ ಕಾಂಗ್ರೆಸ್ ಸಮ್ಮೇಲನದ ಸಮಯದಲ್ಲಿ ಅಸಹಕಾರ ಕಾರ್ಯಕ್ರಮವನ್ನು ತ್ಯಜಿಸಲು ಸತ್ಯವೇ ಹೇತುವಾಯಿತು. 'ಗಾಂಧಿ–ಇರ್ವಿನ್ ಒಪ್ಪಂದದ ಬಳಿಕ ೧೯೩೨ ರಲ್ಲಿ ಪ್ರಾರಂಭವಾದ ಚಳವಳವನ್ನು ೧೯೩೪ ರಲ್ಲಿ ನಿಲ್ಲಿಸುವಂತೆ ಮಾರ್ಗದರ್ಶನ ಮಾಡಿದ್ದಾದರೂ ಸತ್ಯವೆ.

೧೯೩೯-೪೦ರಲ್ಲಿ ಪ್ರಾಂತೀಯ ಸರಕಾರಗಳಲ್ಲಿ ಅಧಿಕಾರತ್ಯಾಗ ಮಾಡಿದ್ದು ಸತ್ಯನಿರ್ಭರವಾಗಿತ್ತು.

ಜಗತ್ತಿನಲ್ಲೆಲ್ಲ ವ್ಯವಹಾರದಲ್ಲಿರುವ ರಾಜಕಾರಣದ ಪ್ರಕಾರ ಮರ್ಯಾದೆ ಮುಚ್ಚಿಕೊಳ್ಳುವ ಇಲ್ಲವೆ ಕಣ್ಣಿಗೆ ಮಣ್ಣೆರಚುವ ವಿಚಾರಗಳಂತೆ ಸಾಗಬಹುದಾಗಿದ್ದ ರಾಜನೈತಿಕ ಪ್ರಕರಣಗಳಷ್ಟನ್ನು ಮಾತ್ರ ನಾನು ಮೇಲೆ ಕೊಟ್ಟಿದ್ದೇನೆ.

ತಾತ್ವಿಕವಾಗಿ ನೋಡಿದರೆ, ಸತ್ಯವು ನಿಃಸಂದೇಹವಾಗಿ ಅಹಿಂಸೆಯಲ್ಲಿ ಸೇರಿಕೊಂಡಿದೆ. ಆದರೆ ಅದನ್ನು ವಿಶೇಷತಃ ಒತ್ತಿ ಹೇಳಬೇಕಾದ ಅವಶ್ಯಕತೆಯಿದೆ. ಏಕೆಂದರೆ ಒಂದು ಔಪಾಧಿಕ ಪ್ರಮೇಯವಾಕ್ಯವನ್ನು ಮಾಡಬೇಕಾದರೆ–ಅದು ಶಕ್ತಿಯ ಬಹು ದೊಡ್ಡದಾದ ಮತ್ತು ಹೆಚ್ಚು ಮುಖ್ಯವಾದ ಭಾಗವಾಗಿರುತ್ತದೆ ಮತ್ತು ಹಾಗಲ್ಲದೆ, ಅದನ್ನು ಎತ್ತಿ ಹೇಳದಿದ್ದರೆ, ಭಾರತೀಯ ಚಳವಳಗಳಲ್ಲಿ ಯಾವಾಗಲೂ ಅದಂತೆ ಅದು ಅದೃಶ್ಯವಾಗಿ ಹೋಗಬಹುದಾಗಿದೆ. ಸತ್ಯವು ಅಹಿಂಸೆಯ ಮಾಹಾತ್ಮ್ಯವೆಂಬುದನ್ನು ಅರಿತುಕೊಳ್ಳದ ಕಾರಣ ಪ್ರತಿಯೊಂದು ಕಾಂಗ್ರೆಸ್ ಆಂದೋಲನದಲ್ಲೂ ಪ್ರತ್ಯೇಕ ಚಳವಳದ ವಿಚಾರ ಮಾಡಬೇಕಾಯಿತು. ಇದು ಅಹಿಂಸಾತತ್ವವನ್ನೇ ಕೆಡಿಸಿ ಬಿಟ್ಟಿತು.

ಇದರ ಫಲವಾಗಿ ಈವೀಗ ಸಂಪಾದಿಸಿದ ಸ್ವಾತಂತ್ರ್ಯವು ಮಹಾತ್ಮರು ಪ್ರಾರಂಭಿಸಿದ ಚಳವಳದ ಧ್ಯೇಯರೂಪದ್ದಾಗಿಲ್ಲ. ನನ್ನಂಥ ಸಾಮಾನ್ಯನಿಗು ಕೂಡ ೧೯೨೨ ರಲ್ಲಿ ಬಾರ್ಡೋಲಿಯ ಸತ್ಯಾಗ್ರಹವನ್ನೂ ೧೯೨೪ ರಲ್ಲಿ ಅಸಹಕಾರ ಚಳವಳವನ್ನೂ ಹಿಂತೆಗೆದುಕೊಂಡದ್ದರಲ್ಲಿ ಇದು ಕಾಣಿಸುತ್ತದೆ.

ಇಂದಿನ ಸ್ವಾತಂತ್ರ್ಯಸಂಪಾದನೆಯು ಈ ಚಳವಳದ ನಿಜವಾದ ಜಯದದ್ವಾರೋದ್ಘಾಟನ ಎನ್ನಬಹುದು. ಈ ವಿಜಯವು ಮಾನವನ ಎಲ್ಲ ಕಾರ್ಯಕ್ಷೇತ್ರದಲ್ಲಿಯ ಕ್ರಾಂತಿಕಾರಕ ಸಾಮಾಜಿಕ ಪುನಾರಚನೆಯಲ್ಲಿ ಫಲಿಸುವದು. ಈ ಜಯದತ್ತ ಹರಿಯುವಾಗ ಹಿಮಾಲಯೋಪಮವಾದ ಅನಿರೀಕ್ಷಿತ ವಿಘ್ನಗಳು ಅಡ್ಡಬರುತ್ತವೆ. ತನ್ನ ಧ್ಯೇಯವಾದ ಸಾಮಾಜಿಕ ಪುನಾರಚನೆಯನ್ನು ಮುಟ್ಟುವದರೊಳಗೆ ಅದು ಇದಕ್ಕೂ ಹೆಚ್ಚಿನ ತ್ಯಾಗ, ಬಲಿದಾನಗಳನ್ನು ತೆಗೆದುಕೊಳ್ಳುತ್ತದೆ. ಆದರೆ ಸತ್ಯವು ಅಹಿಂಸೆಗೆ ಒಂದು ವ್ಯವಹಾರ್ಯವಾದ ರೂಪವನ್ನು ಕೊಟ್ಟು ತನ್ಮೂಲಕ ಕೊನೆಗೆ ಭಾರತದ ಸಾಮಾಜಿಕ ಪುನಾರಚನೆಗೆ ಅದು ನಮ್ಮನ್ನೊಯ್ದು ಮುಟ್ಟಿಸುತ್ತದೆ; ಮತ್ತು ಇತರ ದೇಶಗಳಲ್ಲಿ ಇಂಥ ಶಾಂತಿ ಸಂಭವಿಸುವಂತೆ ಮಾಡುತ್ತದೆ.

ಮಾರ್ಚ ೭ ನೆಯ "ಹರಿಜನ"ದಲ್ಲಿ ಪ್ರಕಟವಾದ ಗಾಂಧಿಯವರ ಉಕ್ತಿಗಳು ಅದನ್ನು ಸ್ಪಷ್ಟಪಡಿಸುತ್ತವೆ. ಅದರಲ್ಲಿ. "ಹೆಚ್ಚಿನ, ಹೆಚ್ಚು ಸಿಂಧಾರಿಸಿದ ಮಾದರಿಯ ಖಾದಿ ಕೆಲಸಗಾರ" ನಮಗೆ ಬೇಕು; ಅವನೇ "ಸಮಾಜ ಪಂಚಾಯತ ರಾಜ್ಯವನ್ನು ಕಾರ್ಯರೂಪಕ್ಕೆ ತರಬಲ್ಲ" ಎಂದು ಅವರು ವಿಧಿಸಿದ್ದಾರೆ; ಮತ್ತು "ಜಯವು ನಮ್ಮ ಅತ್ಯಂತ ಪಾವಿತ್ರ್ಯ ಬುದ್ಧಿಯನ್ನು ಅವಲಂಬಿಸಿದೆ" ಎಂದು ಉಪಸಂಹರಿಸಿದ್ದಾರೆ. ಇದು ಅತ್ಯಂತ ಮುಖ್ಯವಾದುದು. ಈಗ ಕೇಳುತ್ತೇನೆ–ಸತ್ಯವಿಲ್ಲದೆ ಪಾವಿತ್ರ್ಯವಿರಬಲ್ಲುದೋ? ಆದುದರಿಂದ ಅಹಿಂಸೆಗೆ ಸತ್ಯವೇ ಅವಿನಾಭಾವಿಯಾದ ಅವಚ್ಛೇದಕ; ಅದೇ ಮೇರೆಗೆ ಹಿಂಸೆಯಲ್ಲಿ ಸತ್ಯದ ಕೊಲೆಯೇ ಮೊದಲು ಆಗುವಂಥದು.

ಈ ಕಾರ್ಯವನ್ನು ಪ್ರಾರಂಭಿಸಬೇಕಾದರೆ ಹಳ್ಳಿಗರು ತಮಗೆ ಎಲ್ಲ ಪ್ರಲೋಭನಗಳನ್ನೂ ಹಾಳಿಗೀಡುಮಾಡುವ ಪ್ರಯತ್ನಗಳನ್ನೂ ತಡೆಯುವ ಶಕ್ತಿಯಿದೆ ಎಂಬುದನ್ನು ಅರಿತುಕೊಳ್ಳಬೇಕು. ಈ ಅರಿವು ಉಂಟಾಗಬೇಕಾದರೆ ತಾವು ದೈನಂದಿನ ವ್ಯವಹಾರದಲ್ಲಿ ವ್ಯಕ್ತಿಗಳಾಗಿ, ಕೌಟುಂಬಿಕರಾಗಿ, ಹಳ್ಳಿಗರಾಗಿ, ಅಥವಾ ಸಾಮಾಜಿಕರಾಗಿ ನಡೆದುಕೊಳ್ಳುವಾಗ ಸತ್ಯಸಂಧರಾಗಿರುವುದು ಅವಶ್ಯಕ ಎಂಬದನ್ನು ಅವರು ಗ್ರಹಿಸುವಂತಾಗಬೇಕು.

ಇದನ್ನು ಒಂದು ಹಳ್ಳಿಯ ಸಭೆಯಲ್ಲಿ ಸಾಕ್ಷಾತ್ತಾಗಿ ಪ್ರಯೋಗ ಮಾಡಲಾಯಿತು. ಆಗ ಕಾಂಗ್ರೆಸ್ಸಿಗರಿಗೆ ಸ್ವಾತಂತ್ರ್ಯಸಮರದಲ್ಲಿ ಸಾಮರ್ಥ್ಯವೆಂದರೆ ಸತ್ಯವೊಂದೇ ಆಗಿತ್ತು ಎಂಬುದನ್ನು ಆ ಹಳ್ಳಿಗರು ಅರಿತರು.

ಜೀವನದ ಸರ್ವಕ್ಷೇತ್ರಗಳಲ್ಲಿ ಸರ್ವೋದಯವನ್ನು ಸಾಧಿಸುವ ಅಹಿಂಸಾತಂತ್ರವನ್ನು ಕಂಡುಹಿಡಿಯಲು ಬುದ್ಧಿಶುದ್ಧಿಯಾಗಬೇಕು. ಹೀಗೆ ಬುದ್ಧಿಶುದ್ಧಿಯಾಗಲು ಸತ್ಯಸಂಧತೆ ಇರುವುದು ಅಗತ್ಯ. ಸತ್ಯಸಂಧತೆ ಈ ಕಾರ್ಯವನ್ನು ಮಾಡುವುದು ಹೇಗೆ ಮತ್ತು ಹಾಗೆ ಮಾಡಲು ಯಾವ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬೀಯೆಲ್ಲವನ್ನೂ ಈ ಸಣ್ಣ ಟಿಪ್ಪಣಿಯಲ್ಲಿ ಚರ್ಚೆ ಮಾಡುವುದು ಅನವಶ್ಯಕ.

-ವಿ. ವಿ. ದಾಸ್ತಾನೆ

ನಮ್ಮ ಮೂಲವಾವುದು ?

'ಅಹಿಂಸೆಯಿಂದಲೆ ಆ ಯೋಜನೆಯು ಹೊರಹೊಮ್ಮುತ್ತಿದೆ' ಎಂಬ ಬಗ್ಗೆ ನೀವು ವ್ಯಕ್ತಪಡಿಸಿದ ವಿಚಾರಗಳು (ಹರಿಜನ ಮಾರ್ಚ ೬) ಬಹಳ ಉಪಯುಕ್ತವಾಗಿದ್ದವು. ಇನ್ನಷ್ಟು ಸ್ಪಷ್ಟೀಕರಣವು ಸಹಾಯಕವಾಗಬಹುದಲ್ಲವೆ?

"ಪ್ರೇಮವೇ ಬ್ರಹ್ಮ, ಸತ್ಯವೇ ಬ್ರಹ್ಮ" ಎಂದು ಜೀಸಸ್‌ನು ಹೇಳಿರುವನು. ಅಂತೆಯೆ ಅಹಿಂಸೆ ಎಂಬ ಶಬ್ದವನ್ನು ನಾನು ದಪ್ಪಕ್ಷರಗಳಲ್ಲಿ ಬರೆಯುವೆನು. ಕಾಮ, ಸ್ನೇಹ ಮತ್ತು ಭಕ್ತಿ ಎಂಬುದಾಗಿ ಗ್ರೀಕರು ಪ್ರೇಮ ಶಬ್ದವನ್ನು ಮೂರು ಬಗೆಯಿಂದ ಕರೆಯುವದುಂಟು. ಗಾಂಧೀಜಿಯವರು ತಮ್ಮ ಅಹಿಂಸೆಯನ್ನು ಯಾವಾಗಲೂ ಈ ಭಕ್ತಿಯ ಮಟ್ಟಕ್ಕೆ ಏರಿಸುತಿದ್ದರು. ನಾವು ಇದನ್ನು ನೆನಪಿನಲ್ಲಿ ಇಟ್ಟುಕೊಳ್ಳಲಿಕ್ಕೆ ಬೇಕು.

ಪರಮಾತ್ಮನಲ್ಲಿ ನಿಶ್ಚಲಭಕ್ತಿಯುಳ್ಳದೆ ನಮ್ಮ ಉದ್ಧಾರವಾಗಲಾರದೆಂದು ಬಾಪೂಜಿ ಮೇಲಿಂದ ಮೇಲೆ ನಮ್ಮನ್ನು ಎಚ್ಚರಿಸುತಿದ್ದರು. ಎಲ್ಲ ಬಗೆಯ ಒಳ್ಳೆ ಮತ್ತು ಸ್ಥಿರಕಾರ್ಯದ ನಿಜವಾದ ಮೂಲದ ಸಮೀಪಕ್ಕೆ ಗಾಂಧೀಜಿಯ ಈ ಹೇಳಿಕೆ ನಮ್ಮನ್ನು ಒಯ್ಯುವುದಿಲ್ಲವೆ? ನಮ್ಮ ರಚನಾತ್ಮಕ ಕಾರ್ಯವೆಲ್ಲದರ ನಿಜವಾದ ಮೂಲವು ಗಾಂಧೀಜಿಯ ಆತ್ಯಂತಿಕ ಪ್ರಾರ್ಥನಾನಿಷ್ಠೆ ಮತ್ತು ಭಕ್ತಜೀವನವೆಂದು ನನಗೆ ಅನಿಸುತ್ತದೆ.

ಆದರೆ ಸತ್ಯ ಮತ್ತು ಅಹಿಂಸೆಯಲ್ಲಿ ಇದ್ದ ಆ ಆತ್ಯಂತಿಕ ನಿಷ್ಠೆಯನ್ನು ಆಗಾಗ ಜೀವನಪ್ರವಾಹದಲ್ಲಿ ಒರೆಗೆ ಹಚ್ಚಿ ನೋಡಿದರೆ ಅದರ ನಿಶ್ಚಲತೆಯು ಸಿದ್ಧವಾಗಲಾರದು. ಬಾಪೂಜಿ ಒಂದು ಕ್ಷಣ ಸತ್ಯದರ್ಶನವನ್ನು ಕಾಣುತಿದ್ದರೆ ಮರುಕ್ಷಣವೆ ಜೀವನದ ಜಟಿಲ ಸಮಸ್ಯೆಯು ಅವರನ್ನು ಆವರಿಸುತಿದ್ದಿತು. ನಾನು ಯಾವಾಗಲೂ ನಯೋತಾಲೀಮನ್ನು ಸ್ವಾಗತಿಸುತಿರುವೆ ಏಕೆಂದರೆ ಜೀವನ ಸಂಗ್ರಾಮವನ್ನು ತಪ್ಪಿಸಲು ಅದೆಂದಿಗೂ ಪ್ರಯತ್ನಿಸುವದಿಲ್ಲ. ಶಾಶ್ವತವಾದ ವಿಜಯವನ್ನು ನಾವು ಪಡೆಯಬೇಕಿದ್ದರೆ ಪರಮಾತ್ಮ ಅಂದರೆ ಸತ್ಯ, ಅಹಿಂಸೆಯ ಮೇಲಿನ ಶ್ರದ್ಧೆಯನ್ನು ಎಂದಿಗೂ ಬಿಡತಕ್ಕದ್ದಲ್ಲ ಎಂದು ನನಗೆ ಅನಿಸುತ್ತದೆ.

ಆದರೆ ನಮ್ಮ ಚರ್ಚಗಳಲ್ಲಾಗಲಿ ಮಂದಿರಗಳಲ್ಲಾಗಲಿ ಇಂಥ ಪರಮಾತ್ಮನಲ್ಲಿ ನಿಶ್ಚಲ ಭಕ್ತಿಯನ್ನು ನಾವು ಯಾವಾಗಲೂ ತೋರಿಸುವದಿಲ್ಲೆಂಬ ನನ್ನ ಅನುಭಾವವನ್ನು ಈ ಸಮಯದಲ್ಲಿ ನಿಮ್ಮ ಗಮನಕ್ಕೆ ತರಬಯಸುತ್ತೇನೆ.

ಧಾರ್ಮಿಕ ನಿಯಮಗಳಲ್ಲಿ ಸಂಪ್ರದಾಯ ಶರಣರಲ್ಲದವರಲ್ಲಿಯೂ ಈ ಅನಾಭಾವ ವಿದ್ದುದು ಆಗಾಗ ಕಂಡು ಬರುತ್ತದೆ. ಅಬ್ರಹಾಮ ಲಿಂಕನ್‌ರಂಥ ಗುರುವರ್ಗಕ್ಕೆ ಸೇರದವರಲ್ಲಿಯೂ ಪರಮಾತ್ಮನಲ್ಲಿ ಆ ಬಗೆಯ ನಿಶ್ಚಲ ಭಕ್ತಿಯಿದ್ದಿತು, ಮತ್ತು ಕೊನೆಯ ವರೆಗೂ ಅವರು ಅದರಂತೆಯೆ ನಡೆದುಕೊಂಡರು.

— ರಾಲ್ಫ ರಿಚರ್ಡ ಕೈಥಾನ

(೧೩ನೆಯ ಪುಟದಿಂದ)

ದೆಂದಾಗಲಿ ಎಣಿಸಲಾರೆ. ಎಲ್ಲ ಲಿಪಿಗಳೂ ಮನುಷ್ಯ ಸೃಷ್ಟಿ. ಅವು ಮನುಷ್ಯನ ಸೌಕರ್ಯಕ್ಕಾಗಿ ಇವೆ. ಆದುದರಿಂದ ಒಂದೇ ಜಾಗತಿಕ ಲಿಪಿ ಅಸ್ತಿತ್ವಕ್ಕೆ ಬಂದರೂ ನಾನು ಅದನ್ನು ಸ್ವಾಗತಿಸುವವನೇ.

ನನಗೆ ದುಃಖವಾಗುವದು ಉರ್ದೂ ವಿರೋಧದ ಬೇರಲ್ಲಿರುವ ದ್ವೇಷಬುದ್ಧಿಯನ್ನು ನೋಡಿ "ಈ ಉರ್ದೂ ಮರುಳೇಕೆ ಈಗ?" "ದ್ವಿರಾಷ್ಟ್ರ ಸಿದ್ಧಾಂತಕ್ಕೆ ಇನ್ನೂ ಜೀವದಾನ ಮಾಡಲೆಂದೆ?" ಈ "ಈಗ" ಮತ್ತು "ಇನ್ನೂ" ಶಬ್ದಗಳೇ ಒಡಲಿಗೆ ಚುಚ್ಚುವವು. ನಾವು ರಾಜಕೀಯವಾಗಿ ಇಬ್ಭಾಗವಾಗಿದ್ದೇವೆಂದಾಕ್ಷಣ ಸಿಂಧು, ಪದ್ಮಾ, ಬ್ರಹ್ಮಪುತ್ರ, ಪೇಶಾವರ, ಕರಾಚಿ, ಲಾಹೋರ, ಢಾಕಾ ಮತ್ತು ಅಲ್ಲಿ ವಾಸಿಸುವ ಜನರು ನನ್ನ ದೇಶದ ಮತ್ತು ನನ್ನ ರಾಷ್ಟ್ರದ ಅಂಗಗಳಲ್ಲೆಂದು ನಾನೇಕೆ ಒಪ್ಪಿಕೊಳ್ಳಲಿ? ಎರಡು ಸ್ವತಂತ್ರ ರಾಜ್ಯಗಳ ನಿರ್ಮಾಣವಾಯಿತೆಂಬ ಕಾರಣದಿಂದ ಪಾಕಿಸ್ತಾನದಲ್ಲಿದ್ದು ಉರ್ದೂ ಲಿಪಿಯಲ್ಲಿ ಬರೆಯುವ ಹಿಂದೂ—ಮುಸ್ಲಿಮರು ಇನ್ನು ನನ್ನ ದೇಶಬಾಂಧವರಲ್ಲವೆಂದು ನಾನು ಬಗೆಯಲಾರೆ. ದೇಶದ ರಾಜಕೀಯ ನಕಾಶೆಯಲ್ಲಿ ಸ್ಥಿತ್ಯಂತರಗಳಾದಷ್ಟು ಸಲವೂ ನನ್ನ ಮಾತೃಭೂಮಿಯ ಬಗ್ಗೆ ನನ್ನ ಕಲ್ಪನೆಯನ್ನು ನನ್ನ ದೇಶಬಾಂಧವರ ಬಗ್ಗೆ ನನ್ನ ವರ್ತನೆಯನ್ನೂ ಬದಲಿಸುತ್ತಲೇ ಹೋಗಲಾರೆ. ರಾಜಕಾರಣದ ಆಟದಲ್ಲಿ ಆಸಕ್ತರಾದ ಕೆಲವೇ ರಾಜಕಾರಣಿಗಳು ಈ ಬದಲಾವಣೆಗಳನ್ನು ಉಂಟುಮಾಡುತ್ತಾರೆ. ಸಾಮಾನ್ಯ ಜನರನ್ನು ಅದರಲ್ಲಿ ಬೆರಸುವದರಿಂದಾಗುವ ಘೋರತರ ಅನರ್ಥಗಳನ್ನು ನಾವು ಕಣ್ಣಾರೆ ಕಂಡಿದ್ದೇವೆ. ಈ ಸಂಕುಚಿತ ಬುದ್ಧಿಯ ಸ್ವಾರ್ಥಿಗಳೇ (ಹಿಂದುಗಳೂ ಮುಸ್ಲಿಮರೂ) ಹಿಂದೂ ಧರ್ಮ ಮತ್ತು ಇಸ್ಲಾಮದ ಹೆಸರಲ್ಲಿ ಈ ರಕ್ತಪಾತಕ್ಕೆ ಕಾರಣರಾದವರು; ಅವರೇ ದೇಶವನ್ನು ಮಾತ್ರವಲ್ಲ, ಪಂಜಾಬ ಮತ್ತು ಬಂಗಾಲ ಪ್ರಾಂತಗಳನ್ನೂ ವಿಭಜಿಸಿ ನಿರಪರಾಧಿಗಳಾದ ಸಾವಿರಗಟ್ಟಲೆ ಜನರ ಜೀವನವನ್ನು ಹಾಳುಗೆಡಹಿ, ತಮಗೆ ವಿಮೋಚನೆಯನ್ನು ತಂದವನ ಜೀವನವನ್ನು ಹಾಳುಗೆಡಹಿ, ತಮಗೆ ವಿಮೋಚನೆಯನ್ನು ತಂದವನ ಜೀವವನ್ನೇ ತೆಗೆದುಕೊಳ್ಳುವ ವರೆಗೂ ಇಳಿದುಹೋದವರು.

ಉರ್ದೂ ಲಿಪಿ ಮುಸ್ಲಿಮರಿಗೇ ಸೇರಿದ್ದೆಂದು ಒಂದೊಮ್ಮೆ ಒಪ್ಪಿಕೊಂಡರೂ ಭಾರತ ಒಕ್ಕೂಟದ ಎಲ್ಲ ಪ್ರಾಂತಗಳಲ್ಲೂ ಹಂಚಿ ಹೋಗಿರುವ ನಾಲ್ಕು ಕೋಟಿ ಮುಸ್ಲಿಮರಿದ್ದು, ಅವೆಲ್ಲ ಪ್ರಾಂತಗಳಲ್ಲಿ ಉರ್ದು ಸ್ವಲ್ಪಮಟ್ಟಿಗೆ ಪ್ರಚಲಿತವಾಗಿದೆ. ನಾಗರಿಗೆ ಆ ಯೋಗ್ಯತೆ ಈ ವರೆಗಂತೂ ಇಲ್ಲ. ಏಕೆಂದರೆ ಎಲ್ಲ ಪ್ರಾಂತಗಳಲ್ಲಿಯೂ ಸಂಸ್ಕೃತವನ್ನು ಕೂಡ ನಾಗರಿ ಲಿಪಿಯಲ್ಲೆ ಕಲಿಯುವರೆಂದು ಹೇಳುವದೂ ದಿಟ್ಟತನದ ಮಾತಾದೀತು.

ಹಿಂದುಗಳೇ ಎಲ್ಲ ಪ್ರಾಂತಗಳಲ್ಲಿಯೂ ಬಹುಸಂಖ್ಯರಾಗಿರುವಾಗ ಉರ್ದುವಿಗಾಗಿ ದನಿಯೆತ್ತುವವರಾದರೂ ಯಾರು? ಯಾರೂ ಹಾಗೆ ಮಾಡುವದಿಲ್ಲೆಂದು ಅನ್ಯಾಯವೇ ನ್ಯಾಯವಾಗಬೇಕೆ? ಇದು ಅಲ್ಪಸಂಖ್ಯರ ಸಂಬಂಧದ ಪ್ರಶ್ನೆಯೆಂದು ನಾನೂ ಅದನ್ನು ಕಡೆಗಣಿಸಲೇ? ಅಕೋಲಾದಲ್ಲಿನಡೆದ ಕಿಡಿಗೇಡಿತನ ಉರ್ದೂ ಲಿಪಿಯ ಹಲಗೆಯನ್ನು ಕಿತ್ತೊಷ್ಟಕ್ಕೇ ಮುಗಿದಿರದೆ, ಅದರೊಡನೆ ಮರಾಠಿ-ಹಿಂದೀ ಚಳವಳಿಯ ಬೀಜವನ್ನೂ ಬಿತ್ತುತ್ತದೆ. ಬಹುಶಃ ಇದು ವಕೀಲ ಮಹಾಶಯರ ವಿಚಾರಕ್ಕೆ ಇನ್ನೂ ಹೊಳೆದಿಲ್ಲವೇನೊ? ಹಿಂದುಗಳು ಬಹುಸಂಖ್ಯರಾಗಿದ್ದರೆ ಅವರಲ್ಲಿ ಆತ್ಮವಿಶ್ವಾಸವೂ ಔದಾರ್ಯವೂ ಇರಬೇಕು. ಆದರೆ ಇದು ಔದಾರ್ಯದ ಪ್ರಶ್ನೆ ಕೂಡ ಅಲ್ಲ; ಅದು ಕೇವಲ, ನ್ಯಾಯದ, ಯೋಗ್ಯ ವ್ಯವಹಾರದ ಪ್ರಶ್ನೆಯಾಗಿದೆ.

ವರ್ಧಾ — ಕಿ. ಘ. ಮಶ್ರೂವಾಲಾ
೩೦-೩-೪೯ (ಹಿಂದುಸ್ತಾನಿಯಿಂದ)

ವ್ಯಾಪಾರಲೋಕ

ಮುಂಬಯಿ ಶೇರಪೇಟೆ

ತಾ. ೨೮

ಹಣದ ಪೇಟೆಯ ಮುಗ್ಗಟ್ಟು ದೂರವಾಗಿಲ್ಲ. ಪಾಲುಗಳ ಬೆಲೆ ಯಾವ ರೀತಿಯಲ್ಲೂ ಸುಧಾರಿಸುತ್ತ ಇಲ್ಲ. ಇಂದಿನ ಕೊನೆಯ ದರಗಳು ಇಂತಿವೆ:

ಕೋಹಿನೂರು	೨೮೦–೦–೦
ಮುಂಬಯಿ ಡಾಯಿಂಗ್	೯೪೩–೦–೦
ಸ್ವದೇಶಿ	೨೯೯–೦–೦
ಗೋಕಾಕ	೨೬೮–೮–೦
ಸೆಂಚುರಿ	೨೫೧–೪–೦
ಸಿಂಪ್ಲೆಕ್ಸ	೧೭೫–೦–೦
ಟಾಟಾ ಸ್ಟೀಲ ಡೆಫರ್ಡ	೧೩೪೨–೮–೦
ಇಂಡಿಯನ್ ಅಯರ್ನ	೨೨–೬–೦
ಬೇಲಾಪುರ ಸಕ್ಕರೆ	೨೦೦–೦–೦
ಸೆಂಟ್ರಲ ಬ್ಯಾಂಕ್	೮೧–೦–೦
ಇಂಪೀರಿಯಲ್‌ಬ್ಯಾಂಕ್(ಪೂರ್ಣ)	೧೭೭೭–೮–೦
ಬ್ಯಾಂಕ ಆಫ್ ಇಂಡಿಯಾ	೧೮೦–೪–೦

ಚಿನ್ನ ಬೆಳ್ಳಿ

ಈ ವಾರ ಬೆಲೆಗಳು ತುಸು ಏರಿವೆ.

ತಯಾರಿ ಚಿನ್ನ	೧೧೪–೪–೦
ವಾಯದಾ ,,	೧೧೩–೦–೦
ತಯಾರಿ ಬೆಳ್ಳಿ	೧೮೧–೦–೦
ವಾಯದಾ ,,	೧೮೧–೮–೦
ಸಾವರಿನ	೭೪–೪–೦

ಅರಳೆ

ಅರಳೆಯ ಅನಧಿಕೃತ ದರಗಳು ಹೀಗಿದ್ದವು.

ಮೇ	೬೨೪–೮–೦
ಜುಲೈ	೬೨೨–೮–೦
ಸೆಪ್ಟೆಂಬರ	೬೨೧–೮–೦

ಎಣ್ಣೆ ಕಾಳು

ಶೇಂಗಾ	೧೮೬–೪–೦
ಅಗಸೆ (ತಯಾರಿ)	೩೧-೦.೦
,, ವಾಯದಾ	೩೦–೧೦–೦
,, ಎಣ್ಣೆ	೧೮–೧೪–೦

ಶಿವಮೊಗ್ಗೆ

ತಾ. ೨೮

ದೇಶಾವರ ನಂ. ೧ (ಮಣಕ್ಕೆ)	೩೦–೩೩
,, ೨	೨೮–೩೦
ರಾಜಾ ಅಲವು	೨೮–೩೦
ಪೇಟೆನ್	೩೦–೩೪
ತೊರಸಾಲು	೨೬–೨೯
ಬೆಟ್ಟವಂತಿ	೧೬–೧೮
ಬೆಟ್ಟೆ	೧೫–೧೬

ಹುಬ್ಬಳ್ಳಿ

ತಾ. ೨೮

ಜ. ಹೊಸ ಹತ್ತಿ (ನಗಕ್ಕೆ) ೫೦೦–೫೨೧
ಅಪ್ಲಂಡ ಹತ್ತಿ ಧಾರಣೆ ಹೊರಟಿರುವದಿಲ್ಲ.
ಜ. ಅರಳಿ ವ್ಯಾಪಾರ ನಡೆದಿರುವದಿಲ್ಲ.
ಡಬಲ್ ರೋಲ್ ,, ,,

ಕುಸುಬಿ (ಬ. ಮಣಕ್ಕೆ)		೧೫.೪.೬	೧೫–೬–೦
ಅಗಸಿ	(ಚೀಲಕ್ಕೆ)	—	೪೦–೦–೦
ಔಡಲ	,,		೩೭–೧೪–೯
ಜ. ಹೆಸರು	,,	—	೪೨–೧೦–೮
ಕರಿ ಎಳ್ಳು	,,		೬೪–೬೬
ಬಿಳಿ ಎಳ್ಳು	,,		೭೩
ಕಡಲೆ	,,	೫೬ ೧೪–೨	೫೮–೦–೦
ಜ. ತೊಗರಿ	,,		೩೦–೩೫
ಹುರಳಿ	,,		೩೪–೩೫
ಕೆಂ. ಅಲಸಂದಿ	,,		೫೫–೫೬
ಬಿ. ಅಲಸಂದಿ	,,		೫೬–೦.೦
ಶೇಂಗಾ (ಹೇರು)			೪೮–೫೦
ಶೇಂಗಾ ಕಾಳು			೬೮—೬೯

ಕರ್ನಾಟಕದಲ್ಲಿ

ಧಾರವಾಡ

ಧಾರವಾಡ ಜಿಲ್ಲಾ ಕಲೆಕ್ಟರರು ೨೬ ನೇ ತಾರೀಕು ನಿರತ ಸುದ್ದಿಗಾರರ ಸಭೆಯಲ್ಲಿ ಜಿಲ್ಲೆಯಲ್ಲಿ ಧಾನ್ಯ ಸಂಗ್ರಹವು ತೃಪ್ತಿಕರವಿದೆ ಯೆಂದು ಹೇಳಿದರು. ಇಲ್ಲಿ ಸಾಕಷ್ಟಿದ್ದು ಕೋಳವು ೩-೪ ತಿಂಗಳಿಗೆ ಬೇಕಷ್ಟಿದೆ. ಆಹಾರ ಧಾನ್ಯಗಳನ್ನು ಹೊರಗಿನಿಂದ ತರಿಸುವ ಪ್ರಸಂಗಬರಲಿಕ್ಕಿಲ್ಲ ಎಂದು ಹೇಳಿದರು. ಹಾಲಿನ ಹಂಚುವಿಕೆಯನ್ನು ಇದೇ ಜೂನ ತಿಂಗಳಿಂದ ನಿಲ್ಲಿಸಲಾಗುವದೆಂದೂ ಹೇಳಿದರು.

ಗದುಗಿನಲ್ಲಿ ಸೋ. ಸ ಕ್ಷತ್ರಿಯ ಶ್ರೀಮಂತ ಬಾಬಾಸಾ ಬಾಳಕೆಯವರು ವಯಸ್ಸಿನ ೭೪ ನೇ ವರ್ಷದಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಸಮಾಜ ಸೇವೆಯಲ್ಲಿ ಇವರು ಯಾವಾಗಲೂ ನಿರತರಾಗಿದ್ದರು.

ಬೆಂಗಳೂರಲ್ಲಿ ಇದೇ ತಿಂಗಳು ಮೂರನೇ ವಾರದಲ್ಲಿ ಕೂಡಲಿರುವ ಅ. ಭಾ. ಪತ್ರಿಕಾ ಸಂಪಾದಕರ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಸ್ವದೇಶಮಿತ್ರನ್ ಪತ್ರಿಕೆಯ ಸಂಪಾದಕ ರಾದ ಶ್ರೀ ಸಿ. ಆರ್. ಶ್ರೀನಿವಾಸನ್, ಹಿತ ವಾದ ಪತ್ರಿಕೆಯ ಶ್ರೀ ಎ. ಡಿ. ಮಣಿ ಮತ್ತು ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕ ಶ್ರೀ ಮೋಹರೆ ಹಣಮಂತರಾಯರು ನಿಂತಿದ್ದರು. ಆದರೆ ಅಧ್ಯಕ್ಷಪದದ ಆಯ್ಕೆ ಈ ವರೆಗೆ ಅವಿರೋಧ ನಡೆದಂತೆ ಈ ವರುಷವೂ ನಡೆಯ ಬೇಕೆಂದು ಶ್ರೀ ಮೋಹರೆ ಮತ್ತು ಮಣಿ ಯವರು ಹಿಂತೆಗೆದುಕೊಂಡರು.

ವಿಜಾಪುರ

ವಿಜಾಪುರ ಜಿಲ್ಲೆಯ ಉತ್ತರ ಭಾಗದಲ್ಲಿ ಬಸ್ ಸಾರಿಗೆ ಸರಕಾರದ ವತಿಯಿಂದ ಸುರು ವಾಗಿದ್ದು ಅದಕ್ಕಾಗಿ ಮುಂಬಯಿ ಸರಕಾರದ ಪರು ಸಲಹೆಗಾರ ಮಂಡಲವೊಂದನ್ನು ನೇಮಿ ಸಿದ್ದಾರೆ.

ಇಂಡಿಯನ್ ಕಾನ್ಫರೆನ್ಸ ಆಫ್ ಸೋಶಲ್ ವೆಲಫೇರದವರ ಆದೇಶದಂತೆ ೨೪ ನೇ ತಾರೀಕಿನ ದಿನ ವಿಜಾಪುರದ ರಿಮಾಂಡ ಹೋಮಿನ ಬಯಲಿನಲ್ಲಿ ಪ್ರೊ. ಎಚ್. ಬಿ. ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ಕಾಕಾ ಕಾರಖಾನೀಸರ ಭಾಷಣವಾಯಿತು. ಹರಿಜನ ಸೇವೆ ಖಾದಿ ಗ್ರಾಮೋದ್ಧಾರ ಮೊದಲಾದವು ಗಳ ಬಗ್ಗೆ ಅವರು ವಿವರಿಸಿದರು.

ವಿಜಾಪುರದಿಂದ ೩೦ ಮೈಲುಗಳ ಮೇಲಿ ರುವ ಬಿಜ್ಜರಗಿಯಲ್ಲಿ ೨೮-೬-೪೮ ನೇ ದಿನ ಹಠೋಡೆಯಾದ ಪ್ರಕರಣದಲ್ಲಿ ೩೪ ಆರೋಪಿ ಗಳು ಇದ್ದು ಈಗ ೭ ಆರೋಪಿಗಳು ಮಾತ್ರ ಸಿಕ್ಕಿದ್ದಾರೆ. ಈ ಆರೋಪಿಗಳ ಮೇಲೆ ಈಗ ವಿಜಾಪುರ ಸೆಶನ್ಸ ಕೋರ್ಟಿನಲ್ಲಿ ಖಟ್ಲೆ ಸುರುವಾಗಿದೆ.

ಬಳ್ಳಾರಿ

ಸುದ್ದಿ ಮತ್ತು ಆಕಾಶವಾಣಿ ಶಾಖೆಯ ಮಂತ್ರಿಗಳಾದ ಶ್ರೀ ದಿವಾಕರ ರಂಗರಾಯರು ಬಳ್ಳಾರಿಗೆ ದಯಮಾಡಿಸಿದಾಗ ಬಳ್ಳಾರಿ ನಗರ ಸಭೆಯವರು ಅವರಿಗೆ ಮಾನಪತ್ರವನ್ನು ಸಮ ರ್ಪಿಸಿದರು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಯು ಆದೇಶಿಸಿದಂತೆ ನಡೆ ಸುಕೊಳ್ಳಲು ಬಳ್ಳಾರಿಯ ಜನತೆಗೆ ಮಂತ್ರಿ ವರ್ಯರು ಕೇಳಿಕೊಂಡರು.

ಹಂಪೆಯ ಶ್ರೀ ವಿರೂಪಾಕ್ಷೇಶ್ವರನ ಅನಾದಿ ಕಾಲದಿಂದ ಇದ್ದ ದೊಡ್ಡ ತೇರು ಅಗ್ನಿದಗ್ಧವಾ ಯಿತಾದಕಾರಣ ದುಷ್ಟದೋಷ ಪರಿಹಾರಾರ್ಥ ವಾಗಿಯೂ ಲೋಕಕಲ್ಯಾಣಾರ್ಥವಾಗಿಯೂ ವೈಶಾಖ ಶುದ್ಧ ತೃತೀಯೆಯಿಂದ ಮೂರು ದಿನ ಸಹಸ್ರ ಘಟಾಭಿಷೇಕ ಮೊದಲಾದ ಕಾರ್ಯ ಕ್ರಮಗಳನ್ನು ಇಟ್ಟುಕೊಳ್ಳಲಾಗಿದೆ. ಅಲ್ಲದೆ ಪಂಡಿತರ ಉಪನ್ಯಾಸಾದಿಗಳೂ ನಡೆಯುವುವು ಆಕಸ್ಮಾತ್ತಾಗಿ ಸಂಭವಿಸಿದ ಈ ಅನಾಹುತ ಕ್ಕಾಗಿ ಎಲ್ಲರೂ ಮರುಗುತ್ತಿರುವರು.

ಅದವಾನಿ ಆಲೂರ ಮತ್ತು ರಾಯದುರ್ಗ ಈ ಮೂರು ತಾಲೂಕುಗಳ ಜನರ ಅಭಿ ಪ್ರಾಯ ಕೇಳಿಕೊಂಡು ಆ ತಾಲೂಕುಗಳ ಭವಿ ತವ್ಯವನ್ನು ನಿರ್ಣಯಿಸಿರಿ ಎಂದು ಕಾಂಗ್ರೆಸ ಅಧ್ಯಕ್ಷರಿಗೆ ಶ್ರೀ ಉರುವಕೊಂಡ ಜಗದ್ಗುರು ಗಳು ಬಿನ್ನವಿಸಿದ್ದಾರೆ.

ಮಾನ್ಯ ದಿವಾಕರರು ಹೊಸಪೇಟೆಗೆ ಭೆಟ್ಟಿ ಕೊಟ್ಟಾಗ ಅಲ್ಲಿಯ ನಗರಸಭೆಯವರು ಅವರಿಗೆ ಮಾನಪತ್ರಕೊಟ್ಟರು. ಮಾನ್ಯ ಮಂತ್ರಿಗಳು

ದಕ್ಷಿಣ ಕನ್ನಡ

ಮಂಗಳೂರಿನ ಕೆನರಾ ವಾಣಿಜ್ಯ ಸಂಘದ ಹಾಲಿ ಅಧ್ಯಕ್ಷರುಗಳಾದ ದಿ. ರಾ. ಸಾ. ಶ್ರೀ ಮನೇಲ್ ಅಣ್ಣಪ್ಪ ನಾಯಕ್ ಮತ್ತು ದಿ. ರಾ. ಸಾ. ಶ್ರೀ ಕಸ್ತೂರಿ ವಾಗೇಶ ಪೈ ಇವರ ಭಾವಚಿತ್ರಗಳನ್ನು ಕಳೆದ ತಾ ೨೦ ರಂದು ವಾಣಿಜ್ಯ ಸಂಘದ ಕಚೇರಿಯಲ್ಲಿ ವಕೀಲ ಶ್ರೀ ಬಿ. ವೈಕುಂಠ ಬಾಳಿಗರು ಅನಾವರಣ ಮಾಡಿ ದರು.

ದ. ಕನ್ನಡ ಜಿಲ್ಲಾ ಆಟೋಮೋಬೈಲ್ ಕೆಲ ಸಗಾರರ ಯೂನಿಯನಿನ ಕಾರ್ಯಕಾರೀ ಸಮಿ ತಿಯ ಸಭೆಯು ತಾ. ೧೬ ರಂದು ಜರುಗಿದಾಗ, ಯೂನಿಯನಿನ ಸದಸ್ಯರು ಇಂಡಸ್ಟ್ರಿಯಲ್ ಟ್ರಿಬ್ಯೂನಲಿನವರ ಎವಾರ್ಡನ್ನು ಹೊಂದಿಲ್ಲ ವೆಂತಲೂ, ಇದನ್ನು ಯೋಗ್ಯ ರೀತಿಯಲ್ಲಿ ಬಗೆಹರಿಸುವರೆ ಯೂನಿಯನಿನ ಒಬ್ಬ ಪ್ರತಿನಿಧಿ ಯನ್ನು ಮದ್ರಾಸಿಗೆ ಕಳುಹಿಸಬೇಕೆಂದೂ ನಿರ್ಣಯವಾಯಿತು.

ಉಡುಪಿ ನಗರ ಸಭೆಯು ಕಳೆದ ವಾರ ಸೇರಿ ದಾಗ ಮುನ್ಸಿಪಲ್ ಮೈನ್ ಶಾಲೆಯ ಕಟ್ಟಡ ವನ್ನು, ಕಾಲೇಜು ಆದ ಸಂದರ್ಭದಲ್ಲಿ, ಕಾಲೇಜ ಸಮಿತಿಗೆ ತಾತ್ಕಾಲಿಕವಾಗಿ ಬಿಟ್ಟು ಕೊಡುವುದೆಂದು ನಿರ್ಣಯವಾಯಿತು.

ಸುಬ್ರಹ್ಮಣ್ಯದಲ್ಲಿ ಶ್ರೀ ಸಂಪುಟ ನರಸಿಂಹ ಸ್ವಾಮೀ ಮಠದ ಪರವಾಗಿ ಶ್ರೀ ನರಸಿಂಹ ಜಯಂತಿ ಮಹೋತ್ಸವವು ತಾ. ೧೦-೫-೪೯ ರಿಂದ ೧೪-೫-೪೯ ರ ವರೆಗೆ ಜರಗುವದು. ೧೦ ನೇ ತಾರೀಕು ಶ್ರೀ ವೇದವ್ಯಾಸ ಜಯಂತಿ ರಾತ್ರಿ ವಸಂತ ಪೂಜೆ ಶ್ರೀ ಪ್ರಾಣದೇವರಿಗೆ ರಂಗಪೂಜೆ, ೧೧ ಕ್ಕೆ ಪ್ರಾತಃಕಾಲ ನರಸಿಂಹ ದೇವರಿಗೆ ಮಹಾಭಿಷೇಕ ಸಂತರ್ಪಣೆ ರಾತ್ರಿ ವಿಮಾನೋತ್ಸವ ವಸಂತಪೂಜೆ, ೧೩ ಕ್ಕೆ ವ್ಯಾಸಪೂಜೆ ಮಹಾರಥೋತ್ಸವ ವಸಂತಪೂಜೆ ೧೪ ಕ್ಕೆ ಅವಭೃಥೋತ್ಸವ ವಸಂತ ಪೂಜೆ ಮೊದಲಾದ ಕಾರ್ಯಕ್ರಮ ಜರಗುವದು.

ಉತ್ತರ ಕನ್ನಡ

ಹಿಂದುಸ್ತಾನ ಸರಕಾರದ ಸುದ್ದಿ ಮತ್ತು ಆಕಾಶವಾಣಿ ಶಾಖೆಯ ಮಂತ್ರಿಗಳಾದ ಶ್ರೀ ದಿವಾಕರ ರಂಗರಾಯರು ಇದೇ ೫-೬-೭ ಈ ಮೂರು ದಿನ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಂಚರಿಸುವರು. ೫ ನೇ ತಾರೀಕು ಹುಬ್ಬಳ್ಳಿ ಯಿಂದ ಹೊರಟು ಯಲ್ಲಾಪುರ, ಅಂಕೋಲಾ, ಗೋಕರ್ಣ ಕುಮಟೆ ಹೊನ್ನಾ ವರ ೬ ನೇ ತಾರೀಕು ಜೋಗ ಮತ್ತು ೭ ನೇ ತಾರೀಕು ಸಿದ್ದಾಪುರ ಶಿರಸಿ ಸಂದರ್ಶಿಸಿ ೮ ನೇ ತಾರೀಕು ಮುಂಜಾನೆ ಹುಬ್ಬಳ್ಳಿಗೆ ಮರಳು ವರು.

ಮಾನ್ಯದಿವಾಕರರು ಅಡಿಕೆ ಪರಿಷತ್ತಿನ ಸಲು ವಾಗಿ ಶಿರಸಿಗೆ ಬಂದಾಗ ನಗರ ಸಭೆಯ ಪರ ವಾಗಿ ಅವರಿಗೆ ಮಾನಪತ್ರವನ್ನು ಕೊಡ ಬೇಕೆಂದು ನಿರ್ಣಯಿಸಲಾಗಿದೆ.

ಅರಣ್ಯ ಕಾಲೇಜಿಗೆ ಧಾರವಾಡಕ್ಕಿಂತ ಕಾರ ವಾರವೇ ಯೋಗ್ಯವಾದ ಸ್ಥಳವಾಗಿದ್ದುದರಿಂದ ಅರಣ್ಯ ಕಾಲೇಜನ್ನು ಧಾರವಾಡದಲ್ಲಿ ಸ್ಥಾಪಿ ಸದೆ ಕಾರವಾರದಲ್ಲಿ ಸ್ಥಾಪಿಸಬೇಕೆಂದು ಕಾರ ವಾರ ಜಿಲ್ಲಾ ಮಾಧ್ಯಮಿಕ ಶಾಲೆಗಳ ಮುಖ್ಯಾಧ್ಯಾಪಕರ ಸಭೆಯಲ್ಲಿ ನಿರ್ಣಯಿಸ ಲಾಯಿತು.

ಗೋಕರ್ಣದಲ್ಲಿಯ ಕೊಲೆಯ ಪ್ರಕರಣದ ಸಂಬಂಧದಲ್ಲಿ ಪೂಜಾರಿ ವರ್ಗದ ೫ ಜನರನ್ನು ಬಂಧಿಸಲಾಗಿದೆ.

ಹುಬ್ಬಳ್ಳಿಯ ಶಿವಣ್ಣಗೌಡರು ಪಾಟೀಲ ಇವರ ಕೊಲೆಯ ಪ್ರಕರಣದಲ್ಲಿ ಖಟ್ಲೆಗೆ ಗುರಿಯಾದ ಗೋಕರ್ಣದ ಕಾರಂತ ಬಂಧು ಗಳ ಬಿಡುಗಡೆಯಾಯಿತು.

ಮುಂಡಗೋಡ ತಾಲೂಕಿನಲ್ಲಿಯ ಅಕ್ಕ ಪಕ್ಕದ ೨೫ ಹಳ್ಳಿಗಳ ಒಂದು ಗುಂಪಿನಲ್ಲಿ ಸರ್ವಾಂಗೀಣ ಶಿಕ್ಷಣ ಕೊಡಬೇಕೆಂದು ಪುರ ಸ್ಕಾರ ಮಾಡಲಾಗಿದೆ. ಈ ಭಾಗದ ಜನತೆಗೆ ಸಾಮಾಜಿಕ ಆರ್ಥಿಕೋನ್ನತಿಯ ಶಿಕ್ಷಣವನ್ನು ಕೊಡಲಾಗುವದು. ನಾಲ್ಕುವರ್ಷಗಳ ಈ ಯೋಜನೆಯಿಂದ ಪ್ರತಿವರುಷ ಸುಮಾರು ಒಂದು ಲಕ್ಷ ರೂಪಾಯಿ ವೆಚ್ಚ ಬರಬಹು ದೆಂದು ಅಂದಾಜು ಮಾಡಲಾಗಿದೆ.

ಉತ್ತರ ಕೊಡುತ್ತ ಭಾರತದ ಮುಂದಿರುವ ಅನೇಕ ಪ್ರಶ್ನೆಗಳನ್ನು ಬಿಡಿಸುವಲ್ಲಿ ನಾವೆಲ್ಲರೂ ಸಹಾಯಸಲ್ಲಿಸಬೇಕೆಂದು ಕೇಳಿಕೊಂಡರು. ಹರಪನಹಳ್ಳಿಯಲ್ಲಿ ಸ್ಥಾನಿಕ ಕಾಂಗ್ರೆಸ ಮತ್ತು ಪಂಚಾಯತಿ ಬೋರ್ಡುಗಳು ಮಂತ್ರಿಗಳಿಗೆ ಮಾನಪತ್ರವನ್ನು ಕೊಟ್ಟವು.

ದ. ಕನ್ನಡದಲ್ಲಿ ಮಂತ್ರಿ ಸಂತಾನಂರು

ಕೇಂದ್ರ ಸರಕಾರದ ರೇಲ್ವೆ ಮತ್ತು ಸಾರಿಗೆ ಖಾತೆಯ ಸಹ ಮಂತ್ರಿಗಳಾದ ಶ್ರೀ ಕೆ. ಸಂತಾನಂ ಅವರು ತಾ. ೨೧ ರಂದು ಬೆಳಿಗ್ಗೆ ಮಂಗಳೂರಿಗೆ ಆಗಮಿಸಿ ಜಿಲ್ಲೆಯಲ್ಲಿ ಎರಡು ದಿನಗಳ ಪ್ರವಾಸ ಕಾರ್ಯಕ್ರಮವನ್ನು ಕೈಕೊಂ ಡರು. ಬಂದೊಡನೆಯೇ ಸ್ಥಳೀಯ ಪತ್ರಿಕೋ ದ್ಯೋಗಿಗಳು ಅವರಿಗೆ ಚಹಾಸತ್ಕಾರವಿತ್ತು ಗೌರವಿಸಿದರು. ಆ ದಿನ ಸಂಜೆ ಅವರು ಮಂಗ ಳೂರಿನಿಂದ ಎರಡು ಮೈಲು ದೂರದ ಮರೋಳಿ ಎಂಬಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ ಕೆನರಾ ಕಾರ್ಯಶಾಲೆ ಮತ್ತು ವಿದ್ಯುದುತ್ಪಾದನಾ ಕೇಂದ್ರವನ್ನು ತೆರೆದರು. ಇದಾದ ಮೇಲೆ ಅವರು ಮಂಗಳೂರಿನ ಬಂದರಕ್ಕೆ ಸಂದರ್ಶನ ವಿತ್ತು, ಸಂಜೆ ೭ ಗಂಟೆಗೆ ಕೇಂದ್ರ ಮೈದಾನಿ ನಲ್ಲಿ ಸಾರ್ವಜನಿಕ ಭಾಷಣ ಮಾಡಿದರು. ಅವರು ತಮ್ಮ ಭಾಷಣದಲ್ಲಿ ಜಾತೀಯತೆ, ಮಹಾತ್ಮಾ ಗಾಂಧಿಯವರ ಅಹಿಂಸಾತತ್ವ, ಪ್ರಬುದ್ಧ ಬಂದರ ಮೊದಲಾದ ವಿಷಯಗಳನ್ನು ಹೇಳಿದರು.

ತಾ. ೨೨ ರಂದು ಮಾನ್ಯ ಮಂತ್ರಿಗಳು ಮುಲ್ಕಿ, ಪಡುಬಿದ್ರಿ ಮಾರ್ಗವಾಗಿ ಉಡುಪಿಗೆ ಹೋದರು. ಉಡುಪಿಯಲ್ಲಿ ಅವರನ್ನು ಪ್ರಬುದ್ಧ ಬಂದರ ಸಮಿತಿಯವರು ಮತ್ತು ಕಾಂಗ್ರೆಸ ಸಮಿತಿಯವರು ಸ್ವಾಗತಿಸಿದರು. ಇಲ್ಲಿಯ ನಗರಸಭೆಯವರು ಅವರಿಗೊಂದು ಮಾನಪತ್ರ ವನ್ನು ಅರ್ಪಿಸಿದರು. ಮಾನ್ಯ ಮಂತ್ರಿಗಳು ಮಲ್ಪೆ ಬಂದರ, ಶ್ರೀಕೃಷ್ಣ ದೇವಾಲಯ, ಸೋದೆ ಮಠಗಳಿಗೂ ಸಂದರ್ಶನವಿತ್ತರು.

ಶ್ರೀ ಸಂತಾನಂ ಅವರು ಅದೇ ದಿನ ಕಾರ್ಕಳ, ಮೂಡುಬಿದ್ರಿ ಮಾರ್ಗವಾಗಿ ಮಂಗ ಳೂರಿಗೆ ಹಿಂತಿರುಗಿದರು. ದಾರಿಯಲ್ಲಿ ಅವರು ಬೈಲೂರು ಎಂಬಲ್ಲಿ ಒಂದು ವಾಚನಾಲಯ ವನ್ನು ತೆರೆದರು: ಕಾರ್ಕಳದಲ್ಲಿ ಅವರನ್ನು ಕಾಂಗ್ರೆಸ್ ಸಮಿತಿಯವರು ಸ್ವಾಗತಿಸಿದರು. ಮೂಡುಬಿದ್ರಿಯಲ್ಲಿ ಅವರು ಪುರಾತನ ಜೈನ ದೇವಾಲಯಗಳನ್ನು ಸಂದರ್ಶಿಸಿದರು.

ತಾ. ೨೩ ರಂದು ಮಾನ್ಯ ಮಂತ್ರಿಗಳು ಕೆನರಾ ವಾಣಿಜ್ಯ ಸಂಘದ ವಾರ್ಷಿಕ ದಿನದ ಅಧ್ಯಕ್ಷತೆಯನ್ನು ವಹಿಸಿದರು. ವಾಣಿಜ್ಯಸಂಘದ ಅಧ್ಯಕ್ಷರಾದ ಶ್ರೀ ವಿ. ಎಸ್. ಕುಡ್ವರು ಮಂತ್ರಿಗಳನ್ನು ಸ್ವಾಗತಿಸಿ ಓದಿದ ಭಾಷಣದಲ್ಲಿ ಪ್ರಬುದ್ಧ ಬಂದರ, ರೇಲ್ವೆಯ ವಿಸ್ತರಣ, ಶ್ರಮಜೀವಿಗಳ ಸಮಸ್ಯೆ ಮೊದಲಾದ ವಿಷಯ ಗಳ ಕುರಿತು ಹೇಳಲಾಗಿದೆ.

ಮಾನ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಶ್ರಮಜೀವಿಗಳನ್ನು ಯೋಗ್ಯ ರೀತಿಯಲ್ಲಿ ನಡೆಸಿಕೊಳ್ಳಬೇಕೆಂದೂ ಇಲ್ಲವಾದರೆ ಇನ್ನು ಮುಂದೆ ಅವರನ್ನು ಹಿಡಿತದಲ್ಲಿಟ್ಟುಕೊಳ್ಳು ವದು ಅಸಾಧ್ಯವಾಗಬಹುದೆಂದೂ ಹೇಳಿದರು.

ತಾ ೨೪ ರಂದು ಮಾನ್ಯ ಮಂತ್ರಿಗಳು ಮುಡಿ ಕೇರಿ ಮಾರ್ಗವಾಗಿ ಬೆಂಗಳೂರಿಗೆ ತೆರಳಿದರು.

ಶ್ರೀ ಸಂತಾನಮರು ವಿವಿಧ ಮನವಿಗಳಿಗೆಲ್ಲ ಕೊಟ್ಟ ಉತ್ತರದ ಅಭಿಪ್ರಾಯಗಳು ಹೀಗಿವೆ:–

"ನನಗೆ ಹಿಂದುಸ್ತಾನದಲ್ಲಿರುವ ಎಲ್ಲ ಪ್ರದೇಶಗಳು ಒಂದೆ ಅದುದರಿಂದ ಯಾವ ಸ್ಥಳವು ಬಂದರವಾಗಿ ಆರಿಸಲ್ಪಟ್ಟರೂ ಸಂತೋಷವೇ. ಪ್ರಬುದ್ಧ ಬಂದರ ವಿಚಾರ ದಲ್ಲಿ ಕೇಂದ್ರ ಸರಕಾರವು ನೇಮಿಸಿದ ಬಂದರ ಸಮಿತಿಯ ವರದಿಯನ್ನು ಅನುಸರಿಸ ಲಾಗುವದು." ಮಂಗಳೂರಿಂದ ಬೆಂಗಳೂರು, ಮೈಸೂರು ಮಾರ್ಗವಾಗಿ ಮದ್ರಾಸಿಗೆ ಬಂದು ರೈಲು ದಾರಿಯನ್ನು ಕೆಲವು ವರ್ಷಗಳಲ್ಲಿ ರಚಿಸ ಲಾಗುವುದು. ಮಂಗಳೂರಿನಿಂದ ಉಡುಪಿಗೆ ರೈಲು ದಾರಿಯನ್ನು ರಚಿಸುವ ವಿಷಯವನ್ನೂ ಆಲೋಚಿಸಲಾಗುವುದು. ಮಂಗಳೂರಿನಿಂದ ಉಡುಪಿಗೆ ಹೋಗುವಾಗ ಸಿಗುವ ನದಿಗಳಿಗೆ ಸೇತುವೆಗಳನ್ನು ಹಾಕಲು ಅತಿ ಹೆಚ್ಚು ವೆಚ್ಚ ತಗಲುವದು. ಅದುದರಿಂದ ಈ ಕುರಿತು ಸದ್ಯಕ್ಕೆ ವಿಚಾರಿಸಲಾಗುವದಿಲ್ಲ. ನೇತ್ರಾವತಿ ನದಿಯೂ ಅಂತೇನೆ. ಏನಿದ್ದರೂ ನದಿಗಳಿಗೆ ಸೇತುವೆಗಳನ್ನು ಕಟ್ಟುವ ಪ್ರಶ್ನೆಯು ಪ್ರಬುದ್ಧ ಬಂದರದ ಸ್ಥಾನವನ್ನು ಹೊಂದಿಕೊಂಡಿದೆ. ಈ ಜಿಲ್ಲೆಯಿಂದ ಹಾದು ಹೋಗುವ ಕೇಪ್- ಕೊಮರಿನ್ ರಾಷ್ಟ್ರರಸ್ತೆಯಿಂದ ಜಿಲ್ಲೆಗೆ ಹೆಚ್ಚಿನ ಪ್ರಯೋಜನವಿದೆ. ಇನ್ನು ಜಿಲ್ಲೆಯ ದಕ್ಷಿಣ ದಿಂದ ಉತ್ತರಕ್ಕೆ ಸಮುದ್ರ ಕರಾವಳಿಯಲ್ಲಿ ಒಂದು ಕಾಲುವೆಯನ್ನು ಕಡಿಯುವ ವಿಚಾರ- ಇದರಿಂದ ಸಾರಿಗೆಗೆ ಹೆಚ್ಚಿನ ಪ್ರಯೋಜನವಿದೆ. ಈ ಬಗ್ಗೆ ಸದ್ಯದಲ್ಲೇ ಸರ್ವೆ ನಡೆಯುವದು. ಇದು ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಫಲವನ್ನು ಕೊಡುವ ಕೆಲಸವೂ ಕೂಡ. ಅದುದರಿಂದ ಮಾನ್ಯ ಮಂತ್ರಿಗಳು ಈ ಯೋಜನೆಗೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ.

ಬೆಳಗಾವಿ

ಹಿಂದುಸ್ತಾನ ಸರಕಾರ ಗಣಿ ಶಾಖೆಯ ಮಂತ್ರಿಗಳಾದ ಶ್ರೀ ಗಾಡಗೀಳರು ಸಾಂಗಲಿ ಯಲ್ಲಿಯ ಮಾಡರ್ನ ಶಾಲೆಯ ಶಂಕು ಸ್ಥಾಪನೆ ಯನ್ನು ಮಾಡುವಾಗ ಸ್ವಾತಂತ್ರ್ಯ ಬಂತೆಂದು ಯಾರೂ ನಿಷ್ಕ್ರಿಯರಾಗಿ ಕೊಡ್ರದೆ ನವಭಾರತ ವನ್ನು ನಿರ್ಮಿಸಲು ಸನ್ನದ್ಧರಾಗಬೇಕೆಂದು ಉಪದೇಶಿಸಿದರು. ಮಂತ್ರಿಗಳು ಸಾಂಗಲಿ ಯಲ್ಲಿಯ ಬೇರೆ ಬೇರೆ ಸಂಘ ಸಂಸ್ಥೆಗಳನ್ನು ಸಂದರ್ಶಿಸಿದರು.

ಚಿಕ್ಕೋಡಿಯಲ್ಲಿ ಮೇ ೮ ನೇ ತಾರೀಕಿಗೆ ಚಿಕ್ಕೋಡಿ ತಾಲೂಕ ರೈತ ಪರಿಷತ್ತು ಸಮಾಜ ವಾದಿ ಪಕ್ಷದ ಪರವಾಗಿ ಕೂಡುವದಿದ್ದು ಶ್ರೀ ಸಾನೇ ಗುರೂಜಿಯವರು ಅದರ ಉದ್ಘಾ ಟನ ಮಾಡುವರು.

ಇಂದು ಮೇ ೩ ನೇ ತಾರೀಕಿನ ದಿವಸ ಬೈಲ ಹೊಂಗಲದಲ್ಲಿ ಹಳ್ಳಿಯ ಹಾಡುಗಳ ಮೇಳ ಸಮಾರಂಭವು ವಿಜೃಂಭಣೆಯಿಂದ ಜರುಗು ವದು. ಹಳ್ಳಿಯ ಈ ಹಾಡುಗಳನ್ನೆಲ್ಲ ಗ್ರಾಮೊ ಫೋನಗಳಲ್ಲಿ ರಿಕಾರ್ಡ ಮಾಡುವದಿದ್ದುದ ರಿಂದ ಗ್ರಾಮೊಫೋನ ಕಂಪನಿಯ ಆರ್ಟ ಡಾಯರೆಕ್ಟರರಾದ ಶ್ರೀ ಜಿ. ಎನ್. ಜೋಶಿ ಯವರೂ ಈ ಸಮಾರಂಭಕ್ಕೆ ಬರಲಿರುವರು ಜೋಳದರಾಶಿ ದೊಡ್ಡನಗೌಡರು ಇದರ ಉದ್ಘಾಟನ ಮಾಡುವರು.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ಲೋಕಶಿಕ್ಷಣ ಟ್ರಸ್ಟಿನ ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.